
ಮಕ್ಕಳ ಸಾಹಿತ್ಯ ಮಾಲೆ

# ನಾಟಕಗಳು

ಭಾಗ- ೨

ಸಂಪಾದಕ : ಬೊಳುವಾರು ಮಹಮದ್ ಕುಂಞಿ



ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು

# ಹನ್ನೆರಡು ಮಕ್ಕಳ ನಾಟಕಗಳು

(ಸಂಪುಟ - ೨)

ಸಂಪಾದಕರು
**ಬೊಳುವಾರು ಮಹಮದ್ ಕುಂಞಿ**

ಕರ್ನಾಟಕ ಸರ್ಕಾರ
**ಕನ್ನಡ ಪುಸ್ತಕ ಪ್ರಾಧಿಕಾರ**
ಬೆಂಗಳೂರು-೫೬೦ ೦೦೨

**HANNERADU MAKKALA NATAKAGALU - (VOLUME - 2)** A collection Childrens' Plays, Edited by Bolwar Mahamad Kunhi, Senior Manager (Publicity) SyndicateBank, Corporate Office, Bangalore *and Published by* Mallikarjuna Swamy V.N., Administrative Officer, **Kannada Pustaka Pradhikara,** Kannada Bhavan, J.C. Road, Bangalore - 560 002.

First Impression: 2006
ISBN: 81-7713-197-4
Pages: viii + 108
Copies: 1,000
**Price: Rs.60/-**

© : Respective Writers

ಸಂಪಾದಕ ಮಂಡಲಿ

ಪ್ರಧಾನ ಸಂಪಾದಕರು : ಪ್ರೊ. ಎಸ್. ಜಿ. ಸಿದ್ಧರಾಮಯ್ಯ

ಸಂಪಾದಕರು : ಬೊಳುವಾರು ಮಹಮದ್ ಕುಂಞಿ

ಸದಸ್ಯರು : ಕಂಚ್ಯಾಣಿ ಶರಣಪ್ಪ
ಬಿಳಿಗೆರೆ ಕೃಷ್ಣಮೂರ್ತಿ
ಶರಣಮ್ಮ ಗೊರೆಬಾಳ

*Cover Page :* **Pa. Sa. Kumar**

*Type setting at* **ILA Mudrana**, No. 36, 40 Feet Road, Raghava nagar, Bangalore - 560 026.

*Printed at* **Sreeranga Printers (P) Ltd.**# 517, Samudragupta Maurya Road, Bhavani Nagar, Bangalore - 560 019, Phone: 080-26524757, 26679333 E-mail: sreerangaprinters@yahoo.co.in

# ಹಣತೆ ಹಚ್ಚುತ್ತೇವೆ

ಆಡಿಬಾ ನನ ಕಂದ ಅಂಗಾಲ ತೊಳೆದೇನು

ತೆಂಗಿನಕಾಯಿ ತಿಳಿನೀರ ತಕ್ಕೊಂಡು ನಿನ್ನ

ಬಂಗಾರ ಮೋರೆ ತೊಳೆದೇನು

ಬಾಲ್ಯವೆಂಬುದು ಮಗುವಿನ ಬೆಳವಣಿಗೆಯಲ್ಲಿ ಪವಿತ್ರವಾದ ಹಾಗೂ ಅಮೂಲ್ಯವಾದ ಅನುಭವ ವಿಶೇಷ. ಮನೋವಿಜ್ಞಾನಿಗಳ ಪ್ರಕಾರ ಮಕ್ಕಳ ಲೋಕ ಗ್ರಹಿಕೆ ಸುಮಾರು ನಾಲ್ಕೈದು ವರ್ಷಗಳಿಂದ ಮೊದಲ್ಗೊಂಡು ಹದಿನಾಲ್ಕು ಹದಿನೈದು ವರ್ಷಗಳ ಅವಧಿಯಲ್ಲಿ ತುಂಬ ತೀಕ್ಷ್ಣ ಹಾಗೂ ಸೂಕ್ಷ್ಮವಾಗಿರುತ್ತದೆ. ಪರಿಸರ ಭಾಷೆ ಅರ್ಥಾತ್ ಮಾತೃಭಾಷೆ ಇಲ್ಲಿ ಪ್ರಧಾನ ಪಾತ್ರವಹಿಸುತ್ತದೆ.

ಮಕ್ಕಳಿಗೆ ಸರಿಯಾದ ಶಿಕ್ಷಣ ನೀಡಬೇಕಾದ್ದು ಸಮಾಜದ ಆದ್ಯ ಕರ್ತವ್ಯ. ಮನುಷ್ಯನ ದುರಾಸೆ ಪೈಪೋಟಿ ಹೋಲಿಕೆಗಳ ದಾಳಿಗೆ ಮಕ್ಕಳು ಪ್ರಯೋಗಪಶುಗಳಾಗಬಾರದು. ಒತ್ತಡದ ಶಿಕ್ಷಣಕ್ಕೆ ಒಳಗುಮಾಡಿ ಅವರ ಸೃಜನಶಕ್ತಿಯನ್ನು ಮುರುಟಿಸಬಾರದು. ಬಾಲ್ಯಾನುಭವದ ಸುಮಧುರತೆ ಹಾಳಾಗಬಾರದು. ಕಲಿಕೆ ಪ್ರಯಾಸದ ಶಿಕ್ಷೆಯಾಗದೆ ನಲಿಯುತ್ತಾ ಗ್ರಹಿಸುವ ವಿಕಾಸಶೀಲ ಗತಿಯಾಗಬೇಕು.

ಕನ್ನಡ ಮಕ್ಕಳ ಮನಸ್ಸನ್ನು ಬೆಳೆಸುವ ಕೈಂಕರ್ಯದಲ್ಲಿ ನಾಡಿನ ಹಲವು ಜನ ಪೂರ್ವಸೂರಿಗಳು ಮಕ್ಕಳಿಗಾಗಿ ಗುಣಾತ್ಮಕ ಸಾಹಿತ್ಯ ರಚನೆ ಮಾಡಿದ್ದಾರೆ. ಸರಳ ಸುಂದರ ಸುಲಲಿತವಾದ ಆ ರಚನೆಗಳು ಬಾಲ್ಯದ ಮನಸ್ಸಿಗೆ ಮುದ ನೀಡುವುದಷ್ಟೇ ಅಲ್ಲದೆ ಮಾನವೀಯ ಜೀವನ ಮೌಲ್ಯಗಳನ್ನು ಕುಸುಮಗಂಧದ ಪರಿಯಲ್ಲಿ ಅರಿವಿಗೆ ಮುಟ್ಟಿಸುತ್ತವೆ. ಪೂರ್ವಸೂರಿಗಳ ಈ ಹಾದಿಯನ್ನು ಅನುಸರಿಸಿದಂತೆ ಅನಂತರದ ಹಲವು ಕನ್ನಡ ಮನಸ್ಸುಗಳು ತಮ್ಮ ಭಾವನೆ,

ಆಲೋಚನೆಗಳನ್ನು ಮಗುಸಹಜ ಭಾವಗತಿಯಲ್ಲಿ ಹರಿಯ ಬಿಟ್ಟಿವೆ. ಕನ್ನಡ ಮಕ್ಕಳ ಮನಸ್ಸನ್ನು ಆರೋಗ್ಯಕರ ಭಾವದಲ್ಲಿ ಬೆಳಸುವ ಇಂಥ ಸಾಹಿತ್ಯವನ್ನು ಸಂಕಲಿಸಿ, ಕರ್ನಾಟಕದ ಎಲ್ಲ ಭಾಗದ ಮಕ್ಕಳಿಗೂ ಸುಲಭವಾಗಿ ತಲುಪುವಂತೆ ಮಾಡಬೇಕೆಂಬುದು ಕನ್ನಡ ಪುಸ್ತಕ ಪ್ರಾಧಿಕಾರದ ಹೆಬ್ಬಯಕೆ. ಅದರ ಫಲ ಈ ಮಕ್ಕಳ ಪುಸ್ತಕ ಮಾಲೆ. ಈ ಮಾಲೆಯಲ್ಲಿ ಕವಿತೆ, ನಾಟಕ, ಕಾದಂಬರಿ, ವ್ಯಕ್ತಿಚಿತ್ರ, ಪ್ರವಾಸ ಕಥನಗಳನ್ನು ಒಳಗೊಂಡ ಪುಸ್ತಕಗಳು ಪ್ರಕಟವಾಗುತ್ತಿವೆ.

ಮಕ್ಕಳ ನಾಟಕಗಳನ್ನು ಮೂರು ಸಂಪುಟಗಳಲ್ಲಿ ಸಂಪಾದಿಸಲಾಗಿದೆ. ಇವುಗಳಲ್ಲಿ ಒಟ್ಟು ಹನ್ನೆರಡು ನಾಟಕಗಳಿವೆ. ಎಲ್ಲವನ್ನೂ ಒಟ್ಟಿಗೆ ಒಂದೇ ಸಂಪುಟದಲ್ಲಿ ಸೇರಿಸಿ ಪ್ರಕಟಿಸಬಹುದಿತ್ತು. ಆದರೆ, ಮಕ್ಕಳ ಮನೋಧರ್ಮಕ್ಕೆ ಬೃಹತ್ತಿನ ಭಾರಕ್ಕಿಂತ ಸಣ್ಣದು ಸದಾ ಸುಂದರವೆಂಬ ತತ್ವ ಹೆಚ್ಚು ಹೊಂದುತ್ತದೆ. ಮಕ್ಕಳ ಕಲ್ಪನೆ ಭಾವನೆ ಆಲೋಚನೆಗಳನ್ನು ವಿಸ್ತರಿಸುವ ನಿಟ್ಟಿನಲ್ಲಿ ಈ ಮಾಲೆಯಲ್ಲಿನ ನಾಟಕಗಳ ಕೊಡುಗೆ ಅಪಾರವಾದುದು. ನಾಟಕಗಳನ್ನು ಮಾಲೆಯಲ್ಲಿ ಸೇರಿಸಿಕೊಳ್ಳಲು ಅನುಮತಿ ನೀಡಿದ ನಾಟಕಕಾರರಿಗೂ ವಾರೀಸುದಾರರಿಗೂ ಸುಂದರವಾಗಿ ಮುಖಪುಟ ರಚಿಸಿಕೊಟ್ಟ ಕಲಾವಿದ ಪ.ಸ. ಕುಮಾರ್ ಅವರಿಗೂ ಆತ್ಮೀಯ ಕೃತಜ್ಞತೆಗಳು. ಕನ್ನಡ ಪುಸ್ತಕ ಪ್ರಾಧಿಕಾರವು ಯೋಜಿಸಿದ ಈ ಮಕ್ಕಳ ಸಾಹಿತ್ಯ ಮಾಲೆಯ ಸಂಪಾದಕತ್ವವನ್ನು ವಹಿಸಿಕೊಂಡು ತುಂಬಾ ಸಮರ್ಥವಾಗಿ ಈ ಕೈಂಕರ್ಯವನ್ನು ಆಗುಮಾಡಿಕೊಟ್ಟ ಬೊಳುವಾರು ಮಹಮದ್ ಕುಂಞ ಅವರಿಗೂ ಅವರ ಸಂಗಡ ಸದಸ್ಯರಾಗಿ ಸಹಕರಿಸಿದ ಹಿರಿಯರಾದ ಶ್ರೀ ಕಂಚ್ಯಾಣಿ ಶರಣಪ್ಪ ಡಾ|| ಶರಣಮ್ಮ ಗೊರೆಬಾಳ, ಪ್ರೊ|| ಕೃಷ್ಣಮೂರ್ತಿ ಬಿಳಿಗೆರೆ ಇವರಿಗೂ ಪ್ರಾಧಿಕಾರದ ಆತ್ಮೀಯ ಕೃತಜ್ಞತೆಗಳು. ಮಕ್ಕಳ ಸಾಹಿತ್ಯ ಮಾಲೆಯ ಎಲ್ಲ ಪುಸ್ತಕಗಳ ಕರಡು ತಿದ್ದುವಲ್ಲಿ ಹೆಚ್ಚಿನ ಆಸ್ಥೆ ವಹಿಸಿ ಸಹಕರಿಸಿದ ಪ್ರೊ|| ಕೆ.ಆರ್. ಗಣೇಶ್ ಅವರಿಗೆ ಸಲಹೆ ಸೂಚನೆಗಳ ಸಹಕಾರ ನೀಡಿದ ಹಿರಿಯರಾದ ಪ್ರೊ|| ಚಿ. ಶ್ರೀನಿವಾಸರಾಜು ಅವರಿಗೆ ಡಿ.ಟಿ.ಪಿ. ಮಾಡಿದ ಇಳಾ ಮುದ್ರಣ, ಮುದ್ರಿಸಿದ ಶ್ರೀರಂಗ ಪ್ರಿಂಟರ್ಸ್ – ಇವರಿಗೆ ಈ ಯೋಜನೆಯ ಯಶಸ್ಸಿಗೆ ಸಹಕರಿಸಿದ ಆಗಿನ ಆಡಳಿತಾಧಿಕಾರಿ ಶ್ರೀ ಎನ್. ತಿಪ್ಪೇಸ್ವಾಮಿ ಮತ್ತು ಸಿಬ್ಬಂದಿ ಬಳಗದವರಿಗೆ ಹಾಗೂ ಕನ್ನಡ ಪುಸ್ತಕ ಪ್ರಾಧಿಕಾರದ ಸರ್ವಸದಸ್ಯ ಮಿತ್ರರಿಗೆ ಆತ್ಮೀಯ ಕೃತಜ್ಞತೆಗಳು.

**ಪ್ರೊ|| ಎಸ್.ಜಿ. ಸಿದ್ಧರಾಮಯ್ಯ**
ಅಧ್ಯಕ್ಷರು
ಕನ್ನಡ ಪುಸ್ತಕ ಪ್ರಾಧಿಕಾರ

# ಸಂಪಾದಕರ ಮಾತು

ಕನ್ನಡದ ಮಕ್ಕಳ ವ್ಯಕ್ತಿತ್ವ ವಿಕಾಸ ಹಾಗೂ ಸ್ವಯಂ ಪರಿಪೂರ್ಣತೆಗೆ ಅಗತ್ಯವಾದ ಉತ್ತಮ ಗುಣಮಟ್ಟದ 'ಮಕ್ಕಳ ಸಾಹಿತ್ಯ' ವನ್ನು ೧೦-೧೨ ಆಕರ್ಷಕ ಸಂಪುಟಗಳಲ್ಲಿ ಪ್ರಕಟಿಸಬೇಕೆಂಬುದು, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾಗಿರುವ ಪ್ರೊ. ಎಸ್.ಜಿ. ಸಿದ್ಧರಾಮಯ್ಯನವರ ಆಸೆಯಾಗಿತ್ತು. ಅವರ ಆಸೆಯು ಹೆಚ್ಚುಕಮ್ಮಿ ನನ್ನದೇ ಆಗಿದ್ದುದರಿಂದ, ಕಳೆದೊಂದು ವರ್ಷದ ಅವಧಿಯಲ್ಲಿ ಕತೆ, ಕಾದಂಬರಿ, ಕವನ, ನಾಟಕ, ಪ್ರವಾಸ ಕಥನ, ವ್ಯಕ್ತಿಚಿತ್ರ-ಹೀಗೆ ಮಕ್ಕಳ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ನಾನು ಆಯ್ದು, ಸಂಪಾದಿಸಿ ಸಿದ್ಧಗೊಳಿಸಿದ ಕೃತಿಗಳಲ್ಲಿ, ಪ್ರಸ್ತುತ ಪುಸ್ತಕವು **'ಮಕ್ಕಳ ನಾಟಕ'ಗಳ ಎರಡನೆಯ ಸಂಪುಟವಾಗಿದೆ.** ಈ ಸಂಪುಟದಲ್ಲಿ ಅಡಕಗೊಂಡಿರುವ ನಾಲ್ಕೂ ನಾಟಕಗಳು, ಇದುವರೆಗೆ ಸಾವಿರಾರು ಮಕ್ಕಳು ಆಡಿ ಅಭಿನಯಿಸಿ ಸಂತೋಷಪಟ್ಟ ಬಹುಜನಪ್ರಿಯ ಮಕ್ಕಳ ನಾಟಕಗಳೇ ಆಗಿವೆ.

ಆಧುನಿಕ ಮಕ್ಕಳ ರಂಗಭೂಮಿಗೆ ಹೊಸದಾರಿಯನ್ನೇ ತೋರಿದ ಬಿ.ವಿ.ಕಾರಂತರ **'ಪಂಜರ ಶಾಲೆ'** ಮಕ್ಕಳ ನಾಟಕವು ವಿಶ್ವಮಾನ್ಯ ಕವಿ ರವೀಂದ್ರನಾಥ ಟಾಗೋರರ ಸಣ್ಣಕಥೆಯೊಂದನ್ನು ಆಧರಿಸಿದೆ. ಪ್ರಸ್ತುತ ಶಿಕ್ಷಣ ಪದ್ಧತಿಯನ್ನು ತೀವ್ರವಾಗಿ ವಿಡಂಬಿಸುತ್ತಲೇ ಮಕ್ಕಳ ರಂಗಭೂಮಿಯ ಅಸಾಧಾರಣ ಸಾಧ್ಯತೆಗಳನ್ನು ಪ್ರಾಯೋಗಿಕವಾಗಿ ಪರೀಕ್ಷಿಸುವ ಅಸಾಮಾನ್ಯ 'ಮಕ್ಕಳ ನಾಟಕ' ಇದು. ಏಕ ಕಾಲದಲ್ಲಿ ನೂರಕ್ಕಿಂತಲೂ ಹೆಚ್ಚು ಮಕ್ಕಳು ಕೇಕೆ ಹಾಕಿ, ಹಾಡಿ, ಕುಣಿದು, ಕುಪ್ಪಳಿಸಿ ಅಭಿನಯಿಸಿ ಸಂತೋಷ ಪಡಬಹುದಾದ ನಾಟಕ ಪಂಜರ ಶಾಲೆ. ಮಕ್ಕಳ ಸಾಹಿತ್ಯಲೋಕದಲ್ಲಿ ಅನನ್ಯ ಸಾಧನೆ ಮಾಡಿರುವ ಪಂಜೆ ಮಂಗೇಶರಾಯರ 'ಒಡ್ಡನ ಓಟ' ಕಥೆಯನ್ನಾಧರಿಸಿ, ಮಕ್ಕಳರಂಗಭೂಮಿಯೊಂದನ್ನೇ ನೆಚ್ಚಿಕೊಂಡಿರುವ ಐ. ಕೆ. ಬೊಳುವಾರು ಬರೆದ ಜನಪ್ರಿಯ ಮಕ್ಕಳ ನಾಟಕ **'ಮುದುಕ ಸೆಟ್ಟಿಯೂ ಮೂವರು ಮಕ್ಕಳೂ'.** ಮೂಲ ಕಥೆಯನ್ನು ಅಲ್ಪಸ್ವಲ್ಪ ಬದಲಾವಣೆಯ ಮೂಲಕ ಪ್ರಸ್ತುತ ಸಾಮಾಜಿಕ ಸಂದರ್ಭಕ್ಕೆ ಒಗ್ಗಿಸಿಕೊಂಡು ರಚಿಸಲಾಗಿರುವ ಈ ನಾಟಕವು, ಆಡಿ ಅಭಿನಯಿಸುವ ಮಕ್ಕಳಿಗೂ ನೋಡುಗರಿಗೂ ಹೊಸ ನೋಟ ನೀಡುತ್ತದೆ. ತಮ್ಮ ಹನಿಗವನಗಳ ಮೂಲಕ ಕನ್ನಡ ಭಾಷೆಗೇ ಕಚಗುಳಿಯಿಟ್ಟ ಡುಂಡಿರಾಜರು ಮಕ್ಕಳಿಗಾಗಿಯೇ ಬರೆದ **'ಅಜ್ಜಿಕಥೆ'** ಒಂದು ಸುಂದರವಾದ ಸ್ತ್ರೀವಾದೀ ರಂಗಕೃತಿ. ಮಕ್ಕಳ ಹಕ್ಕುಗಳ ಬಗ್ಗೆ ಲಲವಿಕೆಯಿಂದ ಮಾತನಾಡುವ ನಾಟಕದ ಪಾತ್ರಗಳು ಹೆಣ್ಣುಮಕ್ಕಳ ಪರವಾದ ಕಾಳಜಿ ವಹಿಸಿರುವುದು ಈ ನಾಟಕದ ವಿಶೇಷ. ಮಕ್ಕಳ ನಾಟಕಗಳ ಕುರಿತಾಗಿ ಆಳವಾದ ಅಧ್ಯಯನ ನಡೆಸಿರುವ ಶ್ರೀ ಗಜಾನನ ಶರ್ಮ ಬರೆದಿರುವ ವಿಶಿಷ್ಟ ಬಗೆಯ ನಾಟಕ **'ಗೊಂಬೆ ರಾವಣ'.** ರಾಮಾಯಣದಲ್ಲಿ ಬರುವ ಜನಪ್ರಿಯ ಪಾತ್ರಗಳು ಮಕ್ಕಳ ಆಟದ ನಡುವೆಯೇ ಬೆರೆತು ಅನಾವರಣಗೊಳ್ಳುವ ವಿಶೇಷ ತಂತ್ರ ಈ ನಾಟಕದಲ್ಲಿ ಪರಿಣಾಮಕಾರಿಯಾಗಿ ಮೂಡಿ ಬಂದಿದೆ.

ಈ ಕೃತಿಯನ್ನು ಸಿದ್ಧಗೊಳಿಸುವ ಸಂದರ್ಭದಲ್ಲಿ, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಪ್ರೊ. ಎಸ್.ಜಿ. ಸಿದ್ಧರಾಮಯ್ಯನವರ ಹಿರಿತನದಲ್ಲಿ ನೇಮಕಗೊಂಡ ಸಂಪಾದಕ ಮಂಡಳಿಯ ಸದಸ್ಯರಾದ ಶ್ರೀ ಕಂಚ್ಯಾಣಿ ಶರಣಪ್ಪ, ಶ್ರೀ ಕೃಷ್ಣಮೂರ್ತಿ ಬಿಳಗೆರೆ, ಶ್ರೀಮತಿ ಶರಣಮ್ಮ ಗೊರೆಬಾಳ ಇವರು ನೀಡಿದ ಮಾರ್ಗದರ್ಶನಕ್ಕೆ ನಾನು ಋಣಿ. ಈ ನಾಟಕಗಳನ್ನು ಪ್ರಸ್ತುತ ಸಂಪುಟದಲ್ಲಿ ಸೇರಿಸಿ ಪ್ರಕಟಿಸಲು ಅನುಮತಿ ನೀಡಿದ ಲೇಖಕ/ವಾರೀಸುದಾರರಿಗೂ, ಈ ಕೃತಿಯ ಸಂಪಾದನೆಯಲ್ಲಿ ಸಲಹೆ ಸಹಕಾರ ನೀಡಿದ ಸಾಹಿತಿ ಗೆಳೆಯರಿಗೂ ನಾನು ಕೃತಜ್ಞ.

**ಬೊಳುವಾರು ಮಹಮದ್ ಕುಂಞಿ**

ಬೆಂಗಳೂರು
ಆಕ್ಟೋಬರ ೨, ೨೦೦೫

# ಪರಿವಿಡಿ


೧. ಪಂಜರ ಶಾಲೆ / *ಬಿ.ವಿ. ಕಾರಂತ* ... ೧

೨. ಮುದುಕ ಸೆಟ್ಟಿಯೂ ಮೂವರು ಮಕ್ಕಳು / *ಐ.ಕೆ. ಬೊಳುವಾರು* ... ೩೧

೩. ಅಜ್ಜಿಕತೆ / *ಎಚ್. ಡುಂಡಿರಾಜ್* ... ೪೭

೪. ಗೊಂಬೆ ರಾವಣ / *ಡಾ. ಗಜಾನನ ಶರ್ಮ* ... ೭೫

# ಪಂಜರ ಶಾಲೆ

ಬಿ.ವಿ. ಕಾರಂತ

## ಪಾತ್ರಗಳು

ಗಿಳಿಮರಿ
ಗಿಳಿಗಳು
ರಾಜ
ಮಂತ್ರಿ
ಅಳಿಯ
ಪ್ರಶಂಸಕರು
ನಿಂದಕರು
ಡಂಗುರದವರು
ವಂದಿಮಾಗಧರು
ನಾಗರಿಕರು
ಕುಶಲಕರ್ಮಿಗಳು
ಕಾರ್ಮಿಕರು
ಸಖಿಯರು
ಪಂಡಿತರು
ನಿರೀಕ್ಷಕರು
ನರ್ತಕಿಯರು
ಗಾಯಕಿಯರು
ಉದ್ಯಾನ ರಕ್ಷಕರು
ಅಂಗರಕ್ಷಕರು
ಇತ್ಯಾದಿ.

# ಪಂಜರ ಶಾಲೆ

(ವಸಂತದ ವೈಭವ; ರಾಜೋದ್ಯಾನ. ಹಿನ್ನೆಲೆಯಲ್ಲಿ ಆಲಾಪ, ಅನಂತರ)

ಹಿನ್ನೆಲೆ ಹಾಡು : ದೂರ ದೂರ ದೂರ ಗಗನಕೆ
ದೂರ ದೂರ ದೂರ ದೂರ ಕ್ಷಿತಿಜಕೆ
ಹಾರೋಣ ಬಾ.... ಹಾರೋಣ ಬಾ....

(ಹಿನ್ನೆಲೆಯ ಹಾಡಿಗೆ ಗಿಳಿಗಳು ತಂಡತಂಡವಾಗಿ ಹಾರುತ್ತ ಕುಣಿಯುತ್ತ ಪ್ರವೇಶಿಸುವುವು. ಹಣ್ಣುಗಳನ್ನು ತಿನ್ನುತ್ತ ಸ್ವೇಚ್ಛೆಯಾಗಿ ವಿಹರಿಸುವುವು. ಅದಕ್ಕೆ ಹೊಂದಿ–)

ಹಿನ್ನೆಲೆ ಹಾಡು : ಗರಿಗಳ ಕೆದರಿ ಚುಂಚುವ ಚಾಚಿ
ಬೆಟ್ಟ ತಪ್ಪಲು ಅಡವೀ ಬಯಲು
ದಾಟಿ ದೂರ ದೂ...ರ...ಹಾರೋಣ ಬಾ...

ಕೆರೆಕೊಳ ಸರೋವರ ನದಿನದ ಸಾಗರ
ಮೂಡಲು ಪಡವಲು ತೆಂಕು ಬಡಗು
ತಿರುಗು ತಿರುಗಿ ದೂ....ರ...ಹಾರೋಣ ಬಾ....

ಗಿಡದಿಂ ಹಣ್ಣನು ತಿಂದು ತೊರೆಯಿಂ ನೀರನು ಕುಡಿದು
ಆಕಾಶ ಛತ್ರಿ ಗಾಳಿಯ ತೇರು
ಏರಿ ಏರಿ ದೂ...ರ...ಹಾರೋಣ ಬಾ.....

(ಗಿಳಿವಿಂಡಿ ವಿಹರಿಸಿ ಹೊರಡಲು ಸಿದ್ಧವಾಗುತ್ತಿರುವಷ್ಟರಲ್ಲಿ ಒಂದು ಗಿಳಿಮರಿ ಹಣ್ಣು ತೂಗಿ ಬಾಗಿದ ಗಿಡವೊಂದನ್ನು ಕಂಡು ಸಂತೋಷದಿಂದ ಹುಚ್ಚೆದ್ದು ಕೂಗುವುದು.)

ಗಿಳಿಮರಿ : ಬನ್ನಿ ಬನ್ನಿ, ಮಧುಫಲ ತಿನ್ನಿ. ಬೇಗ, ಹಾರಿ ಬನ್ನಿ.

(ಅಲ್ಲಿವರೆಗೆ ನಿದ್ರೆ ಮಾಡುತ್ತಿದ್ದ ಉದ್ಯಾನ ರಕ್ಷಕರು ಕೂಗಿಗೆ ಎಚ್ಚೆತ್ತು ಓಡಿ ಬರುವರು.)

ರಕ್ಷಕರು : ಹಿಡಿಯಿರಿ, ಬಡಿಯಿರಿ, ಹಣ್ಣುಗಳ್ಳರನ್ನು ಬಡಿದೋಡಿಸಿರಿ.

(ಗಿಳಿವಿಂಡು ಹೆದರಿ ಚೆಲ್ಲಾಪಿಲ್ಲಿ ಓಡತೊಡಗುವುವು. ರಕ್ಷಕರು ಕೋಲಿನಿಂದ ನೆಲ ಬಡಿಯುತ್ತ ಅಟ್ಟಿಸುವರು.)

ರಕ್ಷಕ ೧ : ಹಾಂ, ಸದೆಬಡಿಯಿರಿ, ಬಿಡಬೇಡಿ. ಒಂದು ಪಿಳ್ಳೆಯೂ ಹಾರಿ ಹೋಗದಿರಲಿ.

(ರಕ್ಷಕರ ಕೈಗಾಗಲೀ ಬಲೆಗಾಗಲೀ, ಸಿಕ್ಕದೇ ಗಿಳಿಗಳು ತಪ್ಪಿಸಿಕೊಂಡು ಹಾರಿ ಹೋಗುವುವು.

ರಕ್ಷಕರು ಮೇಲುಸಿರು ಬಿಡುತ್ತ ಕೂತುಕೊಳ್ಳುವರು. ಮರಿ ಗಿಳಿಯೊಂದು ಮಾತ್ರ ಪರಿವೆಯೇ ಇಲ್ಲದೆ ಹಣ್ಣು ತಿನ್ನುವುದರಲ್ಲಿ ಮಗ್ನವಾಗಿದೆ.)

ಗಿಳಿಮರಿ : ಅಣ್ಣ, ಅಮ್ಮ, ಬನ್ನಿ ಬನ್ನಿ, ಟೇಂ ಟೇಂ. ಚಿಕ್ಕಪ್ಪ ದೊಡ್ಡಪ್ಪ, ಹಣ್ಣು ತಿನ್ನಿ. ಟೇಂ ಟೇಂ. ಎಲ್ಲಾ ಹಣ್ಣೂ ನಮ್ದೇ ನಮ್ದೇ ಎಲ್ಲಾ ಹಣ್ಣು....ಟೇಂ ಟೇಂ...

(ದಣಿದು ಕೂತ ರಕ್ಷಕರ ಕಿವಿ ನೆಟ್ಟಗಾಗುವುದು, ಹುಡುಕಲು ಪ್ರಾರಂಭಿಸುವರು)

ರಕ್ಷಕ ೧ : ಹಣ್ಣುಗಳ್ಳ ಇಲ್ಲೇ ಎಲ್ಲೋ ಇದ್ದಾನೆ, ಹುಡುಕೋ ಹುಡುಕೋ

(ಹುಡುಕುವರು.)

ಗಿಳಿಮರಿ : ಟೇಂ ಟೇಂ... ಬನ್ನಿ ಬನ್ನಿ...

ರಕ್ಷಕ ೨ : ಅಕೋ ! ತೋಟಗಳ್ಳ ಕೊನೆಗೂ ಸಿಕ್ಕ ! ಹಿಡಿಯೋ ಬಡಿಯೋ!

(ರಕ್ಷಕರು ಗಿಳಿಯನ್ನು ಸುತ್ತುಗುಟ್ಟುವರು.)

ರಕ್ಷಕ ೧ : ರಾಜನ ತೋಟ ಹಾಳು ಮಾಡ್ತೀ?

ರಕ್ಷಕ ೨ : ದೊರೇ ತೋಟದ ಹಣ್ಣು ತಿನ್ತೀ?

ರಕ್ಷಕ ೧ : ಇವತ್ತು ನಿನಗೆ ಕೋಲುಪೂಜೆ !

ರಕ್ಷಕ ೨ : ಕಿತ್ತು ಬಿಡೋಣ ರೆಕ್ಕೆ ಪುಕ್ಕ !

ರಕ್ಷಕ ೧ : ಮೂರ್ಖರ ಮೂರ್ಖ ಗಿಳಿಯಪ್ಪ!

ರಕ್ಷಕ ೨ : ಹೆಡ್ಡರ ಹೆಡ್ಡ ತುಡುಗಪ್ಪ !

ರಕ್ಷಕ ೧ : ಮುಗೀತು ಇವತ್ತು ನಿನ್ನ ಕಥೆ !

ರಕ್ಷಕ ೨ : ತಿನ್ನೋದು ನಿಲ್ಸೋ ಗಿಳಿಪಿಳ್ಳೆ !

ರಕ್ಷಕ ೧ : ಗೊತ್ತೇ ನಿನಗೆ ತೋಟ ಯಾರದು !

ರಕ್ಷಕ ೨ : ನಿಮ್ಮ ತಾತಂದೇ?

ರಕ್ಷಕ ೧ : ನಿಮ್ಮಪ್ಪಂದೇ?

ರಕ್ಷಕ ೨ : ನಮ್ಮ ರಾಜಂದು !

ರಕ್ಷಕ ೧ : ಈ ಮರ ಈ ಗಿಡ, ಹೂವು ಹಣ್ಣು...

ರಕ್ಷಕ ೨ : ಎಲ್ಲಾ ನಮ್ಮ ರಾಜಂದು !

ರಕ್ಷಕ ೧ : ಎಂಥಾ ರಾಜ ಗೊತ್ತೇ ನಿಂಗೆ? ರಾಜಾಧಿರಾಜ !

ರಕ್ಷಕ ೨ : ಸಾವಿರ ಸಾವಿರ ಸೇನೆಯ ರಾಜ!

ಗಿಳಿಮರಿ : ಬನ್ರೋ, ಬನ್ರೋ, ನಮ್ಮದು ಹಣ್ಣು. ನಮ್ಮದು ತೋಟ. ಹಣ್ಣು ತಿನ್ನೋವನದೇ ಹಣ್ಣಿನ ತೋಟ !

ರಕ್ಷಕ ೧ : ಏ ಮರಿಪಿಳ್ಳೆ, ರಾಜನ ಭಯ ಇಲ್ವೇನೋ ನಿಂಗೆ?

ರಕ್ಷಕ ೨ : ರಾಜಂದು ಹೋಗ್ಲಿ, ನಮ್ಮ ಭಯಾನೂ ಇಲ್ವೇನೋ?

ರಕ್ಷಕ ೧ : ಹೋಗ್ಲಿ. ಈ ಕೋಲಿನ ಭಯ?

ರಕ್ಷಕ ೨ : ಹಿಡಿಯೋ, ಬಲೆ ಹಾಕೋ.

(ಬಲೆ ಬೀಸುವರು, ಗಿಳಿಮರಿ ಬಲೆಯೊಳಗೆ ಸಿಕ್ಕಿಬೀಳುವುದು.)
(ನೇಪಥ್ಯದಲ್ಲಿ ವಂದಿಮಾಗಧರ ಧ್ವನಿ. ಕ್ರಮೇಣ ಅವರು ರಂಗವನ್ನು ಪ್ರವೇಶಿಸುವರು.)

ವಂದಿಗಳು : ಸಾವಧಾನ, ಸಾವಧಾನ... ಮಹಾಕರುಣಾಳು ಖಗಮೃಗಕೃಪಾಳು ಗಿಡಮರ ದಯಾಳು ವಿದ್ಯಾವತಂಸ ಪ್ರಜ್ಞಾವಧಾನಿ ಕಣಕಣಕೂ ವಿದ್ಯಾದಾನಿ ವಾಚಾಳಪುರವರಾಧೀಶ್ವರ ರಾಜಾಧಿರಾಜ ರಾಜಮಾರ್ತಾಂಡರು ದಯಮಾಡಿಸುತ್ತಿದ್ದಾರೆ, ಭೋ ಪರಾಕ್.....

(ಗಿಳಿಮರಿ ಬಿಡಿಸಿಕೊಳ್ಳಲು ಒದ್ದಾಡುತ್ತಿದೆ, ಟೇಂ ಟೇಂ ಎಂದು ಕಿರಿಚುತ್ತದೆ. ಅಷ್ಟರಲ್ಲಿ ರಾಜ, ಮಂತ್ರಿ, ರಾಜನ ಅಳಿಯ ಪ್ರವೇಶಿಸುವರು.)

ಗಿಳಿಮರಿ : ಟೇಂ...ಟೇಂ....

ರಾಜ : (ಆಶ್ಚರ್ಯದಿಂದ) ಇದೇನು ಒದರುತ್ತಿದೆ?

ಗಿಳಿಮರಿ : ಟೇಂ...

ರಾಜ : ಯಾವ ಭಾಷೆ ಮಾತಾಡ್ತಾ ಇದೆ? ಪ್ರಾಕೃತ ಭಾಷೆ? ಪಿಶಾಚ ಭಾಷೆ?

ಗಿಳಿಮರಿ : ಟೇಂ...

ರಾಜ : (ರೇಗಿ, ಮಂತ್ರಿಯ ಕಡೆ) ಏನಿದರ ಅರ್ಥ?

ವಂದಿಗಳು : ಟೇಂ.... (ಮಂತ್ರಿ ಸನ್ನೆ ಮಾಡಲು ಗಪ್ಪನೆ ಬಾಯಿಮುಚ್ಚುವರು.)

ಮಂತ್ರಿ : ರಾಜಾಧಿರಾಜ, ಇದೊಂದು ಗಿಳಿಮರಿ. ಕಾಡುಜಾತಿ, ಅನಾಗರಿಕ. ವಸಂತ ಕಾಲಕ್ಕೆ ಮದ ಹತ್ತಿ ರಾಜತೋಟಕ್ಕೆ ನುಗ್ಗಿ ಹಣ್ಣು ಹಂಪಲುಗಳನ್ನು ನಾಶಪಡಿಸಿದೆ.

ರಾಜ : ಇದಕ್ಕೆ ಮಾತು ಬರುತ್ತದೆಯೆ?

ಮಂತ್ರಿ : ಇಲ್ಲ.

ರಾಜ : ಹಾಡು ಬರುತ್ತದೆಯೆ?

ಮಂತ್ರಿ : ಇಲ್ಲ.

ರಾಜ : ಓದು ಬರುತ್ತದೆಯೆ?

ಮಂತ್ರಿ : ಇಲ್ಲ.

ರಾಜ : ನೃತ್ಯ ಬರುತ್ತದೆಯೆ?

ಮಂತ್ರಿ : ಇಲ್ಲ.

ರಾಜ : ತರ್ಕ, ಶಾಸ್ತ್ರ, ಪುರಾಣ, ವ್ಯಾಕರಣ?

ಮಂತ್ರಿ : ಯಾವುದೂ ಬರೋದಿಲ್ಲ.

ರಾಜ : ಮತ್ತೇನು ಬರುತ್ತದೆ? ಜೀವನವೆಲ್ಲ ಏನು ಮಾಡುತ್ತದೆ?

ಗಿಳಿಮರಿ : ಟೇಂ...ಟೇಂ...

ಮಂತ್ರಿ : ಮಹಾಪ್ರಭು, ಈ ಗಿಳಿ ಅರಣ್ಯವಾಸಿ, ನಿರಕ್ಷರಕುಕ್ಷಿ: ತೀರಾ ಅಸಂಸ್ಕೃತ. ಸಂಗೀತವಿಲ್ಲ, ನೃತ್ಯವಿಲ್ಲ, ಗದ್ಯಪದ್ಯದ ಭೇದ ಗೊತ್ತಿಲ್ಲ. ಒಂದು ಎರಡರ ಮಗ್ಗಿ ಕೂಡಾ ಬರೋದಿಲ್ಲ. ಇದಕ್ಕೆ ಬರೋದು ಒಂದೇ–ಗಿಡಮರ ಹತ್ತಿ ಕೊಂಬೆ ಮುರಿದು ಹಣ್ಣು ತಿನ್ನೋದು, ಉದುರಿಸೋದು, ಆಮೇಲೆ...

ಗಿಳಿಮರಿ : ಟೇಂ....ಟೇಂ...

ಮಂತ್ರಿ : ಹಾಗನ್ನೋದು.

ರಾಜ : ಪಾಪ ಪಾಪ!

(ರಕ್ಷಕರು ವಂದಿಗಳು 'ಅಯ್ಯೋ ಪಾಪ' ಎಂದು ದನಿಗೂಡಿಸುವರು.)

ಗಿಳಿಮರಿ : ಟೇಂ...ಟೇಂ...

ರಾಜ : ಛೀ ಛೀ ಛೀ ! ಬರೇ ಹಣ್ಣು ತಿನ್ನೋದೊಂದೇ ಗೊತ್ತೆ? ಮಹಾ ವಾಚಾಳ ನಗರೋದ್ಯಾನದಲ್ಲಿ ಬಂದು ಹಣ್ಣು ತಿನ್ನೋದು ಮಾತ್ರ ಗೊತ್ತೆ? ವಂದಿಮಾಗಧರೇ–

ವಂದಿಗಳು : ಮಹಾಕರುಣಾಳು ಖಗಮೃಗಕೃಪಾಳು ಗಿಡಮರದಯಾಳು ವಿದ್ಯಾವತಂಸ ಪ್ರಜ್ಞಾವಧಾನಿ ಕಣಕಣಕೂ ವಿದ್ಯಾದಾನಿ ಮಹಾವಾಚಾಳಪುರ–

ರಾಜ : –ದಲ್ಲಿ, ಈ ಸಭ್ಯ ಸುಶಿಕ್ಷಿತ ನಾಗರಿಕ ರಾಜ್ಯದಲ್ಲಿ ಈ ಅನಾಗರಿಕ ಪಕ್ಷಿ! ರಾಜ ತೋಟದಲ್ಲಿ ನಿರಕ್ಷರ ಕುಕ್ಷಿ! ಮತ್ತೆ ಇದಕ್ಕೆ ನೀವೇ ಸಾಕ್ಷಿ!... ಮಂತ್ರಿ, ಈ ಅಸಭ್ಯ ಪಕ್ಷಿಯನ್ನು ರಾಜಶಾಲೆಗೆ ಸೇರಿಸತಕ್ಕದ್ದು. ರಾಜಾಧ್ಯಾಪಕರಿಂದ ಇದಕ್ಕೆ ಶಿಕ್ಷಣ

ಕೊಡಿಸು. ಈ ಅನಾಗರಿಕ ಶುಕಪಕ್ಷಿಯ ಆದಿಮ ಪ್ರವೃತ್ತಿಗಳನ್ನು ಸುಧಾರಿಸಿ ಆಧುನಿಕ ಮಾಡತಕ್ಕದ್ದು.

ಮಂತ್ರಿ : ಅಪ್ಪಣೆ ಪ್ರಭು.

ರಾಜ : ಇದು ಸಭ್ಯತೆ ಕಲಿಯಲಿ; ಕಾಡುತನ ಮರೆಯಲಿ. ಶಾಸ್ತ್ರ ವ್ಯಾಕರಣ ಕಲಿತು ಸುಶಿಕ್ಷಿತವಾಗಲಿ, ತಾನು ಸುಸಂಸ್ಕೃತನಾಗಿ ಕಾಡಿನ ಉಳಿದ ಶುಕ ಪಕ್ಷಿಗಳನ್ನೂ ಸಭ್ಯ ಮಾಡಲಿ.

ಮಂತ್ರಿ : ಅಪ್ಪಣೆ ಪ್ರಭು.

ಅಳಿಯ : ಮಹಾರಾಜ, ರಾಜಮಾವ, ನನ್ನದೊಂದು ನಮ್ರ ನಿವೇದನೆ : ಇದನ್ನು ರಾಜಶಾಲೆಗೆ ಸೇರಿಸುವ ಮೊದಲು ಒಂದು ಮುಖ್ಯ ತಥ್ಯವನ್ನು ಕಂಡು ಹಿಡಿಯಬೇಕು. ಇದರ ಅಸಭ್ಯತೆಗೆ ಮತ್ತು ಅವಿದ್ಯೆಗೆ ಮೂಲಕಾರಣವನ್ನು ಕಂಡುಹಿಡಿಯಬೇಕು. ಈ ಗಿಳಿಮರಿ ತಿನ್ನೋದೇನು, ಕುಡಿಯೋದೇನು, ಇದರ ಆವರಣ ಎಂಥದು, ಇದು ಇರೋದೆಲ್ಲಿ, ಹಾರೋದೆಲ್ಲಿ, ಇದರ ರೆಕ್ಕೆ ಪುಕ್ಕ ಕೊಕ್ಕುಗಳ ಉದ್ದಗಲವೆಷ್ಟು ಭಾರವೆಷ್ಟು–ಈ ಅಂಶಗಳ ಬಗ್ಗೆ ದೀರ್ಘ ಸಂಶೋಧನೆ ನಡೆಯಬೇಕು.

ಮಂತ್ರಿ : ಪ್ರಭು, ಯುವರಾಜ ಅಳಿಯದೇವರು ಮಹಾ ಪ್ರತಿಭಾಶಾಲಿಗಳು, ದೇಶಕೋಶ ಸುತ್ತಿ ಬಂದವರು. ವಿದೇಶಗಳಿಂದ ಪದವಿಗಳನ್ನು ಹೊತ್ತು ತಂದವರು. ಕಾಂಭೋಜದೇಶದಲ್ಲಿ ಪ್ರಾಣಿ ಶಾಸ್ತ್ರ, ಪಕ್ಷಿಶಾಸ್ತ್ರ ಪಾರಂಗತರಾದವರು. (ದನಿ ತಗ್ಗಿಸಿ) ಸದ್ಯ ನಿರುದ್ಯೋಗಿಗಳು. ಅದಕ್ಕೇ ಒಂದು ವಿನಂತಿ–ಅಳಿಯರಾಜರಿಗೇ ಶುಕಶಿಕ್ಷಣದ ಭಾರವನ್ನು ವಹಿಸಿಬಿಡಬಹುದು.

ರಾಜ : ವಿನಂತಿಯನ್ನು ಸ್ವೀಕರಿಸಿದ್ದೇವೆ. ಅಳಿಯರಾಜ, ಇಂದಿನಿಂದ ನೀನು ಶುಕಶಿಕ್ಷಣದ ಮಂತ್ರಿ.

ಅಳಿಯ : ಮಹಾರಾಜ, ರಾಜಮಾವ, ಇನ್ನೊಂದು ವಸಂತ ಬರುವುದರೊಳಗಾಗಿ ಈ ಕಾಡುಗಿಳಿ ತನ್ನ ವನ್ಯವ್ಯವಹಾರಗಳನ್ನು ಮರೆತಿರಬೇಕು, ಸಭ್ಯ ಸುಶಿಕ್ಷಿತ ಸುಸಂಸ್ಕೃತವಾಗಿರಬೇಕು. ಇದಕ್ಕಾಗಿ ನಮ್ಮ ವಿಶ್ವವಿದ್ಯಾಲಯದಲ್ಲಿ ಒಂದು ಶುಕ ಅಧ್ಯಯನ ಸಂಸ್ಥೆಯನ್ನು ಸ್ಥಾಪಿಸಬೇಕು.

ರಾಜ : ನಿನ್ನ ಕಾರ್ಯದಲ್ಲಿ ಜಯವಾಗಲಿ. ಮಂತ್ರಿ, ಡಂಗುರ ಹೊಡೆಯಿಸು. ರಾಜ್ಯದ ಮೂಲೆಮೂಲೆಯ ಪ್ರತಿಯೊಬ್ಬ ಪ್ರಜೆಗೂ ಗೊತ್ತಾಗಲಿ_ ಅಲ್ಪವಾದ ಒಂದು ಪಕ್ಷಿಯ ಶಿಕ್ಷಣದಲ್ಲೂ ರಾಜರ ಆಸಕ್ತಿ ಎಷ್ಟಿದೆ ಎನ್ನುವುದು. ನಮ್ಮ ಪುತ್ರಿಯೂ ಸಂತುಷ್ಟಳಾಗಲಿ, ಅಳಿಯರಾಜ ಶುಕಶಿಕ್ಷಣ ಮಂತ್ರಿಯಾದನೆಂದು.

(ರಾಜ ವಂದಿಗಳ ಕಡೆ ನೋಡುತ್ತಾನೆ. ಅವರು ಪುನಃ ಪರಾಕು ಹೇಳುತ್ತ ನಿರ್ಗಮಿಸುತ್ತಾರೆ. ರಾಜ ಮಂತ್ರಿಗಳೂ ನಿರ್ಗಮಿಸುತ್ತಾರೆ.)

ಅಳಿಯ : ಉದ್ಯಾನ ರಕ್ಷಕರೆ, ತೆಗೆದುಕೊಂಡು ಹೋಗಿ ಈ ಅಸಭ್ಯ ಕಾಡು ಗಿಳಿಯನ್ನು. ಇದಕ್ಕೆ ಸುಗಂಧ ತೈಲವನ್ನೆರೆದು ಅವಭೃತಸ್ನಾನ ಮಾಡಿಸಿ. ಸುಗಂಧ ದ್ರವ್ಯಗಳನ್ನು ಸಿಂಪಡಿಸಿ. ಕಾಡಿನ ದುರ್ಗಂಧ ದೂರವಾಗಲಿ.

(ಗಿಳಿಯನ್ನು ಎಳೆದೊಯ್ಯುತ್ತಾರೆ. ಅದು ಚೀರುತ್ತಲೇ ಇರುತ್ತದೆ. ಅಳಿಯನೂ ನಿಷ್ಕ್ರಮಿಸುತ್ತಾನೆ. ನೇಪಥ್ಯದಲ್ಲಿ ಡಂಗುರ ಕೇಳಿಸುತ್ತದೆ.)

ಡಂಗುರದವರು : (ಪ್ರವೇಶಿಸುತ್ತ) ಕೇಳಿರಿ, ಕೇಳಿರಿ....ಮಹಾವಾಚಾಳಪುರದ ನಾಗರಿಕರೇ, ಕಿವಿಗೊಟ್ಟು ಕೇಳಿರಿ, ಮನಸಿಟ್ಟು ಕೇಳಿರಿ...

ಡಂಗುರ ೧ : –ಆಮೇಲೆ ಕೇಳ್ಲಿಲ್ಲ ಅಂತ ಹೇಳ್ಬೇಡಿ.

ಡಂಗುರ ೨ : ಅಳಿಯರಾಜರು ಶುಕಶಿಕ್ಷಣ ಮಂತ್ರಿಗಳಾಗಿದ್ದಾರೆ.

ಡಂಗುರ ೧ : ಅಳಿಯರಾಜರು ಶುಕ ಅಧ್ಯಯನ ಸಂಸ್ಥೆಯ ಮಹಾಧ್ಯಕ್ಷರಾಗಿದ್ದಾರೆ.

ಇಬ್ಬರೂ : ಕೇಳಿರಿ...ಕೇಳಿರಿ (ನಿರ್ಗಮಿಸುವರು.)

(ಎದುರಿನಲ್ಲಿ ಪ್ರಶಂಸಕರ ಮತ್ತು ನಿಂದಕರ ತಂಡ ಎದುರುಬದುರಾಗಿ ಪ್ರವೇಶಿಸುವದು.)

ಪ್ರಶಂಸಕ ೧ : ಸಮಾಚಾರ ತಿಳೀತೇನಯ್ಯ?

ಹಿಂಬಾಲಕರು : ಯಾವ ಸಮಾಚಾರ?

ಪ್ರಶಂಸಕ ೧ : ಡಂಗುರ ಕೇಳಿದಿರೇನಯ್ಯ?

ಹಿಂಬಾಲಕರು : ಕೇಳಿದೆವು, ಕೇಳಿದೆವು.

ನಿಂದಕ ೧ : ಸಮಾಚಾರ ತಿಳೀತೇನಯ್ಯ?

ಹಿಂಬಾಲಕರು : ತಿಳೀದೆ ಉಂಟೆ?

ನಿಂದಕ ೧ : ಡಂಗುರ ಕೇಳಿದಿರೇನಯ್ಯ?

ಹಿಂಬಾಲಕರು : ಕೇಳಿದೆವಪ್ಪಾ, ಕೇಳಿದೆವು.

ಪ್ರಶಂಸಕ ೧ : ಗಿಳಿ ಮರೀಗೆ ಶಿಕ್ಷಣವಂತೆ, ಪಾಠ ಅಂತೆ !

ಉಳಿದವರು : ಅಲ್ವೇ, ಅಲ್ವೇ !

ಪ್ರಶಂಸಕ ೧ : ಧನ್ಯ ಧನ್ಯ ರಾಜಾಧಿರಾಜ !

ಉಳಿದವರು : ಧನ್ಯ ಧನ್ಯ

ನಿಂದಕ ೧ : ಗಿಳೀ ಪಿಳ್ಳೆಗೆ ಶಿಕ್ಷಣ ಅಂತೆ, ಪಾಠ ಅಂತೆ !

ಉಳಿದವರು : ಆಹಾ ! ಆಹಾ !

ನಿಂದಕ ೧ : ಅಯ್ಯೋ ಅಯ್ಯೋ ನತದೃಷ್ಟ ಪ್ರಜಾ !

ಉಳಿದವರು : ಅಯ್ಯೋ ಅಯ್ಯೋ !

(ಪ್ರಶಂಸಕ ನಿಂದಕ ನಾಯಕರು ಮಾತನಾಡಿದ ಹಾಗೆ ಉದ್ದಕ್ಕೂ ಅವರವರ ಉಳಿದ ಹಿಂಬಾಲಕರು ದನಿಗೂಡಿಸುತ್ತ ಪ್ರತಿಕ್ರಿಯೆ ತೋರುತ್ತಾರೆ.)

ಪ್ರಶಂಸಕ ೧ : ಈ ರಾಜ್ಯದಲ್ಲಿ ಪಕ್ಷಿಗಳಿಗೂ ಶಿಕ್ಷಣದ ವ್ಯವಸ್ಥೆ !

ನಿಂದಕ ೧ : ಹೌದು ಹೌದು ಪಕ್ಷಿಗಳಿಗೇ ಈ ರಾಜ್ಯದಲ್ಲಿ ಶಿಕ್ಷಣದ ವ್ಯವಸ್ಥೆ !

ಪ್ರಶಂಸಕ ೧ : ಭವಿಷ್ಯದಲ್ಲಿ ಹುಳುಹುಪ್ಪಟೆಗಳಿಗೂ ಇಲ್ಲಿ ಶಿಕ್ಷಣ ಸಿಗಬಹುದು.

ನಿಂದಕ ೧ : ಹೌದು, ಹೌದು. ಭವಿಷ್ಯದಲ್ಲಿ ಹುಳುಹುಪ್ಪಟೆಗಳಿಗೇ ಇಲ್ಲಿ ಶಿಕ್ಷಣ ಸಿಗೋದು.

ಪ್ರಶಂಸಕ ೧ : ಓದಿ ಓದಿ ಗಿಳಿಮರಿ ಮುಂದೆ ಪಂಡಿತನಾದೀತು.

ನಿಂದಕ ೧ : ಆದರೆ ಇದರಿಂದ ನಮಗೇನಾದೀತು?

ಪ್ರಶಂಸಕ ೧ : ಛಿ ! ರಾಜದ್ರೋಹಿಗಳು ! ರಾಜನಿಂದಕರು !

ಉಳಿದವರು : ರಾಜನಿಂದಕರು !

ನಿಂದಕ ೧ : ಮತ್ತೆ ಇವರು ! ರಾಜಚೇಲಗಳು ! ರಾಜಪ್ರಶಂಸಕರು !

ಪ್ರಶಂಸಕ ೧ : ನಿಂದನೆಯೊಂದೇ ಇವರಿಗೆ ಕೆಲಸ.

ಪ್ರಶಂಸಕ ೨ : ಅದೇ ಊಟ.

ಪ್ರಶಂಸಕ ೩ : ಅದೇ ಬಟ್ಟೆ.

ಪ್ರಶಂಸಕ ೪ : ಅದೇ ನಿದ್ರೆ.

ಪ್ರಶಂಸಕ ೫ : ಅದೇ ಬದುಕು.

ನಿಂದಕ ೧ : ಪ್ರಶಂಸೆಯೊಂದೇ ಇವರಿಗೆ ಕಲಸ.

ನಿಂದಕ ೨ : ಅದೇ ಊಟ.

ನಿಂದಕ ೩ : ಅದೇ ಬಟ್ಟೆ.

ನಿಂದಕ ೪ : ಅದೇ ನಿದ್ರೆ.

ನಿಂದಕ ೫ : ಅದೇ ಬದುಕು.

ಪ್ರಶಂಸಕ ೧ : ಪ್ರಭುಗಳೇ ನಿಮ್ಮನ್ನು ವಿಚಾರಿಸಿಕೊಳ್ತಾರೆ.

ನಿಂದಕ ೧ : ಪ್ರಜೆಗಳೇ ನಿಮ್ಮನ್ನು ವಿಚಾರಿಸಿಕೊಳ್ತಾರೆ.

ಪ್ರಶಂಸಕರು : (ಒಟ್ಟಿಗೇ) ಸ್ವಾಮಿಭ್ರಷ್ಟ !

ನಿಂದಕರು : (ಒಟ್ಟಿಗೇ) ಹೊಗಳುಭಟ್ಟ !

(ಎರಡು ಗುಂಪಿನವರೂ ಪರಸ್ಪರ ತಿರುಗಿ ತಿರುಗಿ ಬೈದು ಮೂದಲಿಸಿಕೊಳ್ಳುತ್ತಾ ಆಚೀಚೆ ನಿಷ್ಕ್ರಮಿಸುವರು.)

* * *

(ಅಳಿಯರಾಜ, ಸಂಶೋಧಕರು ನಿಂತಿದ್ದಾರೆ.)

ಅಳಿಯ : ತಜ್ಞ ಸಂಶೋಧಕರೆ, ಪ್ರಾಣಿಪ್ರಜ್ಞಾ ಪಾರಂಗತರೇ, ನೀವೆಲ್ಲ ಕೂಡಿ ಈ ಶುಕಪೋತನ ಅಸಭ್ಯತೆಗೆ ಅನಾಗರಿಕತೆಗೆ ಮೂಲ ಕಾರಣವೇನೆಂಬುದನ್ನು ಶೋಧಿಸಿರಿ. ಈ ಶುಕಪಕ್ಷಿಯ ಅವಿದ್ಯೆಯ ನಿರ್ಮೂಲನಕ್ಕೆ ಒಂದು ಪರಿಹಾರ ವನ್ನು ಹುಡುಕಿರಿ.

ಸಂಶೋಧಕ ೧ : ಈ ಶುಕಪಕ್ಷಿಯ ವಾಸಸ್ಥಾನ ಮತ್ತು ಆವರಣಗಳ ಅಧ್ಯಯನ ನಡೆಸಬೇಕು.

ಸಂಶೋಧಕ ೨ : ಇದರ ಆಹಾರ ವಿಹಾರಗಳ ಬಗ್ಗೆ ವಿವರವಾದ ಸಂಶೋಧನೆಯಾಗಬೇಕು.

ಸಂಶೋಧಕ ೩ : ಶುಕಪಕ್ಷಿಯ ಭಾಷೆ ವ್ಯವಹಾರಗಳನ್ನು ಅಭ್ಯಸಿಸಬೇಕು.

ಸಂಶೋಧಕ ೪ : ಇದರ ರೆಕ್ಕೆಪುಕ್ಕಗಳನ್ನೂ ಶರೀರ ರಚನೆಯನ್ನೂ ಪೃಥಕ್ಕರಿಸಿ ನೋಡಬೇಕು.

ಸಂಶೋಧಕ ೫ : ಇದರ ಟೇಂಟೇಂಕಾರ ಧ್ವನಿಯ ಸ್ಥಾನ–ಸ್ಥಾಯಿಗಳನ್ನು ಗುರುತಿಸಿ ನಿರ್ಧರಿಸಬೇಕು.

ಅಳಿಯ : ರಕ್ಷಕರೆ, ಗಿಳಿಮರಿ ವಾಸ ಮಾಡುವ ಗೂಡನ್ನೂ ತಂದಿರಿಸಿ. ಈ ಸಂಶೋಧಕರು ಪರಿಶೀಲಿಸಲಿ.

(ರಕ್ಷಕರು ಹೋಗುವರು. ಪಂಡಿತರು ತಮ್ಮಲ್ಲೆ ಮಾತಾಡಿಕೊಳ್ಳುವರು : 'ಇದು ಯಾವ ದೊಡ್ಡದು, ನಾನು ಕಾಗೆಯ ಪುಕ್ಕ ನೋಡಿ ಅದರ ಕೊಕ್ಕಿನ ಉದ್ದ ನಿರ್ಧರಿಸಿಬಿಟ್ಟಿದ್ದೆ!' 'ಛೆ, ಅದೇನು ಮಹಾ, ನಾನು ಕೊಕ್ಕು ನೋಡಿ ಪುಕ್ಕಗಳ ಸಂಖ್ಯೆಯನ್ನೇ ಹೇಳಿಬಿಟ್ಟಿದ್ದೆ.' 'ಪಂಡಿತರೇ, ಇದು ಶುಕಪಕ್ಷಿ, ಕಾಕಪಕ್ಷಿಯಲ್ಲ ಎಂಬುದನ್ನು ಮನದಟ್ಟು ಮಾಡಿಕೊಳ್ಳಿ.' –ಇತ್ಯಾದಿ. ರಕ್ಷಕರು ಗೂಡನ್ನು ತಂದಿರಿಸುವರು. ಸಂಶೋಧಕರು ಅದನ್ನು ವಿವಿಧ ಭಂಗಿಗಳಿಂದ ವಿವಿಧ ಕೋನಗಳಲ್ಲಿ ನಿಂತು ಸೂಕ್ಷ್ಮವಾಗಿ ಪರಿಶೀಲಿಸುವರು. ತಮ್ಮ ತಮ್ಮಲ್ಲೇ ಚರ್ಚಿಸಿಕೊಳ್ಳುವರು.)

ಸಂಶೋಧಕ ೧ : ಹಾಂ. ಈ ಗೂಡಿನಲ್ಲಿರುವ ಪ್ರತಿಯೊಂದು ವಸ್ತುವೂ ಅರಣ್ಯ ವೃಕ್ಷಗಳದ್ದಾಗಿದೆ, ಅದಕ್ಕೇ ಹೀಗೆ.

ಸಂಶೋಧಕ ೨ : ಮತ್ತೆ ಈ ಹುಲ್ಲುಕಡ್ಡಿಗಳು ಕಾಡುಜಾತಿಯವು, ಅದಕ್ಕೇ ಹೀಗೆ.

ಸಂಶೋಧಕ ೩ : ಈ ಕಾಳನ್ನಂತೂ ಕಾಡುಪಕ್ಷಿಗಳು ಮಾತ್ರವೇ ತಿನ್ನಲು ಸಾಧ್ಯ.

ಸಂಶೋಧಕ ೪ : ಮುಖ್ಯವಾಗಿ ಈ ಗೂಡು ದೋಷಪೂರ್ಣವಾಗಿದೆ. ಇದರ ತ್ರಿಜ್ಯ ವ್ಯಾಸ ಕೋನಗಳೊಂದೂ ಶುದ್ಧವಾಗಿಲ್ಲ.

ಸಂಶೋಧಕ ೫ : ಈ ಕಾರಣಗಳಿಗಾಗಿಯೇ ಈ ಗಿಳಿಮರಿಯ ನಡೆನುಡಿಗಳೆಲ್ಲ ಸಭ್ಯತಾ ವಿರೋಧಿಗಳಾಗಿವೆ.

ಸಂಶೋಧಕ ೧ : ಇಂಥ ವಸತಿಯಲ್ಲಿ ಹಾಗೂ ಇಂಥ ಆಹಾರ ಪರಿಕ್ರಮದಲ್ಲಿ ಯಾರೇ ಆಗಿರಲಿ, ಸಭ್ಯ ಸುಸಂಸ್ಕೃತವಾಗಿರುವುದು ಅಸಾಧ್ಯವೇ ಸರಿ.

ಸಂಶೋಧಕ ೨ : ಅಳಿಯರಾಜನ್, ಇವೇ ಶುಕಪಕ್ಷಿಯ ಅವಿದ್ಯೆಗೆ ಮೂಲ ಕಾರಣಗಳು.

ಅಳಿಯ : ಈ ಅವಿದ್ಯೆಯನ್ನು ಪರಿಹರಿಸುವುದಕ್ಕೆ ಉಪಾಯವೇನು, ಅದನ್ನು ಹುಡುಕಿ.

ಸಂಶೋಧಕ ೧ : ಮೊತ್ತಮೊದಲನೆಯದಾಗಿ ಇದಕ್ಕೆ ಕಾಡಿನ ಸಂಪರ್ಕವನ್ನೇ ತಪ್ಪಿಸಬೇಕು.

ಸಂಶೋಧಕ ೨ : ಶುಕಪಕ್ಷಿಯ ರೆಕ್ಕೆಪುಕ್ಕಗಳನ್ನು ಕತ್ತರಿಸಿ ಹಾಕಬೇಕು.

ಸಂಶೋಧಕ ೩ : ಅಲ್ಲ ಅಲ್ಲ, ಶುಕಪಕ್ಷಿಯ ಕಾಲುಗಳನ್ನೇ ಕಡಿದುಹಾಕಬೇಕು.

ಸಂಶೋಧಕ ೪ : ಅಲ್ಲಲ್ಲ, ಶುಕಪಕ್ಷಿಯ ಕೊಕ್ಕಿಗೆ ಬೀಗಮುದ್ರೆ ಹಾಕಬೇಕು.

ಸಂಶೋಧಕ ೫ : ಯಾವುದೂ ಅಲ್ಲ, ಶುಕಪಕ್ಷಿಯನ್ನು ಬಂಧಿಸಿ ಉಪವಾಸದಲ್ಲಿರಿಸಬೇಕು.

ಸಂಶೋಧಕ ೧ : ಕೇಳಿ ಅಳಿಯರಾಜನ್, ಶುಕಪಕ್ಷಿಯನ್ನು ನಾಗರಿಕ ಹತೋಟಿಯಲ್ಲಿಡಬೇಕು.

ಅಳಿಯ : ಹೇಳಿ, ಅದು ಹೇಗೆ ಎನ್ನುವುದನ್ನೂ ಹೇಳಿ.

ಸಂಶೋಧಕ ೨ : ಅದನ್ನು ಸೆರೆಮನೆಯಲ್ಲಿಡಬೇಕು.

ಸಂಶೋಧಕ ೩ : ಸೆರೆಮನೆಯಲ್ಲಲ್ಲ, ಅರಮನೆಯಲ್ಲಿಡಬೇಕು.

ಸಂಶೋಧಕ ೪ : ಅಲ್ಲಲ್ಲ, ನೆಲಮನೆಯಲ್ಲಿ.

ಸಂಶೋಧಕ ೫ : ತಪ್ಪು ತಪ್ಪು ತಪ್ಪು, ಅದನ್ನು ಶಾಲೆಯಲ್ಲಿಡಬೇಕು.

ಸಂಶೋಧಕ ೧ : ಹೌದು ಹೌದು, ಇವರು ಹೇಳಿದ ಹಾಗೆ ಶಾಲೆಯಲ್ಲಿಡಬೇಕು, ಅವರು ಹೇಳಿದ ಹಾಗೆ ಸೆರೆಮನೆಯಲ್ಲಿಡಬೇಕು.

ಅಳಿಯ : ಅಂದರೆ?

ಸಂಶೋಧಕ ೧ : ಅಂದರೆ, ಶಾಲೆಯೂ ಹೌದು ಸೆರೆಮನೆಯೂ ಹೌದು–ಪಂಜರ ಶಾಲೆ.

ಅಳಿಯ : ಪಂಜರ ಶಾಲೆ.

ಸಂಶೋಧಕ ೧ : ಹೌದು ಪಂಜರ ಶಾಲೆ.

ಸಂಶೋಧಕರು : (ಎಲ್ಲರೂ ಒಟ್ಟಿಗೆ) ಹೌದು. ಪಂಜರ ಶಾಲೆ, ಪಂಜರ ಶಾಲೆಯೇ ಅದಕ್ಕೆ ಪರಿಹಾರ.

ಸಂಶೋಧಕ ೧ : ಅದಾದ ಮೇಲೆ ಗಿಳಿಮರಿಗೆ ಅಕ್ಷರಾಭ್ಯಾಸ ಮಾಡಿಸಬೇಕು.

ಸಂಶೋಧಕ ೨ : ಶಾಸ್ತ್ರ, ಪುರಾಣ, ಆಗಮ ನಿಗಮಾದಿಗಳನ್ನು ಕಲಿಸಬೇಕು.

ಸಂಶೋಧಕ ೩ : ಹೌದು, ಶಿಕ್ಷಣಾಭ್ಯಾಸವಾಗಬೇಕು. ವಿಸ್ತೃತ ಪಠ್ಯಕ್ರಮವಾಗಬೇಕು.

ಸಂಶೋಧಕ ೪ : ಮಾರ್ಗೀ ದೇಶೀ ಸಂಗೀತಗಳನ್ನು ಕಲಿಸಬೇಕು.

ಅಳಿಯ : ಹೌದು ಹೌದು. ನೀವೆಲ್ಲರೂ ಕೂಡಿ ಈಗ ಅದಕ್ಕೊಂದು ಸಮಗ್ರ ಪಠ್ಯ ಕ್ರಮವನ್ನು ಯೋಜಿಸಬೇಕು. ತಜ್ಞರಾದ ನಿಮ್ಮ ಈ ಯೋಜನಾ ವರದಿ ವಾಚಾಳ ರಾಜ್ಯಕ್ಕೆ ಹೆಮ್ಮೆಯನ್ನುಂಟು ಮಾಡುವಂತಿರಬೇಕು. ರಕ್ಷಕರೆ, ಈ ತಜ್ಞ ವಿಶೇಷಜ್ಞರಿಗೆಲ್ಲ ಕೈತುಂಬ ಪುರಸ್ಕಾರ ಕೊಡುವಂತೆ ಕೋಶಾಧಿಕಾರಿಗೆ ಹೇಳು.

ಎಲ್ಲರೂ : ಅಳಿಯರಾಜರು ಬಹುಕಾಲ ಬಾಳಲಿ. ಪರಮಾತ್ಮ ಅವರ ಬುದ್ಧಿಯನ್ನು ಹೀಗೇ ಇಡಲಿ. (ಎಂದುಕೊಳ್ಳುತ್ತ ನಿಷ್ಕ್ರಮಿಸುವರು)

ಅಳಿಯ : ರಕ್ಷಕರೇ, ಡಂಗುರವಾಗಲಿ. ರಾಜ್ಯದಲ್ಲಿರುವ ಪ್ರಸಿದ್ಧ ಅಪ್ರಸಿದ್ಧ, ಶ್ರೇಷ್ಠ, ಸಾಧಾರಣ ಶಿಲ್ಪಿಗಳೂ, ಕುಶಲಕರ್ಮಿಗಳೂ, ರಾಜಭವನಕ್ಕೆ ಬಂದು ಸೇರಲಿ. ಗಿಳಿಮರಿಯ ಶಿಕ್ಷಣಕ್ಕಾಗಿ ಅದ್ಭುತವಾದ ಒಂದು ಪಂಜರ ಶಾಲೆ ನಿರ್ಮಾಣವಾಗಲಿ.

(ನಿಷ್ಕ್ರಮಣ; ನೇಪಥ್ಯದಿಂದ ಡಂಗುರದವರ ದನಿ.)

ಡಂಗುರದವರು : (ಪ್ರವೇಶಿಸುತ್ತ) ಕೇಳಿರಿ, ಕೇಳಿರಿ, ಹೊಸ ರಾಜಾಜ್ಞೆಯನ್ನು ಗಮನವಿಟ್ಟು ಕೇಳಿರಿ.

ಡಂಗುರ ೧ : –ಆಮೇಲೆ ಕೇಳ್ಲಿಲ್ಲಾಂತ ತಕರಾರು ತೆಗೀಬೇಡಿ.

ಡಂಗುರ ೨ : ರಾಜ್ಯದ ಶಿಲ್ಪಿಗಳೇ, ಕಲಾವಿದರೇ, ಕುಶಲಕರ್ಮಿಗಳೇ...

ಡಂಗುರ ೧ : ಹಳಬರೇ ಹೊಸಬರೇ ದೇಶಿಗರೇ ವಿದೇಶಿಗರೇ...

ಡಂಗುರ ೨ : ಸ್ವರ್ಣಕಾರರೇ, ಕರ್ಮಕಾರರೇ, ಬಡಗಿಗಳೇ, ಗುಡಿಗಾರರೇ...

ಡಂಗುರ ೧ : ಸಮಸ್ತ ಕಾರ್ಮಿಕರೇ, ರಾಜಭವನದಲ್ಲಿ ಬಂದು ಪ್ರಸ್ತುತರಾಗಿರಿ. ಅತಿಥಿ ಗಿಳಿರಾಜನಿಗೆ ಪಂಜರ ಶಾಲೆಯನ್ನು ನಿರ್ಮಿಸಿ ಕೃತಾರ್ಥರಾಗಿರಿ...

ಇಬ್ಬರೂ : ಕೇಳಿರಿ ಕೇಳಿರಿ... (ಎನ್ನುತ್ತ ಹೋಗುವರು.)

(ಗುಂಪುಗುಂಪಾಗಿ ಅಸಂಖ್ಯ ಕಾರ್ಮಿಕರು ತಮ್ಮ ತಮ್ಮ ಸಾಧನಗಳನ್ನು ಹೊತ್ತು ಬರುವರು. ಸಾಮೂಹಿಕವಾಗಿ : 'ಐಸಾ...ಐಸಾ...ನಡೆಯಿರಿ ಬೇಗ । ಐಸಾ, ಓಡಿರಿ ಬೇಗ । ಐಸಾ, ಕೈತುಂಬ ಕಾಸು–। ದೇಶದ ತುಂಬ ಖ್ಯಾತಿ–' ಬನ್ನಿ ಬನ್ನಿ ಓಡಿ ಬನ್ನಿ ಏರಿ ಬನ್ನಿ ಹಾರಿಬನ್ನಿ ಬನ್ನಿ...' ಇತ್ಯಾದಿ. ಎಲ್ಲರೂ ಗುಂಪು ಗುಂಪಾಗಿ ತಮ್ಮ ತಮ್ಮ ವಿಭಾಗದಲ್ಲಿ ಕೆಲಸದಲ್ಲಿ ತೊಡಗುವರು. ಒಬ್ಬ ಅವರ ಮುಖಂಡನಾಗಿ ಹಾಡು ಹೇಳುತ್ತ ಹೇಳಿಸುತ್ತ ಕೆಲಸ ನಿರ್ದೇಶಿಸುತ್ತಾನೆ. ಪಂಜರ ಶಾಲೆ ನಿರ್ಮಾಣಗೊಂಡು ನಿಲ್ಲುತ್ತದೆ. ಉದ್ದಕ್ಕೂ ಸಾಮೂಹಿಕವಾಗಿ : 'ಚಂದವಾದ ಒಂದು–। ಪಂಜರದ ಶಾಲೆ–, ಕಟ್ಟಿಕೊಡಬೇಕು–। ಬಂಗಾರದ ಕಂಬ । ಬೆಳ್ಳೀ ಸಲಾಕೆ । ಹೂವಿನ ಮಂಚ । ರತ್ನದ ಛತ್ರಿ । ... ತನ್ನಿ ತನ್ನಿ ತನ್ನಿ ತನ್ನಿ ತನ್ನಿ ತನ್ನಿ ತನ್ನಿ ತನ್ನಿ –। ಮಣ್ಣು ತನ್ನಿ ಕಲ್ಲು ತನ್ನಿ । ಚಿನ್ನ ತನ್ನಿ ರನ್ನ ತನ್ನಿ । ವಸ್ತು ತನ್ನಿ ಒಡವೆ ತನ್ನಿ ।... ರಾಜ್ಯದ ಹೆಮ್ಮೆ । ದೇಶದ ಶೋಭೆ ಬದುಕಿಗೆ ದಾರಿ ।... ಸೊಂಟ ಬಗ್ಗಿ ಬೆವರು ಸುರಿಸಿ । ಮೈ ಮುರಿದು ಕೆಲಸ ಮಾಡು । ಅಳಿಯರಾಜ ಕೊಟ್ಟಿದ್ದನ್ನ ತಕ್ಕೋ ।. ಪಂಜರದ ಶಾಲೆ । ಕಟ್ಟಿ ಕೊಟ್ಟುದಾಯ್ತು ।...' ಇತ್ಯಾದಿ ಇತ್ಯಾದಿ. ನಿರ್ಮಾಣವಾಗಿ ಕಾರ್ಮಿಕರೆಲ್ಲ ಗುಂಪುಗುಂಪಾಗಿ ವಿಶ್ರಾಂತಿ ಪಡೆಯುತ್ತ ಹಾಡಿಕೊಳ್ಳುತ್ತಿದ್ದಾರೆ. ಅಳಿಯರಾಜನ ಪ್ರವೇಶ. ಎಲ್ಲರೂ ಎದ್ದು ನಿಲ್ಲುವರು. ಮುಖಂಡ ಅಳಿಯರಾಜನಿಗೆ ಪಂಜರಶಾಲೆಯನ್ನು ತೋರಿಸಿಕೊಡುತ್ತಾನೆ.)

ಮುಖಂಡ : ಅಳಿಯರಾಜ, ಪಂಜರ ಶಾಲೆಯನ್ನು ಪರಾಂಬರಿಸುವಂಥವರಾಗಿರಿ. ಇದು ಬರೆಯೋ ಕೋಣೆ, ಇದು ಓದೋ ಕೋಣೆ, ಇದು ಚಿತ್ರಿಸೋ ಕೋಣೆ, ಇದು ನರ್ತಿಸೋ ಕೋಣೆ, ಇದು ಹಾಡೋ ಕೋಣೆ, ಇದು ಅಳೋ ಕೋಣೆ, ಇದು ನಗೋ ಕೋಣೆ, ಇದು ಹೊರಗೆ ನೋಡೋ ಕೋಣೆ, ಮಲಗೋ ಕೋಣೆ ಮಾತ್ರ ಮಾಡಿಲ್ಲ–ಪಕ್ಷಿ ಅನಾಗರಿಕವಾಗಿ ಬಿಟ್ಟೀತು ಅನ್ನೋ ಭಯದಿಂದ.

ಅಳಿಯ : (ಪರಿಶೀಲಿಸಿ) ಭೇಷ್, ಚೆನ್ನಾಗಿದೆ. ರಕ್ಷಕರೇ, ಈ ಕಲಾವಿದರಿಗೆಲ್ಲ ರಾಜಕೋಶ ದಿಂದ ಯಥೇಚ್ಛ ಪುರಸ್ಕಾರ ದೊರೆಯಲಿ.

ಎಲ್ಲರೂ : ಅಳಿಯರಾಜರು ಬಹುಕಾಲ ಬಾಳಲಿ.

(ಅಳಿಯ ನಿರ್ಗಮಿಸುವನು. ಪುರಸ್ಕಾರ ಹಂಚಿಕೆಯಾಗುತ್ತದೆ. ಕಾರ್ಮಿಕರೆಲ್ಲ 'ಅಳಿಯರಾಜರು ಬಹುಕಾಲ ಬಾಳಲಿ' ಎಂದು ಘೋಷಿಸುತ್ತ ಪುರಸ್ಕಾರ ಪಡೆದು ಒಬ್ಬೊಬ್ಬರಾಗಿ ನಿರ್ಗಮಿಸುವರು. ಪ್ರಶಂಸಕ ನಿಂದಕರ ಪ್ರವೇಶ, ಎದುರು ಬದುರಾಗಿ.)

ಪ್ರಶಂಸಕ ೧ : ಕೇಳಿದಿರಾ ವಿಷಯಾನ?

ನಿಂದಕ ೧ : ತಿಳಿದಿರಾ ಅಪಾಯಾನ?

(ಆಯಾ ಹಿಂಬಾಲಕರು ಉದ್ದಕ್ಕೂ ತಮ್ಮ ತಮ್ಮ ನಾಯಕನ ಮಾತಿಗೆ ಸೂಕ್ತ ಉದ್ಗಾರದ ಪ್ರತಿಕ್ರಿಯೆ ಕೊಡುವರು.)

ಪ್ರಶಂಸಕ ೧ : ಗಿಳಿಯ ಓದುಬರಹಕ್ಕಾಗಿ ಸುಂದರವಾಗಿ ಸುಸಜ್ಜಿತವಾದ ಒಂದು ಪಂಜರವನ್ನು ಶಾಲೆಯ ಹಾಗೆ ಕಟ್ಟಿಸಿಕೊಟ್ಟಿದ್ದಾರಂತೆ.

ನಿಂದಕ ೧ : ಹುಂ. ಗಿಳಿಯ ಓದುಬರಹಕ್ಕಾಗಿ ಶಾಲೆಯನ್ನೇ ಪಂಜರದ ಹಾಗೆ ಕಟ್ಟಿಸಿದ್ದಾರಂತೆ. ತಪ್ಪಿಸಿಕೊಳ್ಳೋ ಹಾಗಿಲ್ಲ ; ಉಸಿರಾಡೋ ಹಾಗಿಲ್ಲ !

ಪ್ರಶಂಸಕರು : ಇಂಥ ಅದ್ಭುತ ಪಂಜರಶಾಲೆ ಬಗ್ಗೆ ನಾವು ಹೆಮ್ಮೆಪಡಬೇಕು, ಹೆಮ್ಮೆ.

ನಿಂದಕರು : ನಿಜವಾದ ಮಾತು. ಹೆಮ್ಮೆಪಡೋದಕ್ಕೆ ಮತ್ತೇನಿದೆ ಇಲ್ಲಿ?

ಪ್ರಶಂಸಕರು : (ಎಲ್ಲರೂ ಪಂಜರವನ್ನು ಸುತ್ತಿ ಸುತ್ತಿ ಪರೀಕ್ಷಿಸುತ್ತ) ಆಹಾ ! ಆಹಾ ! ಅದ್ಭುತ ! ಅದೆಷ್ಟು ವಿಭಾಗಗಳು, ಅದೆಷ್ಟು ಕೋಣೆಗಳು, ಏನು ವಿಶಾಲ ! ಏನು ವಿಸ್ತಾರ ! (ಇತ್ಯಾದಿ)

ನಿಂದಕರು : (ತಾವೂ ಆ ಕಡೆ ನೋಡುತ್ತ) ನಿಜ. ಆದರೆ ಆ ಕೋಣೆಗಳಿಗೆ ಗಾಳಿ ಎಲ್ಲಿಂದಲೋ, ಬೆಳಕು ಎಲ್ಲಿಂದಲೋ, ತಿನಿಸುಕಾಳುಗಳು ಎಲ್ಲಿಂದಲೋ....(ಇತ್ಯಾದಿ)

ಪ್ರಶಂಸಕ ೧ : ಆಹಾ ! ಶಿಕ್ಷಣದ ವ್ಯವಸ್ಥೆ ಅತ್ಯುತ್ತಮ.

ನಿಂದಕ ೧ : ಅತ್ಯುತ್ತಮ ಹೌದು. ಆದರೆ ಯಾರಿಗೋ, ಗಿಳಿಯಣ್ಣಂಗೋ ಅಳಿಯಣ್ಣಂಗೋ...

ಪ್ರಶಂಸಕ ೧ : ಗಿಳಿಯಣ್ಣ ನಿಜವಾಗಿ ಧನ್ಯ, ನಾವೂ ಧನ್ಯರು.

ನಿಂದಕ ೧ : ಅಯ್ಯೋ ಗಿಳಿಯಣ್ಣನ ಅವಸ್ಥೆಯೇ.

ಪ್ರಶಂಸಕ ೧ : ಗಿಳಿರಾಜನ ಭಾಗ್ಯವೇ ಭಾಗ್ಯ !

ನಿಂದಕ ೧ : ಹುಂ. ನಮ್ಮ ದೌರ್ಭಾಗ್ಯ !

ರಕ್ಷಕರು : (ಪ್ರವೇಶಿಸುತ್ತ) ಏಯ್, ಏನದು ಭಾಗ್ಯ ; ಭಾಗ್ಯ–ಅಭಾಗ್ಯರ ತಂದು ! ನಡೀರಿ, ನಡೀರಿ, ಇನ್ನೂ ಪಂಜರಶಾಲೆ ಉದ್ಘಾಟನೆಯೇ ಆಗಿಲ್ಲ. ಆಗ್ಲೇ ಬಂದು ಮುತ್ತಿಬಿಟ್ರು. (ಓಡಿಸುವರು.)

ಡಂಗುರ : (ಪ್ರವೇಶಿಸುತ್ತ) ಕೇಳಿರಿ, ಕೇಳಿರಿ. ವಾಚಾಳಪುರದ ಮಹಾ ರಾಜಾಜ್ಞೆಯನ್ನು ಕಿವಿಗೊಟ್ಟು ಕೇಳಿರಿ.

ಡಂಗುರ ೧ : ವಾಚಾಳನಗರದ ವಿದ್ವಜ್ಜನರೆ, ಪಂಡಿತವರೇಣ್ಯರೆ, ಗುರುಶ್ರೇಷ್ಠರೆ...

ಡಂಗುರ ೨ : ಆಚಾರೋತ್ತಮರೆ, ಪಠ್ಯಪುಸ್ತಕ ನಿರ್ಮಾತರೆ, ಶಿಕ್ಷಣ ತಜ್ಞರೆ...

ಇಬ್ಬರೂ : ಸರ್ವರೂ ರಾಜಭವನಕ್ಕೆ ಆಗಮಿಸಿರಿ. ಗಿಳಿರಾಜನ ಶಿಕ್ಷಣವನ್ನು ಯೋಜಿಸುವ ಬಗ್ಗೆ ಸರ್ವರೂ ಆಗಮಿಸಿರಿ. ಕೇಳಿರಿ, ಕೇಳಿರಿ...

* * *

(ಪರಮ ಪಂಡಿತರ ನೇತೃತ್ವದಲ್ಲಿ ಪಂಡಿತೋತ್ತಮರುಗಳು ಸೇರಿದ್ದಾರೆ. ಅಳಿಯರಾಜ ಅವರನ್ನುದ್ದೇಶಿಸಿ ಭಾಷಣ ಮಾಡುತ್ತಿದ್ದಾನೆ.)

ಅಳಿಯ : ಶಿಕ್ಷಣತಜ್ಞರೇ, ಅನಾಗರಿಕವಾದ ಈ ಶುಕಪೋತನ ಅವಿದ್ಯೆಯನ್ನು ಹೋಗಲಾಡಿಸಿ ಅದರ ಆತ್ಮವನ್ನು ಉದ್ಧರಿಸುವ ಸಲುವಾಗಿ ನೀವೆಲ್ಲ ಕೂಡಿ ಒಂದು ಅತ್ಯಮೋಘ ಪಠ್ಯಕ್ರಮವನ್ನು ಸಿದ್ಧಗೊಳಿಸಬೇಕಾಗಿದೆ. ಅದು ಭವಿಷ್ಯದಲ್ಲಿ ಸಮಸ್ತ ಪಕ್ಷಿವರ್ಗಕ್ಕೂ ಮಾದರಿಯಾಗುವಂಥ ಶಿಕ್ಷಣ ಪರಿಕ್ರಮವಾಗಿರಬೇಕು. ನಮಗೆ ನಿಮ್ಮೆಲ್ಲರ ವಿದ್ವತ್ತಿನಲ್ಲಿ ಭರವಸೆಯಿದೆ. ನೀವು ಈಗ ತಯಾರಿಸುವ ಶಿಕ್ಷಣ ವರದಿ ದೀರ್ಘವೂ, ವಿಸ್ತೃತವೂ, ಅದ್ವಿತೀಯವೂ ಆಗಿರಬೇಕು. ನಮ್ಮ ವಾಚಾಳ ರಾಜ್ಯಕ್ಕೆ ಹೆಮ್ಮೆ ತರುವಂತಿರಬೇಕು. ಈ ಕಾಡುಗಿಳಿಯ ಮೂಲವೂ ಸಹಜವೂ ಆದ ಪ್ರವೃತ್ತಿಗಳು ನಾಶವಾಗಿ ಅದು ನವ್ಯ ಸಭ್ಯ ಪಕ್ಷಿಯಾಗಬೇಕು. ನಿಮ್ಮ ಪ್ರಯತ್ನ ಸಫಲವಾದಲ್ಲಿ, ನಿಮ್ಮೆಲ್ಲರಿಗೂ ನಮ್ಮ ರಾಜ್ಯೋತ್ಸವದ ಸಂದರ್ಭದಲ್ಲಿ ವಿಶೇಷ ಪ್ರಶಸ್ತಿ ಪುರಸ್ಕಾರಗಳನ್ನು ಕೊಡಲಾಗುವುದು.

ಪಂಡಿತರು : (ಎಲ್ಲರೂ) ಜಾಮಾತಾ ದೇವೋ ಚಿರಂಜೀವೀ ಭವ.

(ಅಳಿಯ ನಿರ್ಗಮಿಸುವನು.)

ಪರಮ ಪಂಡಿತ : ಪಂಡಿತವರೇಣ್ಯರೆ, ಅಳಿಯರಾಜರ ಆದೇಶಾರ್ಥ ನಿಮ್ಮ ಜ್ಞಾಪಕದಲ್ಲಿರಲಿ. ಪ್ರಶಸ್ತಿ ಪುರಸ್ಕಾರಗಳನ್ನು ನೆನಪಿನಲ್ಲಿಟ್ಟುಕೊಳ್ಳಿ, ವಿಸ್ತಾರವಾದ ದೀರ್ಘವಾದ ಒಂದು ಅದ್ವಿತೀಯ ಅತ್ಯಪೂರ್ವ ಶಿಕ್ಷಣಕ್ರಮವನ್ನು ನಿಯೋಜಿಸಿ.

ಪಂಡಿತರು : (ಎಲ್ಲ) ಹಾಗೇ ಆಗಲಿ, ಪರಮಪಂಡಿತರೇ.

ಪರಮ ಪಂಡಿತ : ಎಂಬತ್ತಾರು ಭಾಷೆಗಳಿಂದ, ಛಪ್ಪನ್ನಾರು ದೇಶಗಳಿಂದ ಆಗಮ ನಿಗಮ ಪುರಾಣಾದಿಗಳನ್ನು ತರಿಸಿ ನಿಮ್ಮ ಅವಲೋಕನಾರ್ಥ ಪ್ರಸ್ತುತಪಡಿಸಲಾಗುವುದು. ಈ ಶುಕಶಿಕ್ಷಣ ಪಠ್ಯಕ್ರಮದಲ್ಲಿ ನಾಲ್ಕು ವೇದಗಳ ಸಾರ, ಹದಿನಾಲ್ಕು ಉಪನಿಷತ್ತುಗಳ ಸಂಕ್ಷೇಪ, ಹದಿನೆಂಟು ಪುರಾಣಗಳ ತತ್ತ್ವ, ಅರವತ್ತನಾಲ್ಕು ಕಲೆಗಳ ಪರಿಚಯ ಅಡಕವಾಗಿರಬೇಕು. ಸಮಸ್ತವೂ ವೇದ ಮೂಲದ್ದಾಗಿರಬೇಕು.

ಪಂಡಿತರು : (ಎಲ್ಲ) ಹಾಗೆಯೇ ಆಗಲಿ, ಪರಮಪಂಡಿತರೇ.

ಪಂಡಿತ ೧ : ನಾಲ್ಕು ವೇದಗಳು ಬರಲಿ. (ಪುಸ್ತಕವಾಹಕರು ಹೊತ್ತುತಂದು ಕೊಡುವರು.)

ಪಂಡಿತ ೨ : ಹದಿನಾಲ್ಕು ಉಪನಿಷತ್ತುಗಳು ಬರಲಿ. (ತರುವರು)

ಪಂಡಿತ ೩ : ಅಷ್ಟಾದಶ ಪುರಾಣಗಳು ಬರಲಿ. (ತರುವರು.)

ಪಂಡಿತ ೪ : ಅರುವತ್ತನಾಲ್ಕು ಕಲೆಗಳು ಬರಲಿ. (ತರುವರು)

(ಪಂಡಿತರ ವಾದ–ವಿವಾದ ಚರ್ಚೆಗಳು ನಡೆಯುವುವು.)

ಪಂಡಿತ ೧ : ಈ ಆಚಾರ್ಯರ ಭಾಷ್ಯ ದೇವರಿಗೇ ತಿಳಿಯಬೇಕು. ನಿಜವಾಗಿ ಇದು ಇಡೀ ದೋಷಪೂರ್ಣವಾಗಿದೆ.

ಪಂಡಿತ ೨ : ಪರಮಪಂಡಿತರೇ, ಆಚಾರ್ಯರು ನನ್ನ ಗುರುಮಾವ. ಅವರನ್ನು ಅವಮಾನಿಸಿದ್ದಕ್ಕಾಗಿ ನಾನೀ ಸಭೆಯನ್ನೇ ತ್ಯಾಗ ಮಾಡುತ್ತೇನೆ.

ಪಂಡಿತ ೩ : ಭಗವತ್ಪಾದರ ಈ ಉದ್ಗ್ರಂಥ ಕವಡೆಯ ಬೆಲೆ ಬಾಳುವುದಿಲ್ಲ. ಅವರ ಶೂನ್ಯವಾದದ ಹಾಗೆ ಈ ಗ್ರಂಥವೂ ಶೂನ್ಯವೆ.

ಪಂಡಿತ ೪ : ಪರಮಪಂಡಿತರೆ, ಈ ವಿಠ್ಠಲದೋರ್ದಂಡರು ಭಗವತ್ಪಾದರ ಬಗ್ಗೆ ಹೇಳಿದ ಮಾತುಗಳನ್ನು ಹಿಂತೆಗೆದುಕೊಳ್ಳದೆ ಹೋದರೆ ನಾನಿಲ್ಲೇ ಆಮರಣ ಅನಶನ ವ್ರತವನ್ನು ಕೈಗೊಳ್ಳುತ್ತೇನೆ. (ಎದ್ದು ಕೂರುವನು.)

(ಈ ಉದ್ದಕ್ಕೂ ಪಂಡಿತರಲ್ಲಿ ಚರ್ಚೆ, ಅಡ್ಡಮಾತು, ಒಬ್ಬರಮೇಲೊಬ್ಬರ ಗೇಲಿ, ಕುಹಕ ನಡೆದೇ ಇರುತ್ತದೆ.)

ಪರಮ ಪಂಡಿತ : ನೀವು ಹೀಗೆ ನಿಮ್ಮಲ್ಲೇ ಜಗಳವಾಡುತ್ತ ಕೂತರೆ ಸಾವಿರ ವರ್ಷಗಳಾದರೂ ಪತ್ರಕ್ರಮದ ವರದಿ ಸಿದ್ಧವಾಗುವುದಿಲ್ಲ. ಪಂಡಿತೋತ್ತಮರೆ, ಆತ್ಮೋದ್ಧಾರವನ್ನು ಮರೆಯಬೇಡಿ. ರಾಜಪುರಸ್ಕಾರಗಳು ನಿಮ್ಮನ್ನೇ ಪ್ರತೀಕ್ಷಿಸುತ್ತಿವೆ...ಹಂ ಈಗ, ಶೀಘ್ರಲಿಪಿಕಾರರು ಬರಲಿ. ಈ ಪಂಡಿತವರೇಣ್ಯರ ವಾಕ್ಯಗಳನ್ನು ಲಿಪಿಬದ್ಧವಾಗಿಸಲಿ.

(ಸೇವಕ ಹೋಗುವನು. ಶೀಘ್ರಲಿಪಿಕಾರರು ಸಲಕರಣೆ ಸಮೇತ ಬಂದು ಬರೆದುಕೊಳ್ಳಲು ಸಿದ್ಧರಾಗಿ ಕೂರುವರು.)

ಪಂಡಿತ ೧ : ಭೀತಿಯಿಂದಲೇ ಜ್ಞಾನದ ಆರಂಭ–ಹುಂ, ಬರೆದುಕೊಳ್ಳಿ.

ಪಂಡಿತ ೩ : ಈಶ್ವರನೊಬ್ಬನೇ ಸತ್ಯ, ಶೇಷವೆಲ್ಲಾ ಮಿಥ್ಯ.

ಪಂಡಿತ ೪ : ಸಮಸ್ತ ಆತ್ಮಗಳಲ್ಲೂ ಪರಮಾತ್ಮನೇ ವಿರಾಜಿಸುತ್ತಾನೆ.

ಪಂಡಿತ ೫ : ಈ ಗೋಚರ ಪ್ರಪಂಚ ಮಾಯೆ. ಪ್ರತ್ಯೇಕ ವಸ್ತು ಕ್ಷಣಿಕ, ಪ್ರತ್ಯೇಕ ಪ್ರಾಣಿ ನಶ್ವರ.

ಪಂಡಿತ ೬ : ಈ ಪ್ರಪಂಚವು ಸತ್ತ್ವರಜಸ್ತಮೋಗುಣಗಳಿಂದ ತುಂಬಿಕೊಂಡಿದೆ.

ಪಂಡಿತ ೭ : ಸತ್ಯಂ ವದ, ಧರ್ಮಂ ಚರ, ಸತ್ಯಮೇವ ಜಯತೇ.

ಪಂಡಿತ ೮ : ಆತ್ಮವು ಅಮರ. ಅದನ್ನು ಬೆಂಕಿ ಸುಡಲಾರದು, ನೀರು ನೆನೆಸಲಾರದು, ಗಾಳಿ ಒಣಗಿಸಲಾರದು.

ಪಂಡಿತ ೯ : ಆತ್ಮೋದ್ಧಾರವೇ ಪರಮಮೋಕ್ಷದ ದ್ವಾರ.

ಪಂಡಿತ ೧೦ : ನಿಷ್ಕಾಮಕರ್ಮಿಯಾಗತಕ್ಕದ್ದು, ಜಿತೇಂದ್ರಿಯನಾಗತಕ್ಕದ್ದು, ಸಂಭವಾಮಿ ಯುಗೇಯುಗೇ. (ಒಂದೊಂದು ಸಲವೂ ಪಂಡಿತರುಗಳು ತಮ್ಮತಮ್ಮಲ್ಲಿ ಮಾತಾಡಿಕೊಳ್ಳುತ್ತ, ಹೇಳುವವನನ್ನು ಲೇವಡಿಮಾಡುತ್ತಲೋ ಭಲೇ ಎನ್ನುತ್ತಲೋ ಇರುತ್ತಾರೆ. ಈ ಸಲ ಎಲ್ಲರೂ ಒಟ್ಟಿಗೇ ನಕ್ಕುಬಿಡುತ್ತಾರೆ.)

ಪಂಡಿತ ೧೦ : ಯಾಕ್ರೀ ನಗ್ತೀರಿ, ಏನಾಯ್ತು ನಿಮಗೆ ? –ಲಿಪಿಕಾರರೆ, ಇದನ್ನೂ ಬರೆದು ಕೊಳ್ಳಬೇಡಿ.

ಪರಮ ಪಂಡಿತ : ಪಂಡಿತವರೇಣ್ಯರೆ, ಈ ನಮ್ಮ ಆರಂಭವೇನೋ ಸೂಕ್ತವಾಗಿಯೇ ಆಗುತ್ತಿದೆ. ಒಳ್ಳೆಯದು, ಮತ್ತೆ ಸೇರೋಣ. ಇನ್ನೂ ಹೆಚ್ಚಿನ ಶ್ರದ್ಧೆಯಿಂದ ಶೀಘ್ರವಾಗಿ ನಮ್ಮ ವರದಿ ಸಿದ್ಧಗೊಳ್ಳಬೇಕು.

ಪಂಡಿತರು : (ಒಟ್ಟಿಗೆ) ಅಳಿಯರಾಜ ಬಹುಕಾಲ ಬಾಳಲಿ. (ಎನ್ನುತ್ತ ನಿಷ್ಕ್ರಮಿಸುವರು.)

* * *

ಡಂಗುರ : (ಒಳಗಿನಿಂದ ಕೂಗುತ್ತ ಪ್ರವೇಶಿಸುವರು.)

ಕೇಳಿರಿ, ಕೇಳಿರಿ, ವಾಚಾಳಪುರದ ಸಭ್ಯನಾಗರಿಕರೇ, ಕಿವಿಕೊಟ್ಟು ಕೇಳಿರಿ...

ಡಂಗುರ ೧ : ಈ ದಿನ ಪಂಜರಶಾಲೆಯ ಉದ್ಘಾಟನೋತ್ಸವ...

ಡಂಗುರ ೨ : ಗಿಳಿರಾಜನ ಸ್ವಾಗತೋತ್ಸವ.

ಡಂಗುರ : (ಒಟ್ಟಿಗೆ) ನಾಗರಿಕರೆಲ್ಲರಿಗೂ ಆದರದ ಆಮಂತ್ರಣವಿದೆ. ಎಲ್ಲರೂ ಭಾಗವಹಿಸ ತಕ್ಕದ್ದು. ಕೇಳಿರಿ... ಕೇಳಿರಿ...(ನಿಷ್ಕ್ರಮಿಸುವರು.)

(ಪ್ರಶಂಸಕರು ನಿಂದಕರ ಪ್ರವೇಶ.)

ಪ್ರಶಂಸಕ ೧ : ಬನ್ನಿ ಬನ್ನಿ, ನಾವೂ ಹೋಗೋಣ. ಈ ವೈಭವ ಕಣ್ಣಿಂದಲಾದರೂ ನೋಡೋ ಭಾಗ್ಯ ಸಿಕ್ಕಿತಲ್ಲ.

ನಿಂದಕ ೧ : ಬನ್ರಪ್ಪಾ, ಬನ್ನಿ, ನೋಡೋಣ. ಪಾಪ, ಗಿಳಿಯಪ್ಪನ ಗೋಳು ಕಣ್ಣಿಂದಲಾದರೂ ನೋಡಬೇಕಲ್ಲ. (ಹೋಗುವರು.)

* * *

(ವೈಭವಪೂರ್ಣವಾದ ಬೃಹದಾಕಾರದ ರಾಜಮೆರವಣಿಗೆಯಲ್ಲಿ ನಾಗರಿಕರು, ಪರಿಚಾರಕರು, ಸಖಿಯರು ಎಲ್ಲರೂ ಕೂಡಿ ಗಿಳಿಮರಿಯನ್ನು ಕರೆತಂದು, ಮಂತ್ರ ಘೋಷ ಮಂಗಲವಾದ್ಯ ಹಾಡು ಕುಣಿತಗಳೊಡನೆ ಪಂಜರದ ಉದ್ಘಾಟನೆ ಮಾಡಿ ಗಿಳಿಮರಿಯನ್ನು ಅದರಲ್ಲಿ

ಕೂಡಿಸುವರು. ರಾಜ, ಮಂತ್ರಿ, ಅಳಿಯ ಮೊದಲಾದವರು ಸಮಾರಂಭವನ್ನು ನೆರವೇರಿಸುವರು. ಮನೋರಂಜನ ಕಾರ್‍ಯಕ್ರಮಗಳು ನಡೆಯುವುವು. ಮೆರವಣಿಗೆಯ ಮೊದಲಲ್ಲಿ ಹಾಡು–)

ಗಿಣಿರಾಜನಿಗೆ ಸ್ವಾಗತವ ನೀಡೆ
ಊರ ಜನರೆಲ್ಲ ಬನ್ನಿರೋ
ಸ್ವಾಗತದ ಉತ್ಸವಕೆ ಬನ್ನಿರೋ
ಹಾದೀಲಿ ಹೂಗಳ ಚೆಲ್ಲಿರೋ
ಚಂದದ ತೋರಣವ ಕಟ್ಟಿರೋ....

ಹೊಸಮನೆಗೆ ಬಾರೋ ಗಿಣಿರಾಮ
ಅರಮನೆಗೆ ಬಾರೋ ಗಿಣಿರಾಮ
ಭಾಗ್ಯವ ತಾರೋ ಗಿಣಿರಾಮ
ಗುಡ್ಡ ಬೆಟ್ಟ ಮರೆಯೋ ಗಿಣಿರಾಮ....

ಗೂಡು ಪೊಟರೆ ಬಿಟ್‌ಬಿಡೋ ಗಿಣಿರಾಮ
ಕಾಡು ಹಣ್ಣು ಬಿಟ್‌ಬಿಡೋ ಗಿಣಿರಾಮ
ಹಳ್ಳನೀರು ಬಿಟ್‌ಬಿಡೋ ಗಿಣಿರಾಮ
ಭಕ್ಷ ಭೋಜ್ಯ ತಿನ್ನೋ ಗಿಣಿರಾಮ....

ಅಕ್ಷರವ ಕಲಿಯೋ ಗಿಣಿರಾಮ
ವ್ಯಾಕರಣ ಓದೋ ಗಿಣಿರಾಮ
ವೇದಪಾಠ ಹೇಳೋ ಗಿಣಿರಾಮ
ಲೆಕ್ಕ ಮಗ್ಗಿ ಒದರೋ ಗಿಣಿರಾಮ......

ತತ್ತ್ವಮಸಿ ಹೇಳೋ ಗಿಣಿರಾಮ
ಸರಿಗಮಪ ಹಾಡೋ ಗಿಣಿರಾಮ
ಥಕಥೈಥೈ ಕುಣಿಯೋ ಗಿಣಿರಾಮ
ಟೇಂ ಟೇಂ ಕಿರಿಚ್ಬೇಡ್ವೋ ಗಿಣಿರಾಮ.....

(ಇತ್ಯಾದಿ, ಇತ್ಯಾದಿ)

* * *

(ಪ್ರಶಂಸಕ ನಿಂದಕರ ಪ್ರವೇಶ. ಆಯಾ ನಾಯಕರು ಮಾತಾಡುತ್ತಿದ್ದಂತೆ ಉದ್ದಕ್ಕೂ ಅದರ ಅನುಯಾಯಿಗಳೂ ಅವಕ್ಕೆ ದನಿಗೊಡುವರು, ಉದ್ಗಾರ ತೆಗೆಯುವರು.)

ಪ್ರಶಂಸಕ ೧ : ಭಲೆ ಭಲೆ ! ಎಂಥ ದಿವ್ಯ ಮಹೋತ್ಸವ, ಭವ್ಯ ಸಮಾರಂಭ !

ನಿಂದಕ ೧ : ಆಹಾಹಾ, ಎಲ್ಲಾ ಬಿಟ್ಟು ಗಿಳಿಮರಿ ಹೆಸರಲ್ಲಿ !

ಪ್ರಶಂಸಕ ೧ : ಕಣ್ಣುಗಳಿಗೆ ತೃಪ್ತಿಯಾಯಿತು. ಜೀವನ ಸಾರ್ಥಕವಾಯಿತು?

ನಿಂದಕ ೧ : ಕಣ್ಣುಗಳಿಗೆ ಮತ್ತೇನು ಕಂಡೀತು? ಜೀವನ ಮತ್ತೇನು ಪಡೆದೀತು?

ಪ್ರಶಂಸಕ ೧ : ಅಬ್ಬಬ್ಬ ! ಎಲ್ಲೆಲ್ಲಿ ನೋಡಿದರೂ ಪುಸ್ತಕಗಳೇ ಪುಸ್ತಕಗಳು, ಪಂಡಿತರೇ ಪಂಡಿತರು, ಶಿಕ್ಷಕರೇ ಶಿಕ್ಷಕರು !

ನಿಂದಕ ೧ : ಗಿಳಿರಾಮನಿಗಿಂತಾ ದೊಡ್ಡ ದೊಡ್ಡ ಪುಸ್ತಕಗಳು. ಈ ಶಿಕ್ಷಕರ ಹಿಂಡು ಕೂಡಿ ನಿಂತರೇ ಸಾಕು ಗಿಳಿಗೆ ಉಸಿರುಕಟ್ಟೋದಕ್ಕೆ.

ಪ್ರಶಂಸಕ ೧ : ಯಾರ ಬಾಯಲ್ಲಿ ನೋಡಿದರೂ ಗಿಳಿರಾಜನ ಹೆಸರೇ !

ನಿಂದಕ ೧ : ಆದರೆ ಗಿಳಿರಾಜನ ಬಾಯಲ್ಲಿ–ಇದ್ದ ತೇವವೂ ಒಣಗಿ ಹೋಗಿರಬೇಕು.

ಪ್ರಶಂಸಕ ೧ : ನಮ್ಮ ವಾಚಾಳ ಮಹಾರಾಜ್ಯದಲ್ಲಿ ಗಿಳಿಮರಿಯೂ ವಿದ್ಯಾಕಾತರ, ಪಂಜರವೂ ಶಾಲೆ.

ನಿಂದಕ ೧ : ಶಾಲೆಯೂ ಪಂಜರ, ಪುಸ್ತಕವೂ ಪಂಜರ, ರಕ್ಷಕರೂ ಪಂಜರ, ಪಂಡಿತರೂ ಪಂಜರ–ಪಂಜರವೇ ಪಂಜರ !

ಪ್ರಶಂಸಕ ೧ : ಇನ್ನೇನು ಗಿಳಿಮರಿ ದೊಡ್ಡ ವಿದ್ವಾಂಸನೇ ಆದೀತು.

ನಿಂದಕ ೧ : ಆದೀತಪ್ಪ, ಆದೀತು. ವಿಧ್ವಂಸವೇ ಆದೀತು.

(ರಾಜ ಮಂತ್ರಿಯೊಡನೆ ವೇಷ ಮರೆಸಿ ಬಂದು ಇವರ ಮಾತುಗಳನ್ನು ಕೇಳುತ್ತ ಮುಂದೆ ಬರುತ್ತಾನೆ.)

ರಾಜ : ಮಂತ್ರಿ, ನಾನಿದೇನನ್ನು ಕೇಳುತ್ತಿದ್ದೇನೆ? ನಮ್ಮ ಶಿಕ್ಷಣ ವ್ಯವಸ್ಥೆ–

ಮಂತ್ರಿ : ಅತ್ಯುತ್ತಮವಾಗಿದೆ ಪ್ರಭು.

ರಾಜ : ಪಂಜರ ಶಾಲೆ–

ಮಂತ್ರಿ : ಸರ್ವೋತ್ತಮವಾಗಿದೆ ರಾಜನ್.

ರಾಜ : ಗಿಳಿಮರಿ–

ಮಂತ್ರಿ : ಸ್ವರ್ಗ ಸುಖದಲ್ಲಿದೆ.

ರಾಜ : ಹಾಗಾದರೆ, ಈ ಪ್ರಶಂಸಕ ನಿಂದಕರ ಮಾತು?

ಮಂತ್ರಿ : ಪ್ರಭು, ತಾವೇ ಸ್ವತಃ ಪರಿಶೀಲಿಸುವಿರಂತೆ...–ಅಗೋ, ಅಳಿಯರಾಜರೇ ಈ ಕಡೆ ದಯಮಾಡಿಸುತ್ತಿದ್ದಾರೆ.

(ಅಳಿಯರಾಜನ ಪ್ರವೇಶ)

ರಾಜ : ಅಳಿಯರಾಜ, ಜನರ ಬಾಯಲ್ಲಿ ನೂರಾರು ರೀತಿಯ ಪ್ರಶಂಸೆ ನಿಂದನೆಗಳನ್ನು ಕೇಳಿ ನನಗೇಕೋ ಕಳವಳ. ಹೇಳು, ಶುಕ ಶಿಕ್ಷಣ........

ಅಳಿಯ : ನಿಂದಕರು ಸುಳ್ಳರು. ಬೇಕಾದರೆ ಸಮಸ್ತ ಪ್ರಜಾಜನರ ಸಮ್ಮುಖದಲ್ಲೇ ತಾವು ಸ್ವತಃ ಶಿಕ್ಷಣ ಯೋಜನೆಯನ್ನೂ, ಶಿಕ್ಷಣ ಕ್ರಮವನ್ನೂ ಪರಿಶೀಲಿಸಿ ನೋಡಬಹುದು.

(ನಿಷ್ಕ್ರಮಿಸುತ್ತಿದ್ದಂತೆ ನೇಪಥ್ಯದಿಂದ ಧ್ವನಿ ಪ್ರಾರಂಭವಾಗುವುದು.)

ಡಂಗುರದವರು : (ಪ್ರವೇಶಿಸುತ್ತ) ಕೇಳಿರಿ, ಕೇಳಿರಿ, ಕಿವಿತೆರೆದು ಕೇಳಿರಿ.

ಡಂಗುರ ೧ : ರಾಜಾಧಿರಾಜ ಶ್ರೀ ರಾಜ ಮಾರ್ತಾಂಡರು ಶುಕಶಿಕ್ಷಣದ ಖುದ್ದು ಪರಿಶೀಲನೆಗಾಗಿ ಬಿಜಯಂಗೈಯುವವರಿದ್ದಾರೆ.

ಡಂಗುರ ೨ : ಸಮಸ್ತ ಪ್ರಜಾಜನರ ಸಮ್ಮುಖದಲ್ಲಿ ಬಹಿರಂಗವಾಗಿ ಶುಕಶಿಕ್ಷಣದ ಪರಿಶೀಲನೆ ನಡೆಯುತ್ತದೆ.

ಇಬ್ಬರೂ : ಕೇಳಿರಿ....ಕೇಳಿರಿ....(ಹೋಗುವರು)

ಪ್ರಶಂಸಕ ೧ : ಬನ್ನಿ ಬನ್ನಿ ಹೋಗೋಣ. ಗಿಳಿರಾಜನಿಗೆ ಹೇಗೆ ಶಿಕ್ಷಣ ನಡೀತಾ ಇದೆ. ಅನ್ನೋದನ್ನ ಕಣ್ಣಲ್ಲಾದರೂ ನೋಡೋಣ.

ನಿಂದಕ ೧ : ಬನ್ರಪ್ಪಾ, ನಾವೂ ನೋಡೋಣ, ಗಿಳಿಯಪ್ಪಂಗೆ ಅದೇನು ಅರೆದು ಕುಡಿಸ್ತಾ ಇದ್ದಾರೆ ಅಂತ.

(ರಾಜ ಅಳಿಯ ಮಂತ್ರಿ ಮತ್ತು ಪರಿವಾರದವರು, ಕಲಾವಿದರು, ಶಿಲ್ಪಿಗಳು, ಪಂಡಿತರು, ನಿರೀಕ್ಷಕರು–ಇವರೆಲ್ಲ ಪಂಜರ ಕಾಣದ ಹಾಗೆ ತುಂಬಿ ನಿಂತಿದ್ದಾರೆ. ಕೆಳ ಭಾಗದಲ್ಲಿ ಪ್ರೇಕ್ಷಕರಾಗಿ ನಾಗರಿಕರು ಪ್ರಶಂಸಕರು ನಿಂದಕರು.)

ಅಳಿಯ : ಪರಮ ಪಂಡಿತರೆ–

ಪರಮ ಪಂಡಿತ : ಮಹಾಪ್ರಭುಗಳಿಗೆ ಜಯವಾಗಲಿ, ಅಳಿಯರಾಜರಿಗೆ ಜಯವಾಗಲಿ.

(ಸೇವಕರು ೧೫–೨೦ ಅಡಿ ಉದ್ದದ ಲಿಖಿತ ಸುರಳಿಯನ್ನು ಬಿಚ್ಚಿ ಹಿಡಿದು ನಿಲ್ಲುವರು.)

ನಮ್ಮ ಪಂಡಿತಮಂಡಲಿ ತಯಾರಿಸಿರುವ ಈ ವಿಸ್ತೃತ ವರದಿಯನ್ನು ಪ್ರಭುಗಳು ಪರಿಶೀಲಿಸೋಣವಾಗಲಿ. ಈ ವರದಿಯನ್ನು ೩೮೦ ಜನ ಮಹಾ ವಿದ್ವಾಂಸರುಗಳ ಶಿಕ್ಷಣವೇತ್ತರ, ೪೦೩ ಸಮಿತಿ ಉಪಸಮಿತಿ ಲಘು ಸಮಿತಿಗಳು ಕೂಡಿ, ಐನೂರು ಪ್ರಹರ, ಏಳು ಘಟಕ ಹಾಗೂ ಹದಿನೈದು ಕ್ಷಣಗಳಲ್ಲಿ ಸಿದ್ಧಪಡಿಸಲಾಯಿತು. ೪೫೬೭ ಕಡತಗಳುಳ್ಳ ಈ ವರದಿಯಲ್ಲಿ ೩೧೩೧ ಕಡತಗಳನ್ನು

ಪಂಡಿತವರೇಣ್ಯರ ವಾದವಿವಾದಗಳಿಗಾಗಿಯೇ ಮೀಸಲಿಡಲಾಗಿದೆ. ಈ ವರದಿಯ ಕಡತಗಳನ್ನು ಒಂದರ ಪಕ್ಕದಲ್ಲೊಂದು ಇಡುತ್ತ ಹೋದರೆ ಒಂದು ಕ್ರೋಶಕ್ಕಿಂತಲೂ ಹೆಚ್ಚು ಉದ್ದವಾಗುತ್ತದೆ. ಈ ವರದಿಯ ಭಾರ ೨೦ ಹೆಗ್ಗುಂಡುಗಳು ೩೪ ಗುಂಡುಗಳು ೧೬ ಗಣಪಗಳು ಮತ್ತು ೭ ಗುಲಗಂಜಿಗಳು. ಇದರಲ್ಲಿ ೨ ಕೋಟಿ ೪ ಲಕ್ಷ ಶಬ್ದಗಳನ್ನೂ ೧೩ ಲಕ್ಷ ವಿರಾಮಗಳನ್ನೂ ೩ ಲಕ್ಷ ಪ್ರಶ್ನೆಗಳನ್ನೂ ೧ ಲಕ್ಷ ಸುಮಾರು ವಿಸ್ಮಯಾದಿ ಚಿಹ್ನೆಗಳನ್ನೂ ಬಳಸಲಾಗಿದೆ...

ರಾಜ : ಆಹಾ !

ಎಲ್ಲರೂ : ಅದ್ಭುತ ! ಅತ್ಯದ್ಭುತ !

ಪಂಡಿತರು : (ಒಟ್ಟಾಗಿ) ಮಹಾಪ್ರಭುಗಳಿಗೆ ಜಯವಾಗಲಿ ! ಅಳಿಯರಾಜರಿಗೆ ಜಯವಾಗಲಿ ! ಗಿಳಿರಾಜ ಚಿರಂಜೀವಿಯಾಗಲಿ !

ಅಳಿಯ : ಮಹಾಪ್ರಭು, ಇದೇ ಪಂಜರಶಾಲೆ. ನಮ್ಮೆಲ್ಲರ ಸಾಕಾರ ಸ್ವಪ್ನ. ವಾಚಾಳ ಮಹಾರಾಜ್ಯದ ಅದ್ಭುತ ಶಿಲ್ಪ !

ಎಲ್ಲರೂ : ಆಹಾ ! ಪರಮಾದ್ಭುತ !

ಅಳಿಯ : ಪ್ರಭು, ಇವರೇ ಅದನ್ನು ನಿರ್ಮಿಸಿದ ಮಹಾಶಿಲ್ಪಿಗಳು.

(ಅಳಿಯರಾಜ ಪರಿಚಯ ಮಾಡಿಸಿಕೊಡುತ್ತ ಹೋದಂತೆ ಆಯಾ ವರ್ಗದವರು 'ರಾಜಾಧಿರಾಜರಿಗೆ ಜಯವಾಗಲಿ, ಅಳಿಯರಾಜರು ಬಹುಕಾಲ ಬಾಳಲಿ' ಎಂದು ಘೋಷಿಸುವರು.)

ಅಳಿಯ : ಇವರು ಪರಮ ನಿರೀಕ್ಷಕರು, ಇವರು ಮಹಾ ನಿರೀಕ್ಷಕರು, ಇವರು ಸಹ ನಿರೀಕ್ಷಕರು.... ಇವರು ಸುದ್ದಿವಾಹಕರು...ಇವರು ಪುಸ್ತಕಧಾರಿಗಳು... ಇವರು ಪಂಜರಶಾಲೆಯ ಪರಿಚಾರಕರು... ಇವರು ಕಸಗುಡಿಸುವವರು... ಇವರು ಗಿಳಿರಾಮನನ್ನು ನಿದ್ದೆಯಿಂದೆಬ್ಬಿಸುವವರು.... (ಇತ್ಯಾದಿ)

ಮಂತ್ರಿ : ಶಿಕ್ಷಣ ವ್ಯವಸ್ಥೆ ಮನಸ್ಸಿಗೆ ಬಂತೆ ಪ್ರಭುಗಳೇ?.

ರಾಜ : ಸಂತೋಷವಾಯಿತು; ಸುವ್ಯವಸ್ಥೆ. ಪಂಜರಶಾಲೆಯ ಇಡೀ ವ್ಯವಸ್ಥೆ ಅದ್ವಿತೀಯ. ನಿಂದಕರು ಮಹಾಸುಳ್ಳರು.

ಪ್ರಶಂಸಕರು : ಅದ್ವಿತೀಯ ! ಅದ್ವಿತೀಯ !

ನಿಂದಕರು : (ವ್ಯಂಗ್ಯ) ಅ–ದ್ವಿತೀಯ !

(ರಾಜನು ಕೆಳಗೆ ಪ್ರಶಂಸಕ ನಿಂದಕರಿರುವ ಕಡೆ ಬರುವನು.)

ಪ್ರಶಂಸಕ ೧ : ಗಿಣಿರಾಜನನ್ನು ಭೇಟಿಯಾದಿರಾ ಅನ್ನದಾತ ? ಕುಶಲಪೂರ್ವಕವಾಗಿದೆ ತಾನೆ?

ನಿಂದಕ ೧ : ಗಿಣಿಯಪ್ಪನನ್ನು ಕಂಡಿರಾ ರಾಜನ್? ದುರ್ಬಲವಾಗಿಲ್ಲವೆ ಪ್ರಭು?

ರಾಜ : ಹೌದಲ್ಲ. ಗಿಣಿರಾಜನನ್ನು ಭೆಟ್ಟಿಯಾಗಲೇ ಇಲ್ಲ. ಶಿಕ್ಷಣ ವ್ಯವಸ್ಥೆಯನ್ನೂ ಪರಿಶೀಲಿಸಲಿಲ್ಲ. ಅಳಿಯರಾಜ !–(ಪುನಃ ಹಿಂದಕ್ಕೆ ಹೋಗುವನು.)

ಅಳಿಯ : ಪರಾಂಬರಿಸಿ ರಾಜಮಾವ. ಮೊದಲು ಪಠ್ಯಕ್ರಮವನ್ನು ಪರಿಶೀಲಿಸಬಹುದು. ಪಂಡಿತೋತ್ತಮರೆ, ಮುಂದೆ ಬನ್ನಿ. ಪಾಠಕ್ರಮವನ್ನು ಪ್ರದರ್ಶಿಸಿ.

(ಪಂಡಿತರುಗಳೆಲ್ಲ ಮುಂದೆ ಬಂದು ಓರಣವಾಗಿ ಕೂತು ಪ್ರಾರಂಭಿಸುವರು.)

ಪರಮ ಪಂಡಿತ : ಓಂ ಶ್ರೀ ಗಣೇಶಾಯ ನಮಃ–ಹೇಳು ಮಹಾ ಪಂಡಿತ.

ಮಹಾ ಪಂಡಿತ : ಓಂ ಶ್ರೀ ಗಣೇಶಾಯ ನಮಃ–ಹೇಳು ಮುಖ್ಯ ಪಂಡಿತ.

ಮುಖ್ಯ ಪಂಡಿತ : ಓಂ ಶ್ರೀ ಗಣೇಶಾಯ ನಮಃ–ಹೇಳು ಅಧೀನ ಪಂಡಿತ.

ಅಧೀನ ಪಂಡಿತ : ಓಂ ಶ್ರೀ ಗಣೇಶಾಯ ನಮಃ–ಹೇಳು ಸಾದಾ ಪಂಡಿತ.

ಸಾದಾ ಪಂಡಿತ : ಓಂ ಶ್ರೀ ಗಣೇಶಾಯ ನಮಃ–ಹೇಳು ಗಿಣಿರಾಜ !

(ಇದೇ ರೀತಿಯಲ್ಲಿ ಅ ಆ ಇ ಈಗಳನ್ನೂ ಶ್ಲೋಕಗಳನ್ನೂ ಹೇಳಿಕೊಡುವರು. ಕೊನೆಯಲ್ಲಿ ಎಲ್ಲ ಕೂಡಿ 'ರಾಜಾ ಪ್ರತ್ಯಕ್ಷ ದೇವತಾ । ರಾಜಸ್ಯ ಜಾಮಾತಾ ದ್ವಿತೀಯಾ ದೇವತಾ । ಶುಕಾಪಿ ಸಂಪ್ರತಿ ತೃತೀಯಾ ದೇವತಾ' ಎಂದು ಮುಗಿಸುವರು.)

ಅಳಿಯ : ರಾಜನ್, ಇವರೇ ಗಿಳಿರಾಜನಿಗೆ ಗಾಯನ ಕಲಿಸುವ ಮಹಾಗಾಯಿಕೆಯರು, ಗಾಂಧಾರ ದೇಶ ನಿವಾಸಿನಿಯರು.

ಗಾಯಕಿಯರು : (ಎದ್ದು ಬಂದು, ರಾಜ ಅಳಿಯರಿಗೆ ನಮಸ್ಕರಿಸಿ ಕೂತು ಸ್ವರಗಳನ್ನು ಹೇಳಿ, '–ಹೇಳು ಗಿಣಿರಾಜ' ಎನ್ನುವರು; ಮತ್ತೆ ಒಬ್ಬರೊಬ್ಬರೂ ಸ್ವರವಿಸ್ತರಣೆ ಮಾಡುತ್ತ ಗಿಣಿರಾಜನನ್ನು ಮರೆತು ಪರಸ್ಪರ ತಾವೇ ಸ್ವರ ಯುದ್ಧದಲ್ಲಿ ತೊಡಗುವರು.)

ಅಳಿಯ : ಹಂ, ಸಾಕು. ನರ್ತಕಿಯರೇ, ಮುಂದೆ ಬನ್ನಿ. ಮಹಾರಾಜ, ಇವರೇ ಕಾಂಚೀಪುರ ನಿವಾಸಿನಿಯರಾದ ಮಹಾ ನರ್ತಕಿಯರು.

(ನರ್ತಕಿಯರು ಮುಂದೆ ಬಂದು ನರ್ತನ ಮಾಡುವರು.)

ನಾಗರಿಕರು : ಅಮೋಘ ಸಂಗೀತ ! ಅದ್ಭುತ ನೃತ್ಯ !

ರಾಜ : ಶಿಕ್ಷಣ ವ್ಯವಸ್ಥೆ ಅತ್ಯುತ್ತಮವಾಗಿದೆ.

ಮಂತ್ರಿ : ಅಭೂತಪೂರ್ವ ಪ್ರಭು.

ನಾಗರಿಕರು : ಅಭೂತಪೂರ್ವ ! ಅಭೂತಪೂರ್ವ !

ನಿಂದಕರು : (ವ್ಯಂಗ್ಯ) ಅ–ಭೂತಪೂರ್ವ !

ರಾಜ : ಅಳಿಯರಾಜ, ಈ ಶಿಕ್ಷಣ ವ್ಯವಸ್ಥೆಯನ್ನು ನೋಡಿ ನಾವು ಸಂತೋಷ ಗೊಂಡಿದ್ದೇವೆ. ನಮ್ಮ ಪುತ್ರಿಯೂ ಆನಂದಪಟ್ಟಾಳು. ನಮಗೆ ನಿನ್ನ ಬಗ್ಗೆ ಹೆಮ್ಮೆಯೆನಿಸಿದೆ.

ನಾಗರಿಕರು : ಅಳಿಯರಾಜರಿಗೆ ಜಯವಾಗಲಿ !

ನಿಂದಕ ೧ : (ಮೆಲ್ಲಗೆ ಮುಂದೆ ಬಂದು) ಗಿಳಿಮರಿಯನ್ನು ನೋಡಿದಿರಾ ಪ್ರಭು?

ಅಳಿಯ : ಈ ಶ್ರಮ ಈ ವೈಭವ ಈ ವಿಜೃಂಭಣೆ ಎಲ್ಲವೂ ಗಿಣಿರಾಜನಿಗಾಗಿಯೇ ಪ್ರಭು. ಗಿಣಿರಾಜನ ಭಾಗ್ಯ, ಮತ್ತಾರಿಗೂ ದೊರಕದ ಮಹಾ ರಾಜಾತಿಥ್ಯವನ್ನು ಅದು ಇಂದು ಪಡೆಯುತ್ತಿದೆ.

ನಾಗರಿಕರು : ಗಿಣಿರಾಜರು ಮಹಾಭಾಗ್ಯಶಾಲಿಗಳು !

ನಿಂದಕ ೧ : ತಾವೇ ಸ್ವತಃ ನೋಡಿದಿರಾ ಪ್ರಭು ಗಿಳಿರಾಜನ ಭಾಗ್ಯವನ್ನು ಅಥವಾ ಅದರ ಅವಸ್ಥೆಯನ್ನು?

ರಾಜ : ಮಂತ್ರಿವರ, ಈಗಲೇ ಘೋಷಣೆ ಮಾಡಿಸು–ರಾಜ್ಯದಲ್ಲಿ ಯಾರೊಬ್ಬರೂ ಈ ನಿಂದಕರ ಮಾತಿಗೆ ಕಿವಿಗೊಡದಿರಲಿ. ಈ ನಿಂದಕರಿಗೆ ನಿಂದನೆಯೇ ದಿನನಿತ್ಯದ ವ್ಯವಹಾರವಾಗಿಬಿಟ್ಟಿದೆ.

ಮಂತ್ರಿ : ಅಪ್ಪಣೆ ಪ್ರಭು.

(ಎಲ್ಲರೂ ನಿಷ್ಕ್ರಮಿಸುವರು. ಪ್ರಶಂಸಕರು ನಿಂದಕರ ಕಡೆ ಗೇಲಿ ಮಾಡುತ್ತ ಹೋಗುವರು.)

ಡಂಗುರದವರು : (ಪ್ರವೇಶಿಸುತ್ತ) ಕೇಳಿರಿ...ಕೇಳಿರಿ...

ಡಂಗುರ ೧ : ಕಿವಿಗೊಟ್ಟು ಕೇಳಿರಿ, ಮನಸಿಟ್ಟು ಕೇಳಿರಿ...

ಡಂಗುರ ೨ : ಮಹಾರಾಜಾಜ್ಞೆ ಇದು. ಗಿಣಿರಾಜನ ಶಿಕ್ಷಣಕ್ರಮದ ನಿಂದನೆಯನ್ನು ಯಾರೂ ಕೇಳತಕ್ಕದ್ದಲ್ಲ.

ಡಂಗುರ ೧ : ಎಲ್ಲರೂ ಗಿಣಿರಾಜನ ಸೌಭಾಗ್ಯವನ್ನು ಪ್ರಶಂಶಿಸತಕ್ಕದ್ದು. ಹಾಡಿ ಹೊಗಳತಕ್ಕದ್ದು.

ಡಂಗುರದವರು : (ಒಟ್ಟಾಗಿ) ಕೇಳಿರಿ....ಕೇಳಿರಿ... (ನಿಷ್ಕ್ರಮಿಸುವರು)

* * *

(ರಾತ್ರಿ, ಪಂಜರದಲ್ಲಿರುವ ಗಿಳಿಮರಿ ಬಳಲಿ 'ಟೇಂ–' ಎಂದು ಕೂಗುತ್ತಿದೆ. ಪರಿಚರ್ಯೆಗಾಗಿ ಸಖಿಯರು ಹಾಡುತ್ತ ಕುಣಿಯುತ್ತ ಬರುವರು.)

ಸಖಿಯರು : ಏ ಗಿಣಿರಾಜ–

ಗಿಳಿಮರಿ : ಟೇಂ....ಟೇಂ....

ಸಖಿಯರು : ನಗು ಗಿಣಿರಾಜ_

ಗಿಳಿಮರಿ : ಟೇಂ....ಟೇಂ....

ಸಖಿಯರು : ನಲಿ ಗಿಣಿರಾಜ–

ಗಿಳಿಮರಿ : ಟೇಂ....ಟೇಂ....

ಸಖಿಯರು : ಥಾಥೈ ಥೈಯ್ಯ–

ಗಿಳಿಮರಿ : ಟೇಂ.....ಟೇಂ......

(ಇದೇ ರೀತಿ ಮುಂದೆ ಒಬ್ಬೊಬ್ಬರು ಒಂದೊಂದು ನುಡಿ ಹೇಳುತ್ತ ಅಭಿನಯಿಸುವರು. ಗಿಳಿ ಮಧ್ಯೆಮಧ್ಯೆ ಬಳಲಿ ಟೇಂ–ಟೇಂ ಎನ್ನುತ್ತಿದೆ.)

ಸಖಿಯರು : 'ಮಾತಾ ಕೇಳೋ । ಸುಮ್ಮನೆ ಕೂಡೋ । ಪಾಠಾ ಓದೋ । ಸಭ್ಯನಾಗೋ ।
ಚಿರೋಟಿ ಬೇಕೆ । ಪಾಯಸ ಬೇಕೇ । ಹೋಳಿಗೆ ಕೊಡಲೆ । ಪಾನಕ, ಲಾಡು ।
ಚಿನ್ನದ ತಟ್ಟೆ । ಬೆಳ್ಳೀ ಲೋಟಾ । ರತ್ನದ ಚಮಚಾ । ಮುತ್ತಿನ ಪೀಠ ।
ನರ್ತನ ಕಲಿಸ್ಲೇ। ಕಥೆಯೊಂದ ಹೇಳ್ಲೇ । ಒಗಟೂ ಬಿಡಿಸ್ಲೆ । ಸುದ್ದಿಯ ತಿಳಿಸ್ಲೆ।
ಚಂದ್ರ ತಕ್ಕೋ । ಗೊಂಬೆ ತಕ್ಕೋ । ಹೆಣ್ ಗಿಳಿ ತಕ್ಕೋ । ಬೇಕಾದ್ದು ತಕ್ಕೋ।'

(ಗಿಳಿಮರಿ ತುಂಬ ಬಳಲಿದೆ.)

ಸಖಿಯರು : 'ಗಿಳಿರಾಜನಿಗೆ ಏನೂ ಬೇಡ । ಏನೂ ಬೇಡ ।
ಪಾಠಾ ಬೇಡ । ಊಟ ಬೇಡ । ಏನೂ ಬೇಡ ।
ನಿದ್ದೆ ಬೇಕು । ಹೌದೇ ಹೌದು–ನಿದ್ದೆ ಬೇಕು ।
ಬನ್ನಿ ಬನ್ನಿ ನಾವೂನೂ ನಿದ್ದೆ ಹೋಗೋಣ....

(ಎಲ್ಲರು ವೃತ್ತಾಕಾರವಾಗಿ ಮಲಗಿ ನಿದ್ದೆ ಹೋಗುವರು.)

ಪರಮ ನಿರೀಕ್ಷಕ: (ನೇಪಥ್ಯದಿಂದ ಕೂಗುತ್ತ ಪ್ರವೇಶಿಸುವನು) ಎಚ್ಚರ ! ಎಚ್ಚರ ! ಎಚ್ಚರವಾಗಿರಿ. (ಸುತ್ತ ನೋಡಿ) ಅರೆ–ಗಿಣಿರಾಜ ನಿದ್ದೆಹೋಗಿದ್ದಾನೆ, ಸಖಿಯರೂ ನಿದ್ದೆ ಹೋಗಿದಾರೆ... ಈಗ ನಾನು ತಾನೇ ಏನುಮಾಡಲಿ? ನಾನೂ ನಿದ್ದೆ ಹೋಗುತ್ತೇನೆ. (ಮಲಗುವನು.)

ಮುಖ್ಯ ನಿರೀಕ್ಷಕ: (ನೇಪಥ್ಯದಿಂದ ಕೂಗುತ್ತ ಪ್ರವೇಶ) ಎಚ್ಚರ ! ಎಚ್ಚರ ! ಎಚ್ಚರವಾಗಿರಿ. ಸರ್ವರೂ

ಸದಾ ಎಚ್ಚರವಾಗಿರಿ !–(ನೋಡಿ) ಅರೆ– ಗಿಣಿರಾಜ ನಿದ್ದೆ ಹೋಗಿದ್ದಾನೆ, ಸಖಿಯರು ನಿದ್ದೆಹೋಗಿದ್ದಾರೆ, ಪರಮ ನಿರೀಕ್ಷಕನೇ ನಿದ್ದೆ ಹೋಗಿದ್ದಾನೆ– ಹುಂ, ಇನ್ನು ನಾನ್ಯಾಕೆ ಎದ್ದುಕೊಂಡಿರಬೇಕು? ನಾನೂ ನಿದ್ದೆ ಮಾಡುತ್ತೇನೆ. (ಮಲಗುವನು.)

ಅಲ್ಪ ನಿರೀಕ್ಷಕ : (ಒಳಗಿನಿಂದ ಕೂಗುತ್ತ ಪ್ರವೇಶ) ಎಚ್ಚರ ! ಎಚ್ಚರ ! ಎಚ್ಚರವಾಗಿರಿ ! ಎಚ್ಚರವಾಗಿಲ್ಲದವರಿಗೆ ಶಿಕ್ಷೆ ವಿಧಿಸಲಾಗುವುದು ! (ಆಕಳಿಸುತ್ತ) ಎಚ್ಚರ ! (ನೋಡಿ) ಅರೆ– ಗಿಳಿರಾಜನಿಗೆ ನಿದ್ದೆ, ಸಖಿಯರಿಗೆ ನಿದ್ದೆ... ಓ ಪರಮ ನಿರೀಕ್ಷನೇ ನಿದ್ದೆಹೋಗಿದ್ದಾನೆ...–ಆಂ, ಮುಖ್ಯ ನಿರೀಕ್ಷಕ ಕೂಡ ನಿದ್ದೆ ಮಾಡ್ತಿದಾನಲ್ಲ ! ಸರಿ, ಇನ್ನು ಅಲ್ಪ ನಿರೀಕ್ಷಕ ನಾನೊಬ್ಬ ಯಾಕೆ ಎಚ್ಚರವಾಗಿರಬೇಕು, ನಾನೂ ನಿದ್ದೆ ಹೋಗ್ತೇನೆ. (ಮಲಗುವನು.)

* * *

(ಈಗ ಗಿಳಿರಾಜನಿಗೆ ಕನಸು. ಹಿನ್ನೆಲೆಯಲ್ಲಿ ಶೋಕವಾದ್ಯ, ಶೋಕಗೀತ. ಒಂದೊಂದು ಕಡೆಯಿಂದ ಒಂದೊಂದೇ ಗಿಳಿ ಹಾರುತ್ತ ಹತ್ತಿರ ಬಂದ ಹಾಗೆ ಕಾಣುತ್ತದೆ. ಅವುಗಳನ್ನು ನೋಡುತ್ತ ಗಿಳಿಮರಿ ಒಮ್ಮೆ– 'ಅಕ್ಕಾ ಅಕ್ಕಾ, ಆ ಹಣ್ಣು ನಂಗೆ ಬೇಕು !', ಇನ್ನೊಮ್ಮೆ–'ಚಿಕ್ಕಪ್ಪ ಚಿಕ್ಕಪ್ಪ ನಂಗೆ ಆ ಜೋಳದ ತೆನೆಬೇಕು', ಮತ್ತೊಮ್ಮೆ–'ಚಿಕ್ಕಮ್ಮಾ, ನಂಗೆ ಆ ಆಲದ ಹಣ್ಣು ಕೊಡು', ಮತ್ತೆ–'ಅಮ್ಮಾ ಅಮ್ಮಾ, ನಾನೂ ಬರ್ತೇನೆ, ನಾನೂ ಆ ಕೊಂಬೆಮೇಲೆ ಕೂತ್ಕೋತೇನೆ'– ಎನ್ನುತ್ತ, ಅರಚುತ್ತದೆ. ತೇಲಿಬಂದ ಗಿಳಿಗಳು ಹಾಗೇ ತೇಲಿಹೋದಂತೆ ಭಾಸವಾಗುತ್ತದೆ. ಹಿನ್ನೆಲೆಯ ಕರುಣಗೀತಕ್ಕೆ ಹೊಂದಿ ಗಿಳಿಮರಿ ಗೋಳಿಡುತ್ತ, ಪಂಜರದ ಸರಳುಗಳಿಗೆ ಬಾಗಿಲಿಗೆ, ಮಾಡಿಗೆ ತಲೆ ಕುಕ್ಕಿಕೊಳ್ಳುತ್ತ ಕೊನೆಯಲ್ಲಿ ಕುಸಿದು ಬಿದ್ದು ಬಿಡುತ್ತದೆ.)

* * *

(ನೀರವ. ಕೊಂಚ ಹೊತ್ತಿನಲ್ಲಿ ಪ್ರಭಾತವಾದ್ಯ, ಪ್ರಭಾತದ ಗೀತ, ಬೆಳಗಿನ ಗಂಟೆ ಕೇಳುವದು. ಒಬ್ಬ ಸಖಿ ಎಚ್ಚೆತ್ತು ಸುತ್ತ ನಿದ್ದಿಸುತ್ತಿರುವವರನ್ನು ನೋಡುವಳು, ಗಿಳಿರಾಜನ ಕಡೆ ನೊಡುವಳು. ಗಿಳಿಮರಿ ಮೃತಾವಸ್ಥೆಯಲ್ಲಿ ಬಿದ್ದಿದೆ. ಗಾಬರಿಯಾಗಿ ಎಲ್ಲರನ್ನೂ ಎಬ್ಬಿಸುವಳು. ಎಲ್ಲರೂ ಏಳುವರು, ಗಾಬರಿಗೊಳ್ಳುವರು. 'ಗಿಳಿರಾಜ ! ಗಿಳಿರಾಜ !.... ನಡೆಯಿರಿ, ಹೋಗಿ ಸುದ್ದಿ ಕೊಡೋಣ' ಎನ್ನುತ್ತ ಕಾತರಗೊಂಡು ಎಲ್ಲರೂ ಹೋಗುವರು. ಕೆಳಭಾಗದಲ್ಲಿ ಪ್ರಶಂಸಕ ನಿಂದಕರು ಗಾಬರಿ ದುಃಖಗಳಿಂದ ಮೆಲ್ಲಗೆ ಪ್ರವೇಶಿಸುವರು.)

ಪ್ರಶಂಸಕ ೧ : ನಿಮ್ಮಲ್ಲಿ ಯಾರಿಗಾದರೂ ಗೊತ್ತೆ? ಯಾರಾದರೂ ಕೇಳಿದಿರಾ?

ಉಳಿದವರು : ಏನು? ಏನು?

ಪ್ರಶಂಸಕ ೧ : ಗಿಳಿರಾಜ ಈಗ ಮಾತಾಡೋದೇ ಇಲ್ವಂತೆ !

ಉಳಿದವರು : ಆಂ ?

ನಿಂದಕ ೧ : ಧ್ಯಾನಮಾಡ್ತಾ ಇದೆಯೋ ಏನೋ !

ಪ್ರಶಂಸಕ ೧ : ಗಿಳಿರಾಜ ಈಗ ಹಾಡೋದೂ ಇಲ್ವಂತೆ.

ಉಳಿದವರು : ಹೌದೇ?

ನಿಂದಕ ೧ : ಪ್ರಲಾಪಿಸ್ತಾ ಇದೆಯೋ ಏನೋ !

ಪ್ರಶಂಸಕ ೧ : ಏನೇನೂ ತಿನ್ನೋದಿಲ್ವಂತೆ.

ಉಳಿದವರು : ಅಯ್ಯೋ, ಅಯ್ಯೋ,

ನಿಂದಕ ೧ : ಯಾಕೆ, ರಾಶಿರಾಶಿ ಪುಸ್ತಕ ಇವೆಯಲ್ಲ, ತಿನ್ನಬಹುದಿತ್ತು !

ಪ್ರಶಂಸಕ ೧ : ನೀರೂ ಕುಡಿಯೋದಿಲ್ವಂತೆ.

ಉಳಿದವರು : ಏನಾಯ್ತಪ್ಪ !

ನಿಂದಕ ೧ : ಜ್ಞಾನಾಮೃತ ಕುಡೀತಾ ಇರಬಹುದೇನೋ.

ಪ್ರಶಂಸಕ ೧ : ಹಾರೋದಿಲ್ವಂತೆ, ನಡೆಯೋದಿಲ್ವಂತೆ, ಮೈ ಅಲುಗೋದಿಲ್ವಂತೆ.

ಉಳಿದವರು : ಅಯ್ಯೋ, ಅಯ್ಯೋ.

ನಿಂದಕ ೧ : ಸತ್ತೇಹೋದ ಮೇಲೆ ಹಾರುತ್ತೋ, ನಡೆಯುತ್ತೋ, ಮೈ ಅಲುಗುತ್ತೋ?

ಪ್ರಶಂಸಕ ೧ : ಸಾಕು ನಿಲ್ಲಿಸಿ ನಿಮ್ಮ ತಲೆಹರಟೆ. ರಾಜನ ಗಿಳಿ ಸಾಯೋದು ಅಂದ್ರೇನು?

ನಿಂದಕ ೧ : ತಪ್ಪಾಯ್ತು. ರಾಜನ ಗಿಳಿ ಸಾಯೋದು ಅಂದ್ರೇನು, ಅಮರವಾಗುತ್ತೆ !

ಪ್ರಶಂಸಕರು : (ಒಟ್ಟಾಗಿ) ರಾಜನ ಗಿಳಿ ಸಾಯೋದು ಅಸಂಭವ !

ನಿಂದಕ ೧ : ಸಾಯೋದು ಅಸಂಭವ? –ನಿಜವಾಗಿ ಗಿಳಿಮರಿ ಸತ್ತೇ ಹೋಗಿದೆ.

ಪ್ರಶಂಸಕರು : (ಒಟ್ಟಾಗಿ) ಗಿಳಿಮರಿ ಸತ್ಹೋಗಿಲ್ಲ.

ನಿಂದಕರು : (ಒಟ್ಟಾಗಿ) ಸತ್ಹೋಗಿದೆ.

ಪ್ರಶಂಸಕರು : ಸತ್ಹೋಗಿಲ್ಲ.

ನಿಂದಕರು : ಹೋಗಿದೆ.

ಪ್ರಶಂಸಕರು : ಇಲ್ಲ.

ನಿಂದಕರು : ಹುಂ.

ಪ್ರಶಂಸಕರು : ಊಹ್ಞುಂ.

ನಿಂದಕರು : (ಹೌದು ಎಂದು ತಲೆಯಾಡಿಸುವರು.)

ಪ್ರಶಂಸಕರು : (ಅಲ್ಲ ಎಂದು ತಲೆಯಾಡಿಸುವರು.)

ಪ್ರಶಂಸಕ ೧ : (ಮುಖ ಸಪ್ಪಗಾಗಿ) ಅಂದರೆ ನಮ್ಮ ಮುದ್ದಿನ ಗಿಳಿ....ಈ ಅದ್ಭುತ ಪಂಜರ ಶಾಲೇಲಿ ಸುಸಂಸ್ಕೃತನಾದ ಭಾಗ್ಯದ ಗಿಳಿ.... ಅಯ್ಯೋ, ಗಿಳಿಮರಿಯ ಸತ್ತ ಸುದ್ದಿ ಯಾರು ಕೊಡ್ತಾರೆ?

ನಿಂದಕ ೧ : ಯಾರಾದರೂ ಕೊಟ್ಟಾರು ಗಿಳಿಮರಿ ಸತ್ತ ಸುದ್ದಿ !

(ಜನ ಗುಂಪುಗುಂಪಾಗಿ ಸೇರುತ್ತಿದ್ದಾರೆ. ತಂತಮ್ಮಲ್ಲೇ ಪಿಸುಗುಟ್ಟಿಕೊಳ್ಳುತ್ತಿದ್ದಾರೆ. ಇವರಿಗೆ ಯಾರೂ ಉತ್ತರಿಸುವುದಿಲ್ಲ. ಮುಖ ಮರೆಮಾಡಿಕೊಳ್ಳುತ್ತಾರೆ. ಸನ್ನಿವೇಶ ದುಃಖದ ಅಂಚಿನಲ್ಲಿ ಗಂಭೀರವಾಗಿದೆ. ರಕ್ಷಕದಂಡದ ಸದ್ದು ಕೇಳಿಸುತ್ತದೆ, ಎಲ್ಲರೂ ನಿಶ್ಶಬ್ದವಾಗಿ ಪ್ರತಿಮೆಯಂತೆ ನಿಲ್ಲುತ್ತಾರೆ. ರಕ್ಷಕರ ಪ್ರವೇಶ.)

ಪ್ರಶಂಸಕ ೧ : (ಮುಂದೆ ಹೋಗಿ) ನೀವು ಹೇಳಿ, ದಯವಿಟ್ಟು ಹೇಳಿ. ನಮ್ಮ ಮುದ್ದಿನ ಗಿಳಿಮರಿಗೆ ಏನಾಗಿದೆ?

(ರಕ್ಷಕರು ಒಬ್ಬರನ್ನೊಬ್ಬರು ನೋಡಿಕೊಳ್ಳುತ್ತಾರೆ. ನೀರವವಾಗಿ ಹಾಗೇ ಹೊರಟು ಹೋಗುತ್ತಾರೆ. ಮತ್ತೆ ಗಜಿಬಿಜಿ. ಡಂಗುರದವರು ನೀರವವಾಗಿ ಪ್ರವೇಶಿಸುತ್ತಾರೆ. ಮತ್ತೆ ನಿಶ್ಶಬ್ದ.)

ಪ್ರಶಂಸಕ ೧ : (ಮತ್ತೆ ಮುಂದೆ ಹೋಗಿ) ನೀವಾದರೂ ಹೇಳಿ, ನಮ್ಮ ಮುದ್ದಿನ ಗಿಳಿಮರಿಗೆ ಏನಾಗಿದೆ?

(ಡಂಗುರದವರು ಒಬ್ಬರಿಗೊಬ್ಬರು ಸನ್ನೆಮಾಡಿಕೊಂಡು ಮೌನವಾಗಿ ಆಚೆ ಹೋಗುವರು.)

ನಿಂದಕ ೧ : (ಅವನಿಗೆ ಎದುರಾಗಿ) ಹೇಳಿ, ನಮಗೆ ಹೇಳಿ, ಗಿಳಿಮರಿಗೆ ಏನಾಗಿದೆ?

(ಅಲ್ಲೂ ಮಾತಾಡದೆ ಮುಂದುವರೆಯುತ್ತಾರೆ. ಜನರನ್ನೆಲ್ಲಾ ಕಂಡು ಆವೇಶ ಉಕ್ಕಿದಂತಾಗಿ 'ಕೇಳಿರಿ.....' ಎಂದು ಕೂಗಲು ದನಿಯೆತ್ತಿ ಫಕ್ಕನೆ ದುಃಖ ಚಿಮ್ಮಿ ಹೇಗೋ ಅದನ್ನು ಅಡಗಿಸಿಕೊಂಡು ನಿಷ್ಕ್ರಮಿಸುತ್ತಾರೆ. ಗಜಿಬಿಜಿ. ದಂಡದ ಸದ್ದು. ರಕ್ಷಕರು, ಅಳಿಯ ಮೌನವಾಗಿ ಪ್ರವೇಶಿಸಿ ಜನರನ್ನು ನೋಡುತ್ತ ಹೋಗುತ್ತಾರೆ. ಅವರು ಹೋದ ಮೇಲೆ ಮತ್ತೆ ಜನರಲ್ಲಿ ಪಿಸುಮಾತು, ಶೋಕ.)

ಪ್ರಶಂಸಕ ೧ : ಅಯ್ಯೋ ಭಗವಂತ, ಗಿಳಿಮರಿ ಸತ್ತೇ ಹೋಗಿರಬೇಕು.

ನಿಂದಕ ೧ : ಸತ್ತೇ ಹೋಗಿರಬೇಕು ಏನು, ಸತ್ತೇ ಹೋಗಿದೆ.

(ದುಃಖದಿಂದ ಎಲ್ಲ ಕುಕ್ಕರಿಸುವರು. ನೇಪಥ್ಯದಲ್ಲಿ ವಂದಿಗಳ ಗಂಭೀರ ಧ್ವನಿ. ಎಲ್ಲರೂ ಎದ್ದು ನಿಲ್ಲುವರು. ವಂದಿಗಳು, ರಾಜ, ಮಂತ್ರಿ, ಅಳಿಯ ಪ್ರವೇಶಿಸುವರು.)

ವಂದಿಗಳು : ಖಗಮೃಗಕೃಪಾಳು ಗಿಡಮರದಯಾಳು ವಿದ್ಯಾವತಂಸ ಪ್ರಜ್ಞಾವಧಾನಿ ಕಣಕಣಕೂ ವಿದ್ಯಾದಾನಿ ವಾಚಾಳಪುರವರಾಧೀಶ್ವರಾ..... (ಧ್ವನಿ ಅಡಗಿ ಹೋಗುತ್ತದೆ.)

ರಾಜ : ಅಳಿಯರಾಜ, ಗಿಳಿರಾಜನ ಸಮಾಚಾರವೇನು?

ಅಳಿಯ : ಪ್ರಶಂಸನೀಯ, ಪ್ರಭು! ಇಂದೇ ವಸಂತಾಗಮನ. ಗಿಳಿರಾಜ ಸಭ್ಯನಾಗಿದ್ದಾನೆ, ಸುಸಂಸ್ಕೃನಾಗಿದ್ದಾನೆ. ಆ ಅಶುದ್ಧ ಆತ್ಮದ ಅವಿದ್ಯೆ ಮಾಯವಾಗಿದೆ. ವನ್ಯಪ್ರವೃತ್ತಿ ನಾಶವಾಗಿದೆ. ಗಿಳಿರಾಜ ನಖಶಿಖಾಂತ ನಾಗರಿಕನಾಗಿದ್ದಾನೆ.

ರಾಜ : ಶುಭ ಸಮಾಚಾರ. ಈಗ ಗಿಳಿರಾಜ ಸ್ವತಂತ್ರನಾಗಬಹುದು.

ಅಳಿಯ : ಇಲ್ಲ ಪ್ರಭು, ಗಿಳಿರಾಜನಿಗೆ ಸ್ವಾತಂತ್ರ್ಯದ ಪಾಠವನ್ನು ನಾವು ಕಲಿಸಿಲ್ಲ.

ರಾಜ : ಅಂದರೆ, ಅದು ತಾನಾಗಿ ಹಾರಲಾರದೆ?

ಅಳಿಯ : ಹಾರಲಾರದು ಪ್ರಭು.

ರಾಜ : ತಾನಾಗಿ ಹಾಡಲಾರದೆ?

ಅಳಿಯ : ಹಾಡಲಾರದು ಪ್ರಭು.

ರಾಜ : ಕಾಳು ಕಂಡು ಮೊದಲಿನ ಹಾಗೆ ಈಗ ಚೀರಲಾರದೆ?

ಅಳಿಯ : ಚೀರಲಾರದು ಪ್ರಭು.

ರಾಜ : ಗಿಳಿಗೆ ಈಗ ಅದೊಂದೂ ಬರುವುದಿಲ್ಲವೇ?

ಅಳಿಯ : ಇಲ್ಲ, ಪ್ರಭು. ಹಾರಾಟ ಚೀರಾಟ ಮುಂತಾಗಿ ಅವೆಲ್ಲ ಶುಕಪಕ್ಷಿಯ ಅವಿದ್ಯೆಗೆ ಮೂಲ ಕಾರಣಗಳಾಗಿದ್ದವು. ಈಗ ಅವೆಲ್ಲವನ್ನೂ ನಾಶಪಡಿಸಲಾಗಿದೆ.

ರಾಜ : ಆಗಲಿ. ನಾವೇ ಈಗ ಗಿಳಿಮರಿಯನ್ನು ಮುಕ್ತಗೊಳಿಸೋಣ. ಈ ಸಭ್ಯ ಸುಸಂಸ್ಕೃತ ಶುಕಪಕ್ಷಿ ಕಾಡಿಗೆ ಹಿಂತಿರುಗಿ ಉಳಿದ ಪಕ್ಷಿಗಳನ್ನೆಲ್ಲ ಸಭ್ಯವಾಗಿಸಲಿ.

ಮಂತ್ರಿ : ಸೇವಕರೆ, ಗಿಳಿರಾಜನನ್ನು ಕರೆತನ್ನಿ.

(ಸೇವಕರು ಮೃತಪ್ರಾಯವಾದ ಗಿಳಿಯನ್ನು ರಾಜನ ಎದುರು ಹೊತ್ತು ತರುವರು. ಅದೀಗ ಸೇವಕರ ಆಧಾರದ ಮೇಲೆ ನಿಂತಿದೆ. ಕೂಗಲೂ ತ್ರಾಣವಿಲ್ಲ.)

ರಾಜ : (ಗಿಳಿಯ ತಲೆಯನ್ನು ನೇವರಿಸಿ) ಹೇ ಶುಕವೇ, ನೀನೀಗ ಸುಶಿಕ್ಷಿತ, ಸುಸಂಸ್ಕೃತ, ಸಭ್ಯ ನಾಗರಿಕ. ನೀನೀಗ ಮುಕ್ತ, ಸ್ವತಂತ್ರ. ಇಲ್ಲಿ ಕಲಿತ ನೂರಾರು ನಾಗರಿಕ ವಿದ್ಯೆಗಳನ್ನು ನಿನ್ನ ಕಾಡಿಗೆ ಹೋಗಿ ಪ್ರಚಾರ ಮಾಡು. ಮಹಾವಾಚಾಳಪುರದ ಸಭ್ಯ ನಾಗರಿಕತೆಯನ್ನು ದೂರದೂರ ಪ್ರಸರಿಸು ಹೋಗು.

(ಗಿಳಿ ಧೊಪ್ಪನೆ ನೆಲಕ್ಕೆ ಬೀಳುವುದು. ಅಷ್ಟರಲ್ಲಿ ವಂದಿಗಳು ಪುನಃ ಬಿರುದು ಹೇಳುತ್ತ ಹೊರಡುವರು. ರಾಜ, ಅಳಿಯ, ಮಂತ್ರಿ ನಿಷ್ಕ್ರಮಿಸುವರು. ಉಳಿದವರೂ ಗುಂಪುಗುಂಪಾಗಿ ನಿಷ್ಕ್ರಮಿಸುವರು. ರಕ್ಷಕರು ಪಂಜರವನ್ನು ನೇಪಥ್ಯಕ್ಕೆ ತಳ್ಳಿ ಹೋಗುವರು. ರಂಗ ಕತ್ತಲಾಗುತ್ತದೆ.)

* * *

(ವಸಂತ ವೈಭವದ ಮತ್ತೊಂದು ಅರುಣೋದಯವಾಗುತ್ತದೆ. ನಾಟಕದ ಆರಂಭದಲ್ಲಿ ಕೇಳಿದ ಆಲಾಪ ಹಾಡು ಮೊದಲಾಗುತ್ತದೆ. ಅದನ್ನನುಸರಿಸಿ ಗಿಳಿಗಳು ತಂಡತಂಡವಾಗಿ ಪ್ರವೇಶಿಸಿ ವಿಹರಿಸುತ್ತವೆ, ಹಾಡು–

ದೂರ ದೂರ ದೂರ ದೂರ ಗಗನಕೆ
ದೂರ ದೂರ ದೂರ ದೂರ ಕ್ಷಿತಿಜಕೆ
ಹಾರೋಣ ಬಾ.....ಹಾರೋಣ ಬಾ... ಇತ್ಯಾದಿ.

(ಗಿಳಿಗಳು ಕೂಗುತ್ತ ಕುಣಿಯುತ್ತ ವಿಹರಿಸುತ್ತಿದ್ದಂತೆ ಮೃತಪ್ರಾಯವಾಗಿದ್ದ ಗಿಳಿಮರಿ ಕ್ರಮೇಣ ಎಚ್ಚರಗೊಳ್ಳುತ್ತದೆ. ಯತ್ನಿಸಿ ಯತ್ನಿಸಿ ಕೂಗಲು ತೊಡಗುತ್ತದೆ. ಏಳುತ್ತ ಬೀಳುತ್ತ ಕ್ರಮೇಣ ಗಿಳಿಗಳ ತಂಡವನ್ನು ಸೇರಿಕೊಳ್ಳುತ್ತದೆ. ಎಲ್ಲ ಕೂಡಿ ಹರ್ಷದಿಂದ ಕುಣಿಯುತ್ತ ನಿಷ್ಕ್ರಮಿಸುತ್ತಾರೆ.)

# ಮುದುಕ ಸೆಟ್ಟಿಯೂ ಮೂವರು ಮಕ್ಕಳೂ

ಐ.ಕೆ. ಬೊಳುವಾರು

## ಪಾತ್ರಗಳು

ಮುದುಕ ಸೆಟ್ಟಿ
ಹೆಡ್ಡ
ದಡ್ಡ
ಒಡ್ಡ
ಊರಿನವರು
ಮರಕಟುಕರು
ಬಂಡೆ ಒಡೆಯುವವರು
ಮರಗಳು
ಬಂಡೆಗಳು
ನದಿ
ಡಂಗುರದವನು
ಸೈನಿಕರು
ಅರಸ

# ಮುದುಕ ಸೆಟ್ಟಿಯೂ ಮೂವರು ಮಕ್ಕಳೂ

(ಹಾಡುಗಾರರು ಹಾಡುತ್ತಾರೆ.)

ಬಹಳ ಹಿಂದೆ ತುಂಬಾ ಹಿಂದೆ
ಪಂಜೆಯವರ ಊರಿನಲ್ಲಿ
ಒಬ್ಬ ಮುದುಕ ಸೆಟ್ಟಿಯಿದ್ದಾ
ಅವಗೆ ಮೂರು ಮೊಮ್ಮಕ್ಕಳು

ಹೆಡ್ಡ ದಡ್ಡ ಒಡ್ಡ ಎಂಬುದು
ಅವರ ಹೆಸರು ಕೇಳಿರಣ್ಣಾ
ದೊಡ್ಡವ ಹೆಡ್ಡ ನಡುವಣ ದಡ್ಡ
ಹಿರಿಯವ ಒಡ್ಡ ಕೇಳಿರೊ

ಹೆಡ್ಡನೆಂದರೆ ಹೆಡ್ಡನಲ್ಲ ಗಟ್ಟಿ ಮುಟ್ಟು
ದಡ್ಡನೆಂದರೆ ದಡ್ಡನಲ್ಲ ಕಪ್ಪು ಗಿಡ್ಡ
ಒಡ್ಡನೆಂದರೆ ಒಡ್ಡನಲ್ಲ ಚುರುಕು ಜಾಣ
ಹೆಡ್ಡ ದಡ್ಡ ಒಡ್ಡ ಎಂಬುದು ಅವರ ಹೆಸರು ಕೇಳಿರೊ.

ಮುದುಕ ಸೆಟ್ಟಿ : (ಮಕ್ಕಳನ್ನು ಕರೆದು) ಏಯ್ ಹೆಡ್ಡಾ, ಓ ದಡ್ಡಾ, ಲೇ ಒಡ್ಡಾ, ಬನ್ರೋ ಇಲ್ಲಿ...(ಮೂವರೂ ಬರುತ್ತಾರೆ) ಬನ್ರೋ... ನೋಡಿ ಮಕ್ಕಳೇ, ನಾನೀಗ ಮುದುಕನಾಗಿದ್ದೇನೆ. ಹಿಂದಿನ ಹಾಗೆ ಕೆಲಸ ಮಾಡಲಿಕ್ಕೆ ಆಗ್ತಾ ಇಲ್ಲ. ಇನ್ನು ನೀವು ನಿಮ್ಮಿಂದಾಗುವ ಕೆಲಸ ಮಾಡಬೇಕು. ಕೆಲಸ ಮಾಡಿ ಹಣ ಸಂಪಾದನೆ ಮಾಡಿ. ದುಡಿಮೆ ಯಾವುದೇ ಆಗಿರಲಿ. ಅದರಲ್ಲಿ ಪ್ರೀತಿಯಿಟ್ಟು ಕೆಲಸ ಮಾಡಿರಿ.

ಮೂವರೂ : ಹಾಗೇ ಆಗಲಿ ಅಜ್ಜಾ...

ಹೆಡ್ಡ : ಅಜ್ಜ ಹೇಳಿದ ಹಾಗೆ ನಾವೇನಾದ್ರೂ ಕೆಲಸ ಹುಡುಕಬೇಕಾಗಿದೆ. ನಾವು ಎಲ್ಲಿಗೆ ಹೋಗೋಣ?

ದಡ್ಡ : ಎಲ್ಲಿಗಾದರೂ ಹೋಗಲೇಬೇಕಲ್ಲ. ಯಾರಿಗೆ ಗೊತ್ತು. ಎಲ್ಲಾದರೂ ಹೋದ ರಾಯಿತು.

ಒಡ್ಡ : ನಾನು ಅರಸರ ಮನೆಗೆ ಹೋಗುತ್ತೇನೆ.

ಹೆಡ್ಡ : ಏನು? ಅರಸರ ಮನೆಗೆ ! ಎಲಾ ಒಡ್ಡ ! ಅರಸರು ಅಂದರೆ ಏನೆಂದು ತಿಳಿದಿದೆಯೇ?

ದಡ್ಡ : ಅರಸರು ಎಂದರೆ ಏನೆಂದು ತಿಳಿಯಲಾರದ ಒಡ್ಡ ಅರಮನೆಗೆ ಹೋಗ್ತಾನಂತೆ....

(ನಗುತ್ತಾರೆ.)

ಒಡ್ಡ : ಯಾಕೆ ನಗ್ತೀರಿ? ಅರಮನೆ ಬಹಳ ದೊಡ್ಡದು. ಅಲ್ಲಿ ಹೋದರೆ ನಮಗೆ ಖಂಡಿತವಾಗಿಯೂ ಕೆಲಸ ದೊರಕುತ್ತದೆ. ಆ ಮನೆ ನಮ್ಮ ಮನೆಯ ಹಾಗೆ ಬಿದಿರು ಕಂಬದ, ಹುಲ್ಲು ಚಾವಣಿಯ, ಸಗಣಿ ಸಾರಣೆಯ ಗುಡಿಸಲು ಅಲ್ಲ... ಅರಮನೆ ಅಂದರೆ ಬಹಳ ದೊಡ್ಡದಾಗಿರುತ್ತದೆ. ಹತ್ತು ಹದಿನೆಂಟು ಬಾಗಿಲು. ನೂರಾರು ಕಿಟಕಿ... ಹವಳದ ಕಂಬ, ಚಿನ್ನದ ಗೋಡೆ, ಬೆಳ್ಳಿಯ ಮಾಡು, ರತ್ನದ ಕಲಶ ಎಲ್ಲ ಇರುತ್ತದೆ. ನಾನು ಅಲ್ಲಿಗೆ ಹೋಗಿಯೇ ಹೋಗುತ್ತೇನೆ.

ದಡ್ಡ : ನೀನು ಅಲ್ಲಿಗೆ ಹೋಗಿ ಯಾವ ಕೆಲಸ ಮಾಡುತ್ತೀಯ?

ಒಡ್ಡ : ನಮ್ಮ ನಾಡಿನ ಅರಸರ ಅರಮನೆಯ ಮುಂಭಾಗದಲ್ಲಿ ಒಂದು ದೊಡ್ಡ ಆಲದ ಮರ ಇದೆಯಂತೆ. ಅದು ಬೆಳೆದು ಬೆಳೆದು ಬಹಳ ಎತ್ತರಕ್ಕೆ ಏರಿ ಚಾವಡಿಯ ಮೇಲೆ ತುಂಬಾ ಕತ್ತಲಾಗಿದೆಯಂತೆ. ಯಾರು ಅದನ್ನು ಕಡಿದು ಬೀಳಿಸುತ್ತಾರೋ ಅವರಿಗೆ ಮೂರು ಚೀಲ ಬಂಗಾರದ ನಾಣ್ಯಗಳನ್ನು ಕೊಡುತ್ತಾರಂತೆ.

ಹೆಡ್ಡ, ದಡ್ಡ : ಏನು? ಮೂರು ಚೀಲ ಬಂಗಾರದ ನಾಣ್ಯಗಳು !

ಒಡ್ಡ : ಹ್ಞಾ..... ನಾನು ಹೋಗಿ ಆ ಮರವನ್ನು ಅದೇನೆಂದು ಪರೀಕ್ಷಿಸುತ್ತೇನೆ. ಮೂರು ಚೀಲ ಬಂಗಾರದ ನಾಣ್ಯಗಳನ್ನು ತರುತ್ತೇನೆ.

ಹೆಡ್ಡ : ನನಗಿಂತ ಮೊದಲು ನೀನು ಈ ಕೆಲಸ ಮಾಡಲಿಕ್ಕುಂಟೇ...?

ದಡ್ಡ : ನಾನು ಮೊದಲು ಹೋಗಿ ಅದನ್ನು ಕಡಿಯದಿದ್ದರಲ್ಲವೇ ನೀನು ಕಡಿಯುವುದು.

ಒಡ್ಡ : ಯಾರೇ ಆದರೂ ಪರವಾಗಿಲ್ಲ. ಬನ್ನಿ, ನಾವು ಮೂವರೂ ಒಟ್ಟಾಗಿಯೇ ಅಲ್ಲಿಗೆ ಹೋಗೋಣ, ಬನ್ನಿ...

(ಮೂವರೂ ಪಯಣ ಹೊರಡುತ್ತಾರೆ. ರಸ್ತೆಯಲ್ಲಿ ಬಗೆಬಗೆಯ ಜನರು, ವಾಹನಗಳು, ಕಟ್ಟಡಗಳು ಸಿಗುತ್ತವೆ. ಒಡ್ಡ ಅವರೆಲ್ಲರನ್ನೂ ಪ್ರಶ್ನಿಸಿ ವಿಚಾರಗಳನ್ನು ತಿಳಿದುಕೊಳ್ಳುತ್ತಾನೆ. ಹೆಡ್ಡ, ದಡ್ಡರು ಬೇಕೋ ಬೇಡವೋ ಅನ್ನುವವರಂತೆ ಹ್ಞೂಗುಟ್ಟುತ್ತಿದ್ದಾರೆ. ಊರು ಮುಗಿದು ಕಾಡುದಾರಿ ಬಂದಿದೆ. ಕೊಡಲಿಯಿಂದ ಮರ ಕಡಿಯುವವರ ಸದ್ದು ಕೇಳಿಸುತ್ತದೆ.)

ಒಡ್ಡ : ಅಣ್ಣಂದಿರೇ...ಏನದು ಸದ್ದು? ಯಾಕೆ ಆ ಸದ್ದು ಬರ್ತಾ ಇದೆ? ಎಲ್ಲಿಂದ ಆ ಸದ್ದು ಕೇಳ್ತಿರೋದು? ಈ ಸದ್ದು ಯಾರು ಮಾಡ್ತಿರಬಹುದು?

ಹೆಡ್ಡ : ಅದೆಲ್ಲಾ ನಮಗೆ ಗೊತ್ತಿಲ್ಲ. ಕೊಡಲಿಯ ಶಬ್ದ ಕೇಳ್ತಾ ಇಲ್ಲವೇ...?

ದಡ್ಡ : ನಿನಗೆಷ್ಟು ಕೇಳ್ತಾ ಇದೆಯೋ ಅಷ್ಟೇ ನಮಗೂ ಕೇಳಿಸೋದು...

ಹೆಡ್ಡ : ಅದರ ಬಗ್ಗೆ ಈ ರೀತಿ ಪ್ರಶ್ನಿಸಲಿಕ್ಕೆ ಏನಿದೆ? ಸುಮ್ನೆ ಮಾತನಾಡದೆ ನಮ್ಮ ಜೊತೆ ಬಾ....

ಒಡ್ಡ : ಯಾವುದನ್ನೂ ಪ್ರಶ್ನಿಸಿ ಉತ್ತರ ಪಡೆದು ನಿಜ ತಿಳಿಯುವುದು ನನ್ನ ಹವ್ಯಾಸ. ಆ ಸದ್ದು ಏನು? ಅದು ಏಕೆ ಉಂಟಾಗುತ್ತಿದೆ? ಅದು ಹೇಗೆ ಉಂಟಾಗುತ್ತಿದೆ? ಅದು ಎಲ್ಲಿ ಉಂಟಾಗುತ್ತಿದೆ? ಇದನ್ನೆಲ್ಲಾ ತಿಳಿಯದೆ ನಾನು ಮುಂದಕ್ಕೆ ಬರುವುದಿಲ್ಲ...

ಹೆಡ್ಡ : ಆಗಲಿ ನಿನ್ನ ಇಷ್ಟದಂತೆಯೇ ಆಗಲಿ. ಹೋಗಿ ಬೇಕಾದದ್ದನ್ನೆಲ್ಲ ನೋಡಿಯೇ ಬರುವಿಯಂತೆ. ಮರ ಕಡಿಯುವ ಕೊಡಲಿಯನ್ನು ನೋಡುವುದಕ್ಕೆ ಇಷ್ಟು ಉತ್ಸಾಹ... ಇಷ್ಟು ಓಟ ಯಾಕೆ?

ದಡ್ಡ : ನೀನು ನಿಧಾನಕ್ಕೆ ನೋಡಿ ಬಾ... ನಾವು ನಮ್ಮಷ್ಟಕ್ಕೆ ಹೋಗುತ್ತೇವೆ.

(ಒಡ್ಡ ಚಲಿಸಿ ಕಾಡಿನ ಒಳ ಪ್ರವೇಶಿಸುತ್ತಾನೆ. ಹಲವು ಮಂದಿ ಮರಕಟುಕರು ಮರ ಕಡಿಯುತ್ತಿದ್ದಾರೆ. ಹಾಡುಗಾರರು ಹಾಡುತ್ತಾರೆ.)

ಬನ್ನಿರೊ ಬನ್ನಿರಣ್ಣ ಕೋಲು ಕೋಲೆ
ತನ್ನಿರೊ ತನ್ನಿರಣ್ಣ ಕೋಲು ಕೋಲೆ
ಕಾಡನು ಕಡಿದರೆ ಮಳೆಯೇ ಬಾರದು ಕೋಲು ಕೋಲೆ
ಕಾಡು ಮರಗಳ ಉಳಿಸಿ ಬೆಳೆಸಿರೊ ಕೋಲು ಕೋಲೆ

ಸುಂದರ ಬನದ ಸುತ್ತಲ ಕಾಡು ಕೋಲು ಕೋಲೆ
ಕಟುಕರ ಕೊಡಲಿಯ ಏಟಿಗೆ ಕರಗಿತು ಕೋಲು ಕೋಲೆ

ಫಳ ಫಳ ಹೊಳೆಯುವ ಕೊಡಲಿಯ ಇಳಿಸಿ ಕೋಲು ಕೋಲೆ
ಕೊಡಲಿಯ ಏಟಿಗೆ ಕಾಡೇ ನಡುಗಿತು ಕೋಲು ಕೋಲೆ

ಒಡ್ಡ : ಅಯ್ಯೋ ಕಡಿಯಬೇಡಿ ಕಡಿಯಬೇಡಿ... ಅರಣ್ಯನಾಶ ಅಂದರೆ ಮಾನವಕುಲದ ನಾಶ... ದಯವಿಟ್ಟು ಕಡಿಯಬೇಡಿ...

ಒಬ್ಬ : ಹೇಯ್ ಯಾವನಯ್ಯ ನೀನು... ಏನು ಹೇಳ್ತಾ ಇದೀಯ...

ಒಡ್ಡ : ನಾನು ಒಡ್ಡ– ಇದೇ ಕಾಡಿನ ಸಮೀಪದಲ್ಲಿರುವ ಪಂಜೆಯವರ ಊರಿನವನು. ದಯವಿಟ್ಟು ಈ ಮರಗಳನ್ನು ಕಡಿಯಬೇಡಿ.

ಮರ – ೧ : (ಪ್ರೇಕ್ಷಕರೊಂದಿಗೆ) ನಿಮಗೆ ಗೊತ್ತಿದೆಯೇ... ನಮ್ಮ ಸ್ವಾರ್ಥಗಳಿಗಾಗಿ ಬೃಹತ್ ಉದ್ದಿಮೆದಾರರು ಬಡ ಆದಿವಾಸಿಗಳಿಂದ ಕೂಲಿಯಾಳುಗಳಿಂದ ಅರಣ್ಯಗಳನ್ನು ನಾಶಪಡಿಸುತ್ತಿದ್ದಾರೆ. ಈಗ ಈ ಆದಿವಾಸಿಗಳಿಗೆ ಬದುಕಲು ಉರುವಲು ಯಾವುದಕ್ಕೂ ಗತಿ ಇಲ್ಲದಂತಾಗಿದೆ.

ಒಡ್ಡ : ದಯವಿಟ್ಟು ಕಾಡು ಕಡಿಯಬೇಡಿ. ಯಾಕೆ ನೀವು ಹೀಗೆ ಕಾಡುಗಳನ್ನು ಕಡಿಯುತ್ತಿದ್ದೀರಿ?

ಇನ್ನೊಬ್ಬ : ಹೋಗಯ್ಯ ಆಚೆ... ಈ ತನಕ ಯಾರೂ ನಮ್ಮನ್ನು ಕೇಳಿಲ್ಲ. ಅರಣ್ಯ ಇಲಾಖೆ ಯವರೇ ಮಾತನಾಡೋದಿಲ್ಲ. ಇವನೊಬ್ಬ ಬಂದ ಮಾತನಾಡೋದಕ್ಕೆ.

ಒಡ್ಡ : ಸ್ವಾಮೀ, ಹಾಗೆ ಹೇಳಬೇಡಿ... ಕಾಡು ನಾಶವಾದರೆ ಭೂಮಿ ಬಂಜರು ಬೀಳುತ್ತದೆ. ಮಳೆ ಇಲ್ಲದೆ ಬರಗಾಲ ಬರುತ್ತದೆ. ಎಲ್ಲರೂ ನಾಶವಾಗುತ್ತಾರೆ.

ಮರ – ೨ : ಕಾಡುಗಳನ್ನು ವಿಪರೀತ ಧ್ವಂಸ ಮಾಡಿರುವುದರಿಂದಲೇ ವಾತಾವರಣದಲ್ಲಿ ಸಮತೋಲನವಿಲ್ಲದೆ ವೈಪರೀತ್ಯ ಉಂಟಾಗಿದೆ. ಮತ್ತು ಇದೇ ಕಾರಣದಿಂದಾಗಿ ಅನಾವೃಷ್ಟಿಯೂ ಅತಿವೃಷ್ಟಿಯೂ ಉಂಟಾಗಿದೆ.

ಮತ್ತೊಬ್ಬ : ನಮಗೆಲ್ಲ ಗೊತ್ತಿದೆ. ನೀನೇನೂ ಹೇಳ್ಬೇಕಾಗಿಲ್ಲ.

ಒಡ್ಡ : ಹೀಗೆಲ್ಲ ಮಾತನಾಡಬೇಡಿ. ಕಾಡು ಕಡಿದು ಬೆಟ್ಟಗಳು ಬೋಳಾಗಿವೆ. ಸಸ್ಯಶ್ಯಾಮಲೆ ಎಂದು ಕರೆಸಿಕೊಳ್ಳುವ ಈ ಭೂಮಿ ಇಂದು ಮರಳುಗಾಡಾಗುತ್ತಿದೆ.

ಮರ – ೩ : ಮರಗಳು ಜಲಕ್ಷಾಮವನ್ನು ತಡೆಗಟ್ಟುತ್ತವೆ. ಮರಗಳು ಹರಿಯುವ ನೀರನ್ನು ತಡೆದು ನೆಲದಲ್ಲಿಯೇ ಇಂಗುವಂತೆ ಮಾಡುತ್ತವೆ. ಹಳ್ಳಕೊಳ್ಳಗಳಲ್ಲಿ ನೀರು ತುಂಬಿ ಹರಿಯುವಂತೆ ಮಾಡುತ್ತವೆ.

ಒಬ್ಬ : ನಮ್ಮ ಧನಿಗಳು ನಮಗೆ ಬೇಕಾದ ಹಾಗೆ ಹಣ ಕೊಡ್ತಾರೆ. ಅವರು ಏನು ಹೇಳ್ತಾರೋ ಹಾಗೆ ಮಾಡುವುದು ನಮ್ಮ ಕೆಲಸ.

ಒಡ್ಡ : ನೀವು ಯಾಕೆ ಅವರೊಂದಿಗೆ ಪ್ರಶ್ನಿಸುತ್ತಿಲ್ಲ? ಅರಣ್ಯನಾಶದಿಂದಾಗಿ ಇವತ್ತು ಭೂಮಿ ಮೇಲೆ ಇರಬೇಕಾದ ಕೊಳೆತ ಸಸ್ಯಾಂಶ ಮಾಯವಾಗುತ್ತಿದೆ. ಹೀಗಾಗಿ ನೆಲಕ್ಕೆ ಮಳೆ ನೀರು ಹೀರುವ ಕವಚ ಇಲ್ಲದಾಗಿದೆ. ಮಳೆನೀರು ಇಂಗದೆ ಸರಾಗವಾಗಿ ಹರಿಯುವುದರಿಂದಲೇ ನೆರೆ ಮಹಾಪೂರಗಳ ಸಂಖ್ಯೆ ಅಧಿಕ ವಾಗುತ್ತಿದೆ.

ಮರ – ೪ : ಜಗತ್ತಿನಲ್ಲಿಯೇ ಅತೀ ಹೆಚ್ಚು ಮಳೆ ಬೀಳುವ ಪ್ರದೇಶವೆಂದು ಹೆಸರಾಗಿರುವ ಚಿರಾಪುಂಜಿ ಇವತ್ತು ಸಸ್ಯಶೂನ್ಯವಾಗಿದೆ. ಕರ್ನಾಟಕದಲ್ಲಿಯೇ ಅತೀ ಹೆಚ್ಚು

ಮಳೆ ಬೀಳುವ ಸ್ಥಳವೆಂದು ಹೆಸರಾದ ಆಗುಂಬೆಯಲ್ಲಿ ಕುಡಿಯುವ ನೀರಿಗೆ ಜನ ಕಷ್ಟಪಡುತ್ತಿದ್ದಾರೆ.

ಇನ್ನೊಬ್ಬ : ಹೋಗಯ್ಯಾ.... ಎಷ್ಟು ಸಾರಿ ಹೇಳಬೇಕು ನಿನಗೆ... ಹೋಗ್ತೀಯೋ ಇಲ್ಲವೋ.

(ಹಾಡುಗಾರರು ಹಾಡುತ್ತಾರೆ)

ಬನ್ನಿರೊ ಬನ್ನಿರಣ್ಣ ಕೋಲು ಕೋಲೆ
ತನ್ನಿರೊ ತನ್ನಿರಣ್ಣ ಕೋಲು ಕೋಲೆ

ಹಾಡಿನ ಲಯಕ್ಕನುಗುಣವಾಗಿ ಎಲ್ಲ ಮರಕಟುಕರೂ ಒಡ್ಡನನ್ನು ಓಡಿಸಲು ಪ್ರಯತ್ನಿಸುತ್ತಾರೆ. ಒಡ್ಡ ಮರಗಳನ್ನು ಅಪ್ಪಿ ಹಿಡಿಯುತ್ತಾನೆ. ಪೊಲೀಸ್ 'ವಿಝಿಲ್' ಕೇಳಿಸುತ್ತದೆ. ಮರಕಟುಕರು ಒಡ್ಡನನ್ನು ಬಿಟ್ಟು ಪೊಲೀಸ್ ಎಂದು ಓಡಿ ಹೋಗುತ್ತಾರೆ.

ಒಡ್ಡ : ಎಲ್ಲಿ ಪೊಲೀಸ್...ಎಲ್ಲಿ ಪೊಲೀಸ್...

ಮುದುಕ ಸೆಟ್ಟಿ : (ಪ್ರವೇಶಿಸಿ, ಪ್ರೇಕ್ಷಕರೊಂದಿಗೆ) ಪೋಲೀಸರು ಈಗ ಬರುವುದಿಲ್ಲ. ವಿಝಿಲ್ ಊದಿದ್ದು ನಾನೇ... ಆ ಮರಕಟುಕರು ನಮ್ಮ ಒಡ್ಡನನ್ನು ಹೊಡೆದು ಕೊಂದುಬಿಟ್ರೆ ನಮ್ಮ ನಾಟಕದ ಗತಿ ಏನಾಗ್ಬೇಕು... ಅದಕ್ಕೆ ನಾನು ಮಧ್ಯ ಪ್ರವೇಶಿಸಬೇಕಾಯಿತು. ಪಂಜೆಯವರ ಕತೆಯಲ್ಲಿ ಏನಾಗುತ್ತದೆ ಅಂದರೆ ಈ ಸಂದರ್ಭದಲ್ಲಿ ಒಂದು ಮಾಯದ ಕೊಡಲಿ ಕಾಣಿಸಿಕೊಳ್ಳುತ್ತದೆ. ಆ ಕೊಡಲಿ ಒಡ್ಡನ ಪ್ರಶ್ನೆಗಳಿಂದ ಸಂತೋಷಗೊಂಡು ಒಡ್ಡನ ವಶವಾಗುತ್ತದೆ. ನಮ್ಮ ಕತೆ ಮುಂದುವರಿಯುವುದು ಹೀಗೆ.

(ನಿಷ್ಕ್ರಮಣ)

ಆಲದ ಮರ : ಅಯ್ಯಾ ಗೆಳೆಯ, ನೀನು ನಮ್ಮ ಮೇಲೆ ತೋರಿಸಿರುವ ಪ್ರೀತಿ, ಕಳಕಳಿಗಳಿಗೆ ನಾವು ಕೃತಜ್ಞರಾಗಿದ್ದೇವೆ. ಮರಗಿಡಗಳು, ಅರಣ್ಯಗಳು ಇರುವುದು ಜನರ ಉಪಯೋಗಕ್ಕಾಗಿಯೇ ಹೊರತು ವಿನಾಶಕ್ಕಲ್ಲ... ತೆಗೆದುಕೋ ಈ ಅದೃಶ್ಯ ಕೊಡಲಿಗಳನ್ನು....

(ಮುದುಕ ಸೆಟ್ಟಿ ಪ್ರವೇಶಿಸಿ ಮಾಯದ ಕೊಡಲಿಗಳನ್ನು ನೀಡುತ್ತಾನೆ. ಮರಕಟುಕರು ಸಂಮೋಹಿನಿಗೊಳಗಾದವರಂತೆ ಪ್ರವೇಶಿಸಿ ಕೊಡಲಿಗಳನ್ನು ಹಿಡಿದುಕೊಂಡು ಒಡ್ಡನ ಹಿಂದೆ ಹೊರಟು ನಿಲ್ಲುತ್ತಾರೆ.)

ಈ ಕೊಡಲಿಗಳನ್ನು ಎಲ್ಲ ಜನರ ಉಪಯೋಗಕ್ಕಾಗಿ ಮಾತ್ರ ಬಳಸಬೇಕೇ ಹೊರತು ಕೆಲವೇ ಕೆಲವು ಜನರ ಸ್ವಾರ್ಥಕ್ಕಲ್ಲ... ನೀನು ಯೋಚಿಸಿ ಇಷ್ಟಪಡುವ ಎಲ್ಲ ಒಳ್ಳೆಯ ಕೆಲಸಗಳಿಗೂ ಇದು ನೆರವಾಗುತ್ತದೆ. ಹೋಗಿ ಬಾ ಗೆಳೆಯ, ಹೋಗಿ ಬಾ....

(ಮರಗಳು ಮರಕಟುಕರು, ಕೊಡಲಿಗಳು ಮರೆಯಾಗುತ್ತವೆ. ಒಡ್ಡ ಓಡುತ್ತಾ ತನ್ನ ಅಣ್ಣಂದಿರನ್ನು ಸಮೀಪಿಸುತ್ತಾನೆ. ಅವರುಗಳು ಗಾಢ ನಿದ್ರೆಯಲ್ಲಿದ್ದಾರೆ.)

ಒಡ್ಡ : ಅಣ್ಣಾ, ಅಣ್ಣಾ, ಎದ್ದೇಳಿ... ಬಹಳ ಹೊತ್ತಾಗಿದೆ. ನಾವು ಮುಂದೆ ಹೋಗಬೇಕು.

ಹೆಡ್ಡ : ಯಾವನಯ್ಯ ನನ್ನ ನಿದ್ದೆ ಹಾಳು ಮಾಡಿದೋನು?

ದಡ್ಡ : ಹ್ಞಾ... ನೀನಾ... ಬಾ... ಸ್ವಲ್ಪ ನಿದ್ರೆ ಮಾಡಿ ಆ ಮೇಲೆ ಹೋಗೋಣ... ಆಗ ಓಡಿದೆಯಲ್ಲಾ, ಅಲ್ಲೇನು ನೋಡಿದೆ? ಮರ ಕಡಿಯುವುದನ್ನು ತಾನೇ... ಅದು ನನಗೆ ಮೊದಲೇ ಗೊತ್ತಿತ್ತು.

ಒಡ್ಡ : ನೋಡಬೇಕಾದ್ದನ್ನು ನೋಡಿದ್ದೇನೆ. ಮಾಡಬೇಕಾದ್ದನ್ನು ಮಾಡಿದ್ದೇನೆ. ಬನ್ನಿ ಹೋಗೋಣ.

(ಮೂವರೂ ಮುಂದಕ್ಕೆ ಚಲಿಸುತ್ತಾರೆ. ಇದ್ದಕ್ಕಿದ್ದಂತೆ ಬಂಡೆ ಒಡೆಯುವ, ನೆಲ ಅಗೆಯುವ ಸದ್ದು ಕೇಳಿಸುತ್ತದೆ.)

ಒಡ್ಡ : ಅಣ್ಣಂದಿರೇ, ಏನದು ಸದ್ದು? ಯಾಕೆ ಆ ಸದ್ದು ಬರ್‍ತಾ ಇದೆ? ಎಲ್ಲಿಂದ ಆ ಸದ್ದು ಕೇಳ್ತಿರೋದು? ಈ ಸದ್ದು ಯಾರು ಮಾಡ್ತಿರಬಹುದು?

ಹೆಡ್ಡ : ಅದೆಲ್ಲಾ ನಮಗೆ ಗೊತ್ತಿಲ್ಲ... ಗುದ್ದಲಿ ಶಬ್ದ ಕೇಳ್ತಾ ಇಲ್ಲವೇ...?

ದಡ್ಡ : ನಿನಗೆಷ್ಟು ಕೇಳ್ತಾ ಇದೆಯೋ... ಅಷ್ಟೇ ನಮಗೂ ಕೇಳ್ತಿರೋದು...

ಹೆಡ್ಡ : ಅದರ ಬಗ್ಗೆ ಈ ರೀತಿ ಪ್ರಶ್ನಿಸಲಿಕ್ಕೆ ಏನಾಗಿದೆ? ಸುಮ್ಮನೆ ಮಾತನಾಡದೆ ನಮ್ಮ ಜತೆ ಬಾ...

ಒಡ್ಡ : ಯಾವುದನ್ನೂ ಪ್ರಶ್ನಿಸಿ ಉತ್ತರ ಪಡೆಯುವುದು ನನ್ನ ಹವ್ಯಾಸ. ಆ ಸದ್ದು ಏನು? ಅದು ಏಕೆ ಉಂಟಾಗುತ್ತಿದೆ? ಇದನ್ನೆಲ್ಲ ತಿಳಿಯದೆ ನಾನು ಮುಂದಕ್ಕೆ ಬರುವುದಿಲ್ಲ.

ದಡ್ಡ : ಆಗಲಿ, ನಿನ್ನ ಇಷ್ಟದಂತೆಯೇ ಆಗಲಿ, ಹೋಗಿ ಬೇಕಾದದ್ದನ್ನೆಲ್ಲ ನೋಡಿಯೇ ಬರುವಿಯಂತೆ. ಗುಡ್ಡ ಅಗೆಯುವ ಗುದ್ದಲಿ ನೋಡುವುದಕ್ಕೆ ಇಷ್ಟು ಉತ್ಸಾಹ.... ಇಷ್ಟು ಓಟ ಯಾಕೆ?

ಹೆಡ್ಡ : ನೀನು ನಿಧಾನಕ್ಕೆ ನೋಡಿ ಬಾ... ನಾವು ನಮ್ಮಷ್ಟಕ್ಕೆ ಹೋಗುತ್ತೇವೆ.

(ಒಡ್ಡ ಚಲಿಸಿ ಗುಡ್ಡದ ಮೇಲೇರಿ ಹೋಗುತ್ತಾನೆ. ಅಲ್ಲಿ ಹಲವರು ಬಂಡೆ ಒಡೆಯುತ್ತಿದ್ದಾರೆ. ಒಡ್ಡ ಪ್ರವೇಶಿಸಿ ಅವರೊಂದಿಗೆ ಪ್ರಶ್ನಿಸುತ್ತಾನೆ.)

ಒಡ್ಡ : ಅಯ್ಯೋ ನಿಲ್ಲಿಸಿ... ಬಂಡೆಗಳನ್ನು ಒಡೆಯಬೇಡಿ... ಈ ನೆಲವನ್ನು ಉಳಿಸಿ. ಭೂಮಿಯ ಮೇಲೆ ಆಗ್ತಿರೋ ಹಲ್ಲೆಯನ್ನು ನಿಲ್ಲಿಸಿ...

ಬಂಡೆ ಒಡೆಯುವವ–೧ : ಹೇಯ್ ಹೋಗಯ್ಯ... ನಿನಗೇನು ಗೊತ್ತು ಈ ಬಂಡೆಗಳ ಬೆಲೆ...? ನಿನಗೆ ಪಿಂಕ್ ಗ್ರಾನೈಟ್ ಅಂದರೇನು ಗೊತ್ತಿದೆಯೇ. ಇದುವೇ ಅದು...

ಒಡ್ಡ : ಗೊತ್ತಿದೆ ಸ್ವಾಮೀ... ನೀವು ಈ ಬಂಡೆಗಳನ್ನು ಒಡೆದು ಬೆಂಗಳೂರಿಗೋ ಜಪಾನಿಗೋ ದಿಲ್ಲಿಗೋ ಇಟಲಿಗೋ ಸಾಗಿಸೋದೂ ಗೊತ್ತು... ಅಲ್ಲಿ ಈ ಕಲ್ಲುಗಳು ಪಂಚತಾರಾ ಹೊಟೇಲುಗಳ ಹೊಸ್ತಿಲು ಪಟ್ಟಿಯಾಗೋದೂ ಗೊತ್ತು. ಅಥವಾ ಧನಿಕರ ಕಳೇಬರಗಳ ಮೇಲೆ ಗೋರಿಕಲ್ಲುಗಳಾಗುವುದೂ ಗೊತ್ತು... ಆದರೆ ಹಾಗೆ ಮಾಡಬೇಡಿ... ಇದರಿಂದಾಗಿ ಭೂಮಿಯ ಮೇಲಿನ ಒತ್ತಡ ಏರುಪೇರಾಗಿ ಭೂಕಂಪವೂ ಆಗಬಹುದು ಅಥವಾ ನೆರೆ ಪ್ರವಾಹಗಳೂ ಉಂಟಾಗ ಬಹುದು...

ಬಂಡೆ ಒಡೆಯುವವ–೨ : ಅವನ ಹತ್ತಿರ ಏನು ಸುಮ್ಮನೆ ಮಾತು ! ಲೇಯ್, ಇಲ್ಲಿಂದ ಹೋಗ್ತೀಯಾ, ಇಲ್ಲ ಇಲ್ಲೇ ನಿನ್ನ ಸಮಾಧಿ ಮಾಡಲಾ...?

ಒಡ್ಡ : ಅಷ್ಟು ಕಷ್ಟ ಪಡೋದು ಬೇಡ. ಇಲ್ಲಿ ನೋಡಿ...

ಅರರೆ ಕೊಡಲಿ ಹರಿತ ಕೊಡಲಿ
ಮರದ ಬುಡಕೆ ಏಟು ಕೊಡಲಿ

(ಕೊಡಲಿಗಳು ನರ್ತಿಸುತ್ತಾ ಪ್ರವೇಶಿಸುತ್ತವೆ. ಭಯಗೊಂಡ ಬಂಡೆ ಒಡೆಯುವವರು 'ತಪ್ಪಾಯ್ತು... ನಮ್ಮನ್ನು ಕೊಲ್ಲಬೇಡ....' ಎಂದೆಲ್ಲ ಹೇಳುತ್ತಾ ಕ್ಷಮೆ ಯಾಚಿಸುತ್ತಾರೆ.)

ಬಂಡೆ : ಅಯ್ಯಾ ಗೆಳೆಯ, ನೀನು ನಮ್ಮ ಬಗ್ಗೆ ತೋರಿಸಿರುವ ಪ್ರೀತಿ ವಿಶ್ವಾಸಗಳಿಗೆ ನಾವು ಕೃತಜ್ಞರಾಗಿದ್ದೇವೆ. ಕಲ್ಲು, ಮಣ್ಣು, ಬಂಡೆ, ನೆಲಗಳಿರುವುದು ಜನರ ಉಪಯೋಗಕ್ಕಾಗಿಯೇ ಹೊರತು ವಿನಾಶಕ್ಕಲ್ಲ... ತೆಗೆದುಕೋ ಈ ಮಾಯದ ಗುದ್ದಲಿಯನ್ನು.... (ಮುದುಕ ಸೆಟ್ಟಿ ಪ್ರವೇಶಿಸಿ ಗುದ್ದಲಿ ನಿಡುತ್ತಾನೆ.)

ಈ ಗುದ್ದಲಿಯನ್ನು ಎಲ್ಲ ಜನರ ಉಪಯೋಗಕ್ಕಾಗಿ ಮಾತ್ರ ಬಳಸಬೇಕೇ ಹೊರತು ಕೆಲವೇ ಕೆಲವು ಜನರ ಸ್ವಾರ್ಥಕ್ಕಲ್ಲ... ನೀನು ಯೋಚಿಸಿ ಇಷ್ಟಪಡುವ ಎಲ್ಲ ಒಳ್ಳೆಯ ಕೆಲಸಗಳಿಗೂ ಇದು ನೆರವಾಗುತ್ತದೆ. ಹೋಗಿ ಬಾ ಗೆಳೆಯ, ಹೋಗಿ ಬಾ...

(ಬಂಡೆಗಳು, ಬಂಡೆ ಒಡೆಯುವವರು, ಗುದ್ದಲಿ ಮರೆಯಾಗುತ್ತವೆ.
ಒಡ್ಡ ಓಡುತ್ತಾ ತನ್ನ ಅಣ್ಣಂದಿರನ್ನು ಸಮೀಪಿಸುತ್ತಾನೆ. ರಂಗದಲ್ಲಿ ಹೊಳೆಯೊಂದು ನಿರ್ಮಾಣವಾಗಿದೆ. ಹೆಡ್ಡ, ದಡ್ಡ ನೀರು ತೆಗೆದು ಕುಡಿಯುತ್ತಿದ್ದಾರೆ.)

ಹೆಡ್ಡ : ಹ್ಞಾ... ಬಂದೆಯಾ... ಬಾ... ನೀರು ಬೇಕಿದ್ರೆ ಕುಡಿ... ಅಲ್ಲೇನು ನೋಡಿದೆ?

ದಡ್ಡ : ನೋಡೋದೇನು? ಗುಡ್ಡ ಅಗೆಯೋ ಗುದ್ದಲಿಗಳನ್ನು ನೋಡಿರಬಹುದು...

ಒಡ್ಡ : ಅಲ್ಲಿ ನಾನು ನೋಡಬೇಕಾದುದನ್ನು ನೋಡಿದ್ದೇನೆ. ಮಾಡಬೇಕಾದ್ದನ್ನು ಮಾಡಿದ್ದೇನೆ. ಅದಿರಲಿ... ಇದೇನು? ಇದು ಯಾಕೆ ಹೀಗೆ ಹರಿಯುತ್ತಿದೆ? ಇದು ಎಲ್ಲಿಂದ ಹೊರಡುತ್ತಿದೆ?

ದಡ್ಡ : ಅದೆಲ್ಲಾ ನಮಗೆ ಗೊತ್ತಿಲ್ಲ... ಹರಿಯುವ ಹೊಳೆಯ ಬಗ್ಗೆ ಯಾರಾದರೂ ಹೀಗೆ ಪ್ರಶ್ನಿಸುತ್ತಾರೆಯೇ?

ಒಡ್ಡ : ನಾನು ಪ್ರಶ್ನಿಸಿ ಉತ್ತರ ಪಡೆಯುತ್ತೇನೆ. ಉತ್ತರ ಸಿಗದೆ ನಾನು ಇಲ್ಲಿಂದ ಹೊರಡುವುದಿಲ್ಲ.

ಹೆಡ್ಡ : ಹೋಗಪ್ಪಾ ಹೋಗು... ಬೇಕಾದದ್ದನ್ನೆಲ್ಲ ನೋಡಿ ಬರುವಿಯಂತೆ... ನದೀಮೂಲ ಋಷಿಮೂಲ ಯಾರೂ ಹುಡುಕಬಾರದಂತೆ... ನಮಗೇನು?

(ನಿಷ್ಕ್ರಮಿಸುತ್ತಾರೆ.)

ಒಡ್ಡ : ಯಾಕೆ ಹುಡುಕಬಾರದು? ನಾನು ಇದು ಎಲ್ಲಿಂದ ಹೊರಟು ಬರುತ್ತದೆ ಎಂಬುದನ್ನು ತಿಳಿದೇ ಬರುತ್ತೇನೆ.

(ಚಲಿಸುತ್ತಾನೆ.
ರಂಗದಲ್ಲಿ ನದಿಯ ಮಾದರಿಯೊಂದು ನಿರ್ಮಾಣವಾಗಿದೆ. ಉಗಮ ಸ್ಥಾನವೂ ಕಾಣಿಸುತ್ತದೆ. ಹಾಡುಗಾರರು ಹಾಡುತ್ತಾರೆ. 'ಪಂಜೆಯವರು ಬರೆದ ನದಿಯ ಹಾಡು.')

ಒಡ್ಡ : ಎಲ್ಲಿಂದ ಬರುತೀಯೆ ನೀರನ್ನು ತರುತೀಯೆ
ಒಳ್ಳೇದಾಗಿರುತೀಯೆ ನೀನು
ಎಲ್ಲಿಗೆ ಹೋಗುವೆ ನೀರನ್ನು ಸಾಗುವೆ
ಕಡೆಗೆ ಏನಾಗುವೆ ನೀನು?

ನದಿ : ಬೆಟ್ಟದಾ ಹೊಡೆಯಲ್ಲಿ ಹುಟ್ಟಿದೆ ಹನಿಯಾಗಿ
ತೊಟ್ಟಾದೆ ತಟುಕಾದೆ ನಾನು
ಬೆಟ್ಟಾದೆ ಬೆರಳಾದೆ ತೋಳಾದೆ ತೊಡೆಯಾದೆ
ಪುಟ್ಟ ತೋಡಾದೆನು ನಾನು.

ಆಡುತ್ತ ಸುತ್ತಲು ನೋಡುತ್ತ ತೊರೆಯನ್ನು
ಕೂಡುತ್ತ ಓಡುತ್ತ ಬಂದೆ
ದೂಡುತ್ತ ಕಲ್ಲನ್ನು ಮಾಡುತ್ತ ಗುಲ್ಲನ್ನು
ಹಾಡುತ್ತ ನೀಡುತ್ತ ಬಂದೆ.

ಆದರೆ ಗೆಳೆಯಾ, ಇವತ್ತು ನನ್ನ ಪರಿಸ್ಥಿತಿಯನ್ನು ಯಾರೂ ಕೇಳುವವರೇ ಇಲ್ಲವಾಗಿದೆ. ಎಲ್ಲರಿಗೂ ಉಪಯೋಗಕ್ಕೆ ಅತ್ಯಗತ್ಯವಾಗಿ ಬೇಕಾದ ನೀರು

ಕೇವಲ ಕೆಲವೇ ಸ್ವಾರ್ಥಿಗಳ ಪಾಲಾಗುತ್ತಿದೆ. ಉಳಿದ ಮಂದಿ ನೀರಿಗಾಗಿ ಬಹಳ ಕಷ್ಟ ಪಡುತ್ತಿದ್ದಾರೆ.

ಒಡ್ಡ : ಇದೆಲ್ಲಾ ಹೇಗಾಯಿತು? ಯಾಕಾಯಿತು?

ನದಿ : ಏನು ಹೇಳಲಿ ಗೆಳೆಯಾ... ನಗರಗಳಲ್ಲಿ ಇರುವ ಕಾರ್ಖಾನೆಗಳ ಕಲುಷಿತ ನೀರನ್ನು, ರಾಸಾಯನಿಕ, ವಿಷಮಿಶ್ರಿತ ತ್ಯಾಜ್ಯಗಳನ್ನು ನನ್ನೊಳಗೆ ಬೆರೆಸುತ್ತಿರುವುದರಿಂದ ನನ್ನನ್ನೇ ನಂಬಿರುವ ಎಷ್ಟೋ ಮಂದಿ ಗ್ರಾಮೀಣರು ನಿಧಾನ ವಿಷಕ್ಕೆ ಬಲಿಯಾಗುತ್ತಿದ್ದಾರೆ. ರೋಗ ರುಜಿನಗಳಿಗೆ ತುತ್ತಾಗುತ್ತಿದ್ದಾರೆ.

ಒಡ್ಡ : ಹಾಗಾದರೆ ನಾನೇನು ಮಾಡಬೇಕಾಗಿದೆ? ಹೇಳು.

ನದಿ : ನಿನಗೆ ನಾನು ಮರ ಬಂಡೆಗಳಂತೆ ಕೊಡಲಿ ಗುದ್ದಲಿಗಳನ್ನು ನೀಡಲಾರೆ. ಹಾಗಿದ್ದರೂ ನೀರಿನ ಹುಟ್ಟು ಬೆಳವಣಿಗೆ ಉಪಯೋಗಗಳ ಬಗ್ಗೆ ಎಲ್ಲ ಜನರಿಗೂ ನೀನು ತಿಳಿಸಿ ಹೇಳಬೇಕು.

ಒಡ್ಡ : ಅಂದರೆ...

ನದಿ : ಮಳೆಯ ನೀರನ್ನು ಹಿಡಿದು ನಿಲ್ಲಿಸುವುದು... ಆ ನೀರನ್ನು ಇಂಗುವಂತೆ ಮಾಡುವುದು ಎಲ್ಲರ ಕಾಯಕವಾಗಬೇಕು. ನೀನು ಮತ್ತು ನಿನ್ನ ಸ್ನೇಹಿತರು ಓಡುವ ನೀರನ್ನು ನಡೆಯುವಂತೆ ಮಾಡಬೇಕು... ನಡೆಯುವ ನೀರನ್ನು ತೆವಳುವಂತೆ ಮಾಡಬೇಕು... ತೆವಳುವ ನೀರನ್ನು ನಿಲ್ಲುವಂತೆ ಮಾಡಬೇಕು. ನಿಂತ ನೀರನ್ನು ಇಂಗುವಂತೆ ಮಾಡಬೇಕು... ಹಾಗೆ ಮಾಡಿದಲ್ಲಿ ನೀರು ಇಲ್ಲ ಎನ್ನುವುದೇ ಇಲ್ಲವಾಗುತ್ತದೆ. ಹೋಗಿ ಬಾ ಗೆಳೆಯ... ಹೋಗಿ ಬಾ...

(ಒಡ್ಡ ಹೊರಡುತ್ತಾನೆ. ನದಿ ನಿಷ್ಕ್ರಮಿಸುತ್ತದೆ.
ಹೆಡ್ಡ, ದಡ್ಡ, ನಿಧಾನಕ್ಕೆ ಚಲಿಸುತ್ತಿದ್ದಾರೆ, ಒಡ್ಡ ಓಡೋಡಿ ಬರುತ್ತಾನೆ.)

ಒಡ್ಡ : ಅಣ್ಣಂದಿರೇ, ಸ್ವಲ್ಪ ನಿಲ್ಲಿ, ನಾನೂ ಬರ್ತಾ ಇದ್ದೇನೆ.

ಹೆಡ್ಡ : ಬಾ ಬಾ, ಏನು ನೋಡಿದೆ ಒಡ್ಡಾ...?

ಒಡ್ಡ : ನೋಡಬೇಕಾದುದನ್ನು ನೋಡಿದ್ದೇನೆ. ಮಾಡಬೇಕಾದುದನ್ನು ಮಾಡಿದ್ದೇನೆ.

ದಡ್ಡ : ಸರಿ ಸರಿ. ಮುಂದಕ್ಕೆ ಹೋಗೋಣ... ಅರಸರ ಅರಮನೆಗೆ ಸ್ವಲ್ಪ ದೂರವಷ್ಟೇ ಉಳಿದಿದೆ.

(ಮೂವರೂ ಚಲಿಸುತ್ತಾರೆ.
ರಂಗದಲ್ಲಿ ಮೂರು ಹೆಬ್ಬಾಗಿಲುಗಳು ನಿರ್ಮಾಣವಾಗುತ್ತವೆ. ಹೆಬ್ಬಾಗಿಲುಗಳಲ್ಲಿ ಅರಸರ ಆಜ್ಞೆಯ ಫಲಕಗಳನ್ನು ತೂಗುಹಾಕಲಾಗಿದೆ. ಸೈನಿಕರು ಫಲಕಗಳಲ್ಲಿ ಬರೆದುದನ್ನು ಓದಿ ಹೇಳುತ್ತಿದ್ದಾರೆ. ಹೆಡ್ಡ, ದಡ್ಡ, ಒಡ್ಡ ಅದನ್ನು ಗಮನಿಸುತ್ತಿದ್ದಾರೆ.)

ಸೈನಿಕ–೧ : ಅರಸರ ಅಪ್ಪಣೆಯ ಪ್ರಕಾರ ಅರಮನೆಯ ಹೆಬ್ಬಾಗಿಲಿನ ಮುಂಭಾಗದಲ್ಲಿರುವ ಆಲದ ಮರವನ್ನು ಯಾರು ಕಡಿದು ಹಾಕುತ್ತಾರೋ ಅವರು ಅರ್ಧ ರಾಜ್ಯದ ಒಡೆಯರಾಗುತ್ತಾರೆ.

ಸೈನಿಕ – ೨ : ಅರಸರ ಅಪ್ಪಣೆ ಈ ರೀತಿಯಾಗಿದೆ.... ಅರಮನೆಯ ಅಂಗಳದಲ್ಲಿ ಯಾರು ಬಾವಿಯೊಂದನ್ನು ತೋಡುತ್ತಾರೋ ಅವರು ಅರ್ಧ ರಾಜ್ಯದ ಒಡೆಯರಾಗುತ್ತಾರೆ.

ಹೆಡ್ಡ : ವಹವ್ವಾ...

ದಡ್ಡ : ಶಹಭಾಸ್...

ಒಡ್ಡ : (ಮೌನ)

ಹೆಡ್ಡ : ಈ ಕೆಲಸ ಒಡ್ಡನಿಂದ ಆದೀತೇ...?

ದಡ್ಡ : ಆಗಲಿಕ್ಕಿಲ್ಲ... ಏನು ಒಡ್ಡ, ಈ ಬಗ್ಗೆ ನಿನ್ನದು ಯಾವುದೇ ಪ್ರಶ್ನೆಗಳಿಲ್ಲವಲ್ಲ... ಏಕೆ?

ಒಡ್ಡ : (ಫಲಕ ತೋರಿಸಿ) ಉತ್ತರ ಸ್ಪಷ್ಟವಾಗಿ ನಮೂದಿಸಿರುವಾಗ ಪ್ರಶ್ನೆಯ ಅಗತ್ಯಗಳಿಲ್ಲ... ಪ್ರಶ್ನೆಗಳಿಗಾಗಿಯೇ ಪ್ರಶ್ನೆಗಳನ್ನು ಕೇಳಬಾರದು.

ಹೆಡ್ಡ : ಆಗಲಿ... ಅರ್ಧ ರಾಜ್ಯ ನನಗೆ.

ದಡ್ಡ : ಉಳಿದರ್ಧ ರಾಜ್ಯ ನನ್ನ ಪಾಲಿಗೆ.

(ಚಲಿಸುತ್ತಾರೆ.
ಹೆಬ್ಬಾಗಿಲು ಚಲಿಸಿ ಇನ್ನೊಂದು ಫಲಕ ಕಾಣಿಸುತ್ತದೆ.)

ಸೈನಿಕ – ೩ : (ಓದುತ್ತಾನೆ) ಅರಸರ ಅಪ್ಪಣೆ ಈ ರೀತಿಯಾಗಿದೆ... ಈ ಆಲದ ಮರ ಕಡಿಯಲು ಬಂದವರು ಕಡಿಯಲಾರದೆ ಹೋದರೆ ಅವರ ಕಿವಿ ಕತ್ತರಿಸಲಾಗುವುದು. ಬಾವಿ ತೋಡಲು ಬಂದವರು ತೋಡಲಾರದೆ ಹೋದರೆ ಅವರ ಮೂಗು ಕತ್ತರಿಸಲಾಗುವುದು...

(ಹೆಡ್ಡ ಸೈನಿಕರಿಂದ ಕೊಡಲಿ ಪಡೆದುಕೊಂಡು ಮರ ಕಡಿಯಲು ಆರಂಭಿಸುತ್ತಾನೆ. ಒಂದು ಕೊಂಬೆ ತುಂಡಾದರೆ ಇನ್ನೆರಡು ಹುಟ್ಟಿಕೊಳ್ಳುತ್ತವೆ. ಒಂದು ಬೇರು ಕಡಿದಾಗ ಇನ್ನೆರಡು ಬೇರು ಕಾಣಿಸಿಕೊಳ್ಳುತ್ತವೆ. ಪುನಃ ಪ್ರಯತ್ನಿಸುತ್ತಾನೆ. ಕೊನೆಗೆ ಸೋತು ಹೋಗುತ್ತಾನೆ.)

ಹೆಡ್ಡ : ಅಬ್ಬಾ.... ಇನ್ನು ನನ್ನಿಂದ ಆಗಲಿಕ್ಕಿಲ್ಲ...

(ಕೂಡಲೇ ಸೈನಿಕರು ಅವನನ್ನು ಬಂಧಿಸಿ ಒಳಗೆ ಒಯ್ಯುತ್ತಾರೆ.)

ದಡ್ಡ : ಈಗ ನನ್ನ ಸರದಿ. ನಾನು ಈ ಮರವನ್ನು ಬುಡದಿಂದಲೇ ಕತ್ತರಿಸುತ್ತೇನೆ.

ದಡ್ಡ ಕೊಡಲಿ ಎತ್ತಿಕೊಂಡು ಕಡಿಯಲು ಪ್ರಯತ್ನಿಸುತ್ತಾನೆ. ಕೊನೆಗೆ ಅವನೂ ಸೋತು ಹೋಗುತ್ತಾನೆ.

ದಡ್ಡ : ಅಬ್ಬಾ.... ಎಷ್ಟು ಕಷ್ಟ. ನನ್ನಿಂದ ಆಗಲಿಕ್ಕಿಲ್ಲ.

(ಸೈನಿಕರು ಅವನನ್ನೂ ಒಳಗೆ ಒಯ್ಯುತ್ತಾರೆ.
ಇನ್ನೊಂದು ಮೂಲೆಯಲ್ಲಿ ಅರಸ ಕಾಣಿಸಿಕೊಳ್ಳುತ್ತಾನೆ.)

ಅರಸ : ಓಹೋ ಇವರೂ ಸೋತು ಹೋದರೇ... ನಾಳೆ ಬೆಳಿಗ್ಗೆ ಇವರಿಬ್ಬರ ಕಿವಿಗಳನ್ನೂ ಕತ್ತರಿಸಿ ಬಿಡಿ.

ಸೈನಿಕ : ಆಗಲಿ ಮಹಾಸ್ವಾಮೀ.

ಒಡ್ಡ : (ಪ್ರವೇಶಿಸಿ) ಅರಸರಿಗೆ ವಂದನೆಗಳು. ತಾವು ಅನುಮತಿ ನೀಡಿದರೆ ನಾನು ಈ ಕೆಲಸಗಳನ್ನು ಮಾಡಬಲ್ಲೆ.

ಅರಸ : ಎಲಾ ಚಿಣ್ಣಾ.... ನಿನ್ನಿಂದಾಗಲಿಕ್ಕಿಲ್ಲ... ಸೈನಿಕರೇ, ಇವನ ಕಿವಿಗಳನ್ನೂ ಮೂಗನ್ನೂ ಈಗಲೇ ಕತ್ತರಿಸಿ ಬಿಡಿ.

ಒಡ್ಡ : ಮಹಾಸ್ವಾಮೀ, ನಾನು ಆ ಕೆಲಸಗಳನ್ನು ಮಾಡದಿದ್ದರಲ್ಲವೇ ನನ್ನ ಕಿವಿ ಮೂಗುಗಳನ್ನು ಕತ್ತರಿಸಿ ಬಿಡುವುದು? ಕೆಲಸಗಳನ್ನು ಮಾಡಲೆ ಮಹಾಸ್ವಾಮೀ?

ಅರಸ : ಹ್ಞೂ... ನೋಡುವ...

(ಒಡ್ಡ ಮಾಯದ ಕೊಡಲಿಗಳೊಂದಿಗೆ ನರ್ತಿಸುತ್ತಾನೆ.
ಹಾಡುಗಾರರು ಹಾಡುತ್ತಾರೆ.)

ಅರರೆ ಕೊಡಲಿ ಹರಿತ ಕೊಡಲಿ
ಮರದ ಬುಡಕೆ ಏಟು ಕೊಡಲಿ

(ನರ್ತನ ಪರಾಕಾಷ್ಠೆ ತಲುಪುತ್ತಿದ್ದಂತೆ.... ಸ್ತಬ್ಧ).

ಒಡ್ಡ : ಊರಿನ ಅರಸರೆ, ಮರ ಕಡಿಯುವ ಮೊದಲು ನನ್ನಲ್ಲಿ ಕೆಲವು ಪ್ರಶ್ನೆಗಳಿವೆ. ಅವುಗಳಿಗೆ ನೀವು ಸಹನೆಯಿಂದ ಉತ್ತರಿಸುತ್ತೀರಲ್ಲ?

ಅರಸ : ಪ್ರಶ್ನೆಗಳೇ...? ಖಂಡಿತವಾಗಿಯೂ ಉತ್ತರಿಸುತ್ತೇವೆ.

ಒಡ್ಡ : ಈ ಆಲದ ಮರವನ್ನು ಯಾರೇ ಆಗಲಿ ಇಲ್ಲಿಂದ ಕಡಿಯತೊಡಗಿದ ಕೂಡಲೇ ಏನಾಗುತ್ತದೆ?

ಅರಸ : ಒಂದು ಬೇರು ಕಡಿದರೆ ಎರಡು ಬೇರು ಹುಟ್ಟಿಕೊಳ್ಳುತ್ತವೆ. ಒಂದು ಕೊಂಬೆ ಕಡಿದರೆ ಎರಡು ಕೊಂಬೆಗಳು ಚಿಗುರೊಡೆಯುತ್ತವೆ.

ಒಡ್ಡ : ಅರಸರೇ, ಅದು ಸರಿಯಾದದ್ದೇ ಆಗಿದೆ. ಪ್ರಕೃತಿಯಲ್ಲಿರುವ, ಕಾಡುಗಳಲ್ಲಿರುವ ಮರಗಳನ್ನು ಕಡಿದರೆ ಇನ್ನೆರಡು ಗಿಡಗಳು ಹುಟ್ಟಿ ಬರಬೇಕಾದದ್ದು ನ್ಯಾಯವೇ ಆಗಿದೆ. ಆದುದರಿಂದ ಅತ್ಯಂತ ಸರಳ ಮತ್ತು ಸುಲಭದ ವಿಧಾನವೊಂದಿದೆ. ನೀವು ಈಗಿಂದೀಗಲೇ ಎರಡು ಗಿಡಗಳನ್ನು ನೆಟ್ಟು ಬೆಳೆಸುವ ವ್ಯವಸ್ಥೆ ಮಾಡಿರಿ. ಆಗ ಈ ಮರವನ್ನು ಕಡಿಸಲು ನಿಮಗೆ ಹಕ್ಕು ಬರುತ್ತದೆ. ಇಲ್ಲಿ ಬೇಕಾದದ್ದು ನೆಟ್ಟು ಬೆಳೆಸುವ ಮನಸ್ಸೇ ಹೊರತು ಇದ್ದುದನ್ನು ನಾಶಪಡಿಸುವ ಕೆಟ್ಟ ಯೋಚನೆಗಳಲ್ಲ...

ಅರಸ : ಭಲೇ, ನಿನ್ನ ತರ್ಕ ಚೆನ್ನಾಗಿದೆ. ಸೈನಿಕರೇ, ಈಗಿಂದೀಗಲೇ ಡಂಗುರ ಸಾರಿಸಿರಿ.

ಡಂಗುರದವನು : ಇಂದಿನಿಂದ ನಮ್ಮ ನಾಡಿನಲ್ಲಿ ಮರ ಕಡಿಯುವ ಹಕ್ಕು ಅದನ್ನು ಬೆಳೆಸಬಲ್ಲವರಿಗೆ ಮಾತ್ರ ಇರುತ್ತದೆ. ಆದುದರಿಂದ ಎರಡು ಗಿಡಗಳನ್ನು ನೆಟ್ಟು ಬೆಳೆಸಿದ ಬಳಿಕವೇ ಒಂದು ಮರವನ್ನು ಕಡಿಯಬಹುದು... ಎಂದು ಅರಸರ ಆಜ್ಞೆಯಾಗಿದೆ...

ಅರಸ : (ಒಡ್ಡನಿಗೆ) ನಿನಗೆ ಅರ್ಧರಾಜ್ಯ ಕೊಡಬಹುದು... ಆದರೆ ಬಾವಿಯನ್ನು ತೋಡ ಲಿಲ್ಲವಲ್ಲ...

ಒಡ್ಡ : ಅರಸರೇ, ನೀವು ಎಲ್ಲಿ ಬಾವಿ ತೋಡಬೇಕೆಂದು ಬಯಸುತ್ತೀರಿ...?

ಅರಸ : ಅಲ್ಲಿಯೇ, ನೀನು ನಿಂತಲ್ಲಿ. ಒಂದು ಬಂಡೆಕಲ್ಲು ಹರಡಿಕೊಂಡಿದೆಯಲ್ಲ. ಅದೇ ಸ್ಥಳದಲ್ಲಿ...

ಒಡ್ಡ : ಬಾವಿಯನ್ನೇನೋ ತೋಡಬಹುದು, ಆದರೆ ಅದರಲ್ಲಿ ನೀರು ಸಿಗಲಿಕ್ಕಿಲ್ಲ...

ಅರಸ : ನೀರು ಸಿಗಲಿಕ್ಕಿಲ್ಲ ಎಂದರೇನು? ಬಾವಿ ತೋಡಿ ನೀರು ಸಿಗುವಂತಾದರೆ ನಿನಗೆ ನನ್ನ ಮಗಳನ್ನು ಕೊಟ್ಟು ಕಲ್ಯಾಣ ಮಾಡಿಸುತ್ತೇನೆ.

ಒಡ್ಡ : ಅರಸರೇ, ನೀವು ನನ್ನ ಕಲ್ಯಾಣಕ್ಕಿಂತಲೂ ಈ ನಾಡಿನ ಎಲ್ಲ ಜನರ ಕಲ್ಯಾಣದ ಬಗ್ಗೆ ಯೋಚಿಸಿ. ನಾನು ಹೇಳಿದ್ದು ಇಲ್ಲಿ ಬಾವಿ ತೋಡಿದರೆ ನೀರು ಸಿಗಲಿಕ್ಕಿಲ್ಲ ಎಂದು ಮಾತ್ರ...

ಅರಸ : ಚೆನ್ನಾಗಿ ಮಾತನಾಡುತ್ತೀಯ... ನೀರು ಯಾಕೆ ಸಿಗಲಿಕ್ಕಿಲ್ಲ...?

ಒಡ್ಡ : ಯಾಕೆಂದರೆ ನೀರು ಸಿಗಬೇಕಾದ ಪೂರಕ ಕೆಲಸಗಳನ್ನು ನಾವು ಯಾರೂ ಮಾಡುತ್ತಿಲ್ಲ. ಇರುವ ನೀರ ಸೆಲೆಗಳನ್ನೆಲ್ಲ ಅನಾವಶ್ಯಕ ದುರುಪಯೋಗದಿಂದಾಗಿ ನಾಶ ಮಾಡಿದ್ದೇವೆ...

ಅರಸ : ಹಾಗಾದರೆ ನಾವೇನು ಮಾಡೋಣ? ನೀರಂತೂ ನಮಗೆ ಅಗತ್ಯವಾಗಿ ಬೇಕೇ ಬೇಕಲ್ಲವೇ...?

ಒಡ್ಡ : ನಾವು ಪ್ರಕೃತಿಯಿಂದ ಎಷ್ಟು ನೀರನ್ನು ಪಡೆಯುತ್ತೇವೆಯೋ... ಅದಷ್ಟನ್ನೂ ಮರುಪೂರಣ ಮಾಡಬೇಕಾದ ಜವಾಬ್ದಾರಿ ನಮ್ಮ ಮೇಲಿದೆ. ನಮ್ಮ ಊರಲ್ಲಿ ತುಂಬಿ ಹರಿಯುವ ಹೊಳೆಯಿದೆ. ಆದರೆ ಅದರ ಸಮರ್ಪಕ ಬಳಕೆ ಆಗುತ್ತಿಲ್ಲ... ಅದರ ನೀರನ್ನು ಎಲ್ಲ ಜನರಿಗೂ ಸರಿಯಾದ ರೀತಿಯಲ್ಲಿ ಬಳಕೆಯಾಗುವಂತೆ ಯೋಜನೆ ರೂಪಿಸಬಹುದಲ್ಲ...?

ಅರಸ : ಒಳ್ಳೆಯ ಸಲಹೆ... ನೀರಿಗಾಗಿ ಕಷ್ಟಪಡುವ ಜನರನ್ನು ನೋಡಿದ್ದೇವೆ. ಹಾಗಾಗಿ...

ಒಡ್ಡ : ಹಾಗಾಗಿಯೇ ಮಳೆಕೊಯ್ಲಿನ ಕೆಲಸವನ್ನು ಎಲ್ಲರೂ ಮಾಡಬೇಕಾಗಿದೆ. ಮಳೆ ಕೊಯ್ಲು ಎಂದರೆ ಓಡುವ ನೀರನ್ನು ನಡೆಯುವಂತೆ ಮಾಡುವುದು... ನಡೆಯುವ ನೀರನ್ನು ತೆವಳುವಂತೆ ಮಾಡುವುದು... ತೆವಳುವ ನೀರನ್ನು ನಿಲ್ಲಿಸುವುದು... ನಿಂತ ನೀರನ್ನು ಇಂಗಿಸುವುದು. ಅರಸರೇ, ಮೊದಲು ನಾವು ನೀರಿಂಗಿಸೋಣ, ಆಗ ತಾನಾಗಿಯೇ ನೀರು ಹರಿದು ಬರುತ್ತದೆ.

ಅರಸ : ಅಂದ ಹಾಗೆ ನಿನ್ನ ಹೆಸರೇನೆಂದು ಹೇಳಿದೆ...

ಒಡ್ಡ : ಒಡ್ಡ, ಮಹಾಸ್ವಾಮೀ.

ಅರಸ : ಒಡ್ಡ, ಕೆರೆ, ನದಿಗಳ ರಕ್ಷಣೆಯ ಬಗ್ಗೆ, ಜೀವಜಲದ ಬಗೆಗಿನ ನಿನ್ನ ಪ್ರೀತಿಯ ಬಗ್ಗೆ ನಮಗೆ ಬಹಳ ಮೆಚ್ಚುಗೆಯುಂಟಾಗಿದೆ. ನೀನು ನಮಗೆ ನೀರುಳಿತಾಯದ ಮೊದಲ ಪಾಠ ಹೇಳಿದ್ದೀಯ, ಅದಕ್ಕಾಗಿ ಕೃತಜ್ಞತೆಗಳು.

ಒಡ್ಡ : ಕೃತಜ್ಞತೆ ಸಲ್ಲಿಸಬೇಕಾದದ್ದು ಈ ನೆಲಕ್ಕೆ, ಈ ಜಲಕ್ಕೆ. ನಾವೆಲ್ಲರೂ ಈಗಾಗಲೇ ಈ ಭೂಮಿಯಿಂದ ಪಡೆದಿರುವ ನೀರಿನ ಪ್ರಮಾಣವನ್ನು ವಾಪಸು ಮಾಡದಷ್ಟು ಮುಂದಕ್ಕೆ ಹೋಗಿದ್ದೇವೆ. ಭೂಮಿತಾಯಿಯ ಆ ಋಣವನ್ನು ಸ್ವಲ್ಪವಾದರೂ ಸಂದಾಯ ಮಾಡೋಣ. ಅದು ಒಬ್ಬರಿಂದ ಇಬ್ಬರಿಂದ ಆಗುವ ಕೆಲಸವಲ್ಲ. ನಾವೆಲ್ಲರೂ, ಸಾಮೂಹಿಕ ಸಹಭಾಗಿತ್ವದೊಂದಿಗೆ ನಡೆಸಬೇಕಾದ ಕಾಯಕ.

ಅರಸ : ಹೌದು ನಾವೆಲ್ಲರೂ ಸೇರಿ ಜೀವಜಲದ ಉಳಿವಿನ ಕುರಿತು ಪ್ರಯತ್ನಿಸೋಣ. ಎಲ್ಲಿ ಸೈನಿಕರೇ, ಈಗಿಂದೀಗಲೇ ಡಂಗುರ ಸಾರಿಸಿರಿ.

ಡಂಗುರದವನು : ಈ ನಾಡಿನ ಎಲ್ಲ ಜನರಿಗೂ ಈ ಮೂಲಕ ತಿಳಿಸುವುದೇನೆಂದರೆ– 'ಪ್ರತಿಯೊಬ್ಬರೂ ನೀರುಳಿತಾಯ ಕಾಯಕದಲ್ಲಿ ಸ್ವಂತ ಆಸಕ್ತಿಯಿಂದ ಪಾಲ್ಗೊಳ್ಳಬೇಕು'. ಮಳೆ ನೀರು ಸಂಗ್ರಹ, ಕೆರೆ, ಒಡ್ಡು, ಇಂಗು ಗುಂಡಿಗಳ ನಿರ್ಮಾಣದಲ್ಲಿ ಪ್ರೀತಿಯಿಂದ ಭಾಗವಹಿಸಬೇಕು. ನೀರಿನ ನೆಮ್ಮದಿಯ ನೂರಾರು ದಾರಿಗಳಲ್ಲಿ ಯಾವ ದಾರಿಯನ್ನಾದರೂ ಕಂಡುಕೊಳ್ಳಬಹುದು... ಎಂದು ಅರಸರ ಕೋರಿಕೆಯಾಗಿದೆ... ಬನ್ನಿ... ನೀರಿಂಗಿಸೋಣ ಬನ್ನಿ...

(ಹಾಡುಗಾರರು ಹಾಡುತ್ತಾರೆ).

ಬನ್ನಿರೊ ಬನ್ನಿರಣ್ಣ ಕೋಲು ಕೋಲೆ
ತನ್ನಿರೊ ತನ್ನಿರಣ್ಣ ಕೋಲು ಕೋಲೆ
ಹನಿ ಹನಿ ಸೇರಿಸೋಣ ಕೋಲು ಕೋಲೆ
ನೀರಿಂಗಿಸೋಣ ಬನ್ನಿ ಕೋಲು ಕೋಲೆ

ಕೆರೆ ಒಡ್ಡು ಕಟ್ಟ ಬನ್ನಿ ಕೋಲು ಕೋಲೆ
ಮಳೆ ನೀರ ಹಿಡಿಯ ಬನ್ನಿ ಕೋಲು ಕೋಲೆ
ಬನ್ನಿರೊ ಬನ್ನಿರಣ್ಣ ಕೋಲು ಕೋಲೆ
ತನ್ನಿರೊ ತನ್ನಿರಣ್ಣ ಕೋಲು ಕೋಲೆ

# ಅಜ್ಜಿ ಕಥೆ

ಎಚ್. ಡುಂಡಿರಾಜ್

## ಪಾತ್ರಗಳು

ಪುಟ್ಟಿ
ಪುಟ್ಟಿ
ಮೇಳದವರು
ರಾಜ
ಮಂತ್ರಿ
ಸೇನಾಧಿಪತಿ
ಮಹಾರಾಣಿ
ಸೇವಕಿಯರು
ಮಂತ್ರವಾದಿ
ರಾಜಕುಮಾರಿ ಸಹಜಾ
ಬೇಟೆಗಾರರು
ಪ್ರಾಣಿಗಳು
ರಾಜಕುಮಾರರು
ಗುರುಗಳು
ನಾಟ್ಯಾಚಾರ್ಯ
ಅಜ್ಜಿ
ಇತ್ಯಾದಿ

## ಅಜ್ಜಿ ಕಥೆ

### ಒಂದು

ಮೇಳ : ಗಣಪಾ ನಮ್ಮನು ಕಾಯಪ್ಪ । ಓ ಗಣಪಾ
ನಿನ್ನಾ ಭಕ್ತರ ಕಾಯಪ್ಪ ।
ನೈವೇದ್ಯ ಮಾಡುವೆವು ಘಮ ಘಮ ಕಾಯಪ್ಪ
ಸ್ವೀಕರಿಸಿ ನಮ್ಮ ಕಾಯಪ್ಪ
ಮಕ್ಕಳ ನಾಟಕ ಚಿಕ್ಕ ಪುಟ್ಟ ತಪ್ಪ
ಬೊಟ್ಟು ಮಾಡದೆ ನೋಡಪ್ಪ । ಮೋರೆ
ಸೊಟ್ಟ ಮಾಡದೆ ನೋಡಪ್ಪ
ಕಾಯಪ್ಪ ಚಕ್ಕುಲಿ ಉಂಡೆ ತಿಂದ ಮೇಲೆ
ಒಂದಿಷ್ಟು ಜಾಗ ಇರಲಪ್ಪ । ನಂ ತಪ್ಪ
ಹೊಟ್ಟೇಲಿ ಹಾಕ್ಕೋಬೇಕಪ್ಪ ॥

ಪುಟ್ಟ : ನಂಸ್ಕಾರ. ನಾಟಕ ನೋಡಲಿಕ್ಕೆ ಬಂದು ಕೂತಿರೊ ಪುಟಾಣಿಗಳಿಗೆ ಸ್ವಾಗತ ಸುಸ್ವಾಗತ. ಇನ್ನು ಕೆಲವೇ ಸೆಕೆಂಡುಗಳಲ್ಲಿ ನಮ್ಮ ಇವತ್ತಿನ ನಾಟಕ.....

ಪುಟ್ಟಿ : ಏಯ್ ಪುಟ್ಟಾ ಇದಕ್ಕೇ ಹೇಳೋದು ಆತುರಗಾರನಿಗೆ ಬುದ್ಧಿಮಟ್ಟ ಅಂತ

ಪುಟ್ಟ : ಸಾಕ್ ಸುಮ್ನಿರೆ, ನನ್ ಬುದ್ಧಿ ಮಟ್ಟ ಆದ್ರೆ ನಿನ್ ಬುದ್ಧಿ ಸೊಟ್ಟ, ಅಂಥಾದ್ದೇನಾಯ್ತೀಗ?

ಪುಟ್ಟಿ : ಕ್ಷಮಿಸಬೇಕು. ಪ್ರೇಕ್ಷಕ ಮಹಾಶಯರೆ ಮತ್ತು ಮಹಿಳೆಯರೆ, ನಂ ಪುಟ್ಟ ಆತುರದಲ್ಲಿ ನಿಮ್ಮನ್ನೆಲ್ಲ ಮರೆತುಬಿಟ್ಟ, ಬರೇ ಪುಟಾಣಿಗಳಿಗೆ ಮಾತ್ರ ಸ್ವಾಗತ ಎಂದ. ಪುಟಾಣಿಗಳ ಜತೆ ಬಂದಿರೊ ದೊಡ್ಡವರಾದ ನಿಮಗೂ ಸ್ವಾಗತ.

ಪುಟ್ಟ : ಹೌದು, ಹೌದು. ನಿಮಗೂ ನಮ್ಮ ಆದರದ, ಆಕ್ಕರೆಯ, ಒಲವಿನ, ಹಾರ್ದಿಕ, ಹೃತ್ಪೂರ್ವಕ (ಪಿಸುಧ್ವನಿಯಲ್ಲಿ) ಇನ್ನೇನಾದ್ರೂ ಒಳ್ಳೆ ಶಬ್ದ ಇದ್ರೆ ಹೇಳೆ.

ಪುಟ್ಟಿ : ತುಂಬು ಹೃದಯದ

ಪುಟ್ಟ : ಹಾಂ ದೊಡ್ಡವರಿಗೂ ತೂಬು ಹೃದಯದ, ಕ್ಷಮಿಸಿ ತುಂಬು ಹೃದಯದ

ಸ್ವಾಗತ. ನಾವು ಆಡಬೇಕು ಅಂತಿರೋದು ಮಕ್ಕಳ ನಾಟಕ. ಆದ್ರಿಂದ ಬರೇ ಮಕ್ಕಳು ಮಾತ್ರ ಬಂದಿರ್ತಾರೆ ಅಂದ್ಕೊಂಡಿದ್ದೆ.

ಪುಟ್ಟಿ : ಆದರೆ ಕುದುರೆ ಹಿಂದೆ ಬಾಲದ ಹಾಗೆ ಬಾಲಕರ ಹಿಂದೆ ಪಾಲಕರೂ ಬರ್ತಾರೆ ಅನ್ನೊ ಸರಳ ಸಂಗತಿ ಪುಟ್ಟನಿಗೆ ಹೊಳೀಲಿಲ್ಲ. ಈ ಪುಟ್ಟಿಗೆ ಹೊಳೀತು.

ಮೇಳದ ನಾಯಕ : ಸಾಕ್ರಯ್ಯ ಸಾಕು, ಮಕ್ಕಳ ನಾಟಕ ಆಡ್ತೀವಿ ಅಂತ್ಹೇಳಿ ಈಗ ದೊಡ್ಡವರ ಹಾಗೆ ಒಣ ಜಗಳ ಮಾಡ್ಲಿಕ್ಕೆ ಶುರು ಮಾಡಿ ಬಿಟ್ರಲ್ಲ. ಅದೇನು ನಾಟಕ ಆಡ್ತೀರೋ ಬೇಗ ಆಡಿ ತೋರ್ಸ್ರಿ.

ಪುಟ್ಟ : ಇವತ್ತು ನಾವು ಒಂದು ಒಳ್ಳೆ ಮಕ್ಕಳ ನಾಟಕ ಆಡಬೇಕು ಅಂತ ಯೋಚನೆ ಮಾಡಿದ್ವಿ. ಎಷ್ಟು ಒಳ್ಳೆ ನಾಟಕ ಅಂತಂದ್ರೆ.....

ಪುಟ್ಟಿ : ಈ......ಷ್ಟು ಒಳ್ಳೆ ನಾಟಕ

ಪುಟ್ಟ : ಅಂದ್ರೆ ಅದ್ರಲ್ಲಿ ಕುಣಿತ ಇರಬೇಕು – ಹಾಡು ಇರಬೇಕು

ಪುಟ್ಟಿ : ಅರಮನೆ ಇರಬೇಕು, ಕಾಡು ಇರಬೇಕು

ಪುಟ್ಟ : ರಾಜ ಇರಬೇಕು, ರಾಣಿ ಇರಬೇಕು.

ಪುಟ್ಟಿ : ಪಿಶಾಚಿ ಇರಬೇಕು, ಪ್ರಾಣಿ ಇರಬೇಕು.

ಮೇ.ನಾಯಕ : (ಕಾಲುಕೊಟ್ಟು ಪುಟ್ಟನನ್ನು ಬೀಳಿಸಿ) ಬೇಕು ಬೇಕು ಅನ್ನೋದಕ್ಕೂ ಬ್ರೇಕು ಇರಬೇಕು.

ಪುಟ್ಟ : (ಎದ್ದು) ನಾನು ಏನು ಹೇಳ್ತಾ ಇದ್ದೆ?

ಪುಟ್ಟಿ : ಏನು ಹೇಳ್ತಾ ಇದ್ದೆ ಅನ್ನೋದು ಜ್ಞಾಪಕ ಇರಬೇಕು.

ಪುಟ್ಟ : ಅದೇ, ಮಕ್ಕಳ ನಾಟಕದಲ್ಲಿ ಏನೆಲ್ಲಾ ಇರಬೇಕು ಅಂತ ಹೇಳ್ತಾ ಇದ್ವಿ. ಅಂಥಾ ಒಂದು ಹೊಸ ಮಕ್ಕಳ ನಾಟಕ ಬರ್ಕೊಡಿ ಅಂತ ನಾವು ಎಷ್ಟೊ ಜನ ನಾಟಕಕಾರರ ಹತ್ರ ಬೇಡಿಕೊಂಡ್ವಿ.

ಪುಟ್ಟಿ : ಆದರೆ ಅವರೆಲ್ಲ ನಮಗೆ ಬಿಡುವಿಲ್ಲ ಹೋಗ್ರಯ್ಯ ಅಂತಂದ್ರು.

ಪುಟ್ಟ : ಆಡಿದ್ದೆ ಆಡಿ ಆಡಿ ನಮಗಂತೂ ಬೇಸರ ಆಗಿಬಿಟ್ಟಿದೆ.

ಪುಟ್ಟಿ : ನೋಡಿದ್ದೆ ನೋಡಿ ನೋಡಿ ನಿಮಗೂ ಬೇಸರ ಆಗಿರಬಹುದು.

ಇಬ್ಬರೂ : ಆದ್ರಿಂದ ಪ್ರಿಯ ಪ್ರೇಕ್ಷಕರೆ....

ಮೇ.ನಾಯಕ : ಇವತ್ತು ನಾವು ನಾಟಕ ಆಡೊಲ್ಲ. ನೀವೆಲ್ಲ ಮನೆಗೆ ಹೋಗಿ ಅಂತೀರಾ?

ಪುಟ್ಟ : ಛೇ, ಛೇ, ಛೇ ಹಾಗೆ ಹೇಳೋಕಾಗುತ್ತಾ? ನಾಟಕ ಇದೆ ಬನ್ನಿ ಅಂತ ಆಶ್ವಾಸನೆ ಕೊಟ್ಟು, ಈಗ ಇಲ್ಲ ಅಂತ ನಾವು ಹೇಳೋದಿಲ್ಲ.

ಪುಟ್ಟಿ : ನಾವಿನ್ನೂ ಅಷ್ಟು ದೊಡ್ಡ ಸುಳ್ಳು ಹೇಳುವಷ್ಟು ದೊಡ್ಡವರಾಗಿಲ್ಲ.

ಪುಟ್ಟ : ಈ ನಾಟಕಕಾರರ ಮುಲಾಜೇ ಬೇಡ ಅಂತ ನಾವು ಒಂದು ಬೇರೆ ಉಪಾಯ ಮಾಡಿದೀವಿ.

ಪುಟ್ಟಿ : ನಮ್ಮ ಹತ್ರ ಕತೆ ಹೇಳೋ ಕಂಪ್ಯೂಟರ್ ಇದೆ.

ಪುಟ್ಟ : ಆ ಕಂಪ್ಯೂಟರ್ ಕತೆ ಹೇಳ್ತಾ ಇದ್ರೆ ನಾಟಕಾನೇ ನೋಡ್ತಾ ಇದ್ದೀವೇನೋ ಅನ್ಸುತ್ತೆ.

ಮೇ.ನಾಯಕ: ಹಾಗಾದರೆ ಅದೆಂಥಾ ಕಂಪ್ಯೂಟರಪ್ಪಾ? ಅಮೆರಿಕಾದ್ದೊ, ಜರ್ಮನೀದೋ, ಜಪಾನದ್ದೋ?

ಪುಟ್ಟಿ : ಅದು ಅಪ್ಪಟ ಭಾರತೀಯ ಕಂಪ್ಯೂಟರ್

ಪುಟ್ಟ : ಜೀವಂತ ಕಂಪ್ಯೂಟರ್

ಮೇ.ನಾಯಕ : ಅದೆಲ್ಲಿದೆಯಪ್ಪಾ? ಬೇಗ ತಂದ್ಬಿಡಿ.

ಪುಟ್ಟ : ಸರಿ ಕಣ್ಮುಚ್ಕೊ. ಹ್ರಾಂ, ಹ್ರೀಂ, ಹ್ರೂಂ, ಛೂ ಮಂತ್ರಗಾಳಿ!

(ಅಜ್ಜಿ ಪ್ರವೇಶಿಸುವಳು)

ಮೇ. ನಾಯಕ : ಹೋ. ಅಜ್ಜಿ!

ಮೇಳ : ಅಜ್ಜಿ ಅಜ್ಜಿ ಅಡುಗೂಲಜ್ಜಿ
ಅಜ್ಜಿ ಅಜ್ಜಿ ಕತೆ ಹೇಳಜ್ಜಿ
ನೆನಪಿನ ಚಕಮಕಿ ಕಲ್ಲನು ಉಜ್ಜಿ
ಅದ್ಭುತ ರೋಚಕ ಕತೆ ಹೇಳಜ್ಜಿ ॥೧॥
ರಾಜ ರಾಣಿ ಕತೆ ಹೇಳಜ್ಜಿ
ರಂಜನೆಯೊಂದಿಗೆ ಚಿಂತನೆ ಬೆರಸಿ
ಬೇಸರ ಮರೆಸುವ ಕತೆ ಹೇಳಜ್ಜಿ ॥೨॥
ಮಕ್ಕಳ ಬಗ್ಗೆ ಇಟ್ಟು ಕಾಳಜಿ
ಕೇಳಿ ನಲಿಯುವ ಕತೆ ಹೇಳಜ್ಜಿ
ಸತ್ಯಕ್ಕೆ ಗೆಲುವು, ಸುಳ್ಳಿಗೆ ಸೋಲು
ಕತೆಯಲ್ಲಾದರೂ ಆಗಲಿ ಅಜ್ಜಿ ॥೩॥

ಅಜ್ಜಿ : ಆಯ್ತು ಕಣ್ರೋ, ಆಯ್ತು. ಶಿವ ಶಿವಾ ಅಂತ ಬತ್ತಿ ಹೊಸೀತಿದ್ದ ನನ್ನನ್ನು ಈ ಮಕ್ಕಳು ಇಲ್ಲಿಗೆ ಎಳಕೊಂಡು ಬಂದು ಈಗ ಕತೆ ಹೇಳು ಅಂತ ಪ್ರಾಣ ತಿಂತಿದಾರೆ.

ಪುಟ್ಟಿ : ಪ್ರಾಣ ತಿನ್ನೋಲ್ಲ ಅಜ್ಜಿ, ಹುರಿಗಾಳು ಕೊಡು, ಅದನ್ನೇ ತಿಂತೀವಿ.

ಅಜ್ಜಿ : ಶ್ ! ತರಲೆ ಮಾಡ್ಬೇಡ, ಮಕ್ಕಳಿಗೆ ಕತೆ ಹೇಳೋದು ಅಂದ್ರೆ ನನಗೂ ಇಷ್ಟ. ಮನೆ ಒಳಗೆ ಕೂತು ಬೇಕಾದಷ್ಟು ಕತೆ ಹೇಳ್ತೇನೆ. ಆದರೆ ಇಷ್ಟು ದೊಡ್ಡ ಸಭೆ ಮುಂದೆ ನಿಂತು ಕತೆ ಹೇಳ್ಬೇಕು ಅಂತಂದ್ರೆ ಯಾಕೋ ಒಂಥರಾ.....

ಪುಟ್ಟಿ : ಭಯ ಆಗುತ್ತಾ? ಹೆದರುಪುಕ್ಕಿ

ಅಜ್ಜಿ : ಭಯ ಅಲ್ಲ, ನಾಚಿಕೆ ಆಗುತ್ತೆ. ಹೆಂಗಸು ಅಂತ ಜೀವನ ಇಡೀ ಮನೆಯೊಳಗೇ ಇದ್ದು, ಈಗ ಒಮ್ಮೆಲೆ ನಿಮ್ಮೆದುರು ನಿಲ್ಲಬೇಕು ಅಂದರೆ ಒಂಥರಾ ಸಂಕೋಚ. ಆದರೆ ಏನ್ಮಾಡೋದು? ಕತೆ ಹೇಳದಿದ್ರೆ ಈ ಮಕ್ಕಳು ಬಿಡೋದಿಲ್ಲ.

ಪುಟ್ಟಿ : ನಮ್ಮಪ್ಪನ ಆಣೆಗೂ ಬಿಡೋದಿಲ್ಲ.

ಅಜ್ಜಿ : ಹೋಗ್ರೋ, ನಿಮ್ಮ ಅಜ್ಜನ ಹತ್ರ ಕತೆ ಹೇಳ್ಬಿಕ್ಕೆ ಹೇಳಿ ಅಂತಂದ್ರೆ, ಕತೆ ಹೇಳೋದು ಅಜ್ಜಿ ಕೆಲಸ, ಇಸ್ಪೀಟ್ ಆಡೋದು ಅಜ್ಜನ ಕೆಲಸ ಅಂತಾವೆ. (ನಿಟ್ಟುಸಿರು ಬಿಟ್ಟು) ಹುಟ್ಟಿದಾಗಿನಿಂದ ಈ ತನಕ ಹೀಗೇ ಆಗೋಯ್ತು. ಒಂದು ಕಣ್ಣಿಗೆ ಬೆಣ್ಣೆ, ಒಂದು ಕಣ್ಣಿಗೆ ಸುಣ್ಣ.

(ಹಾಡತೊಡಗುವಳು.)

ಹೆಣ್ಣೀನ ಬಾಳೂ.....ಬಾಳೆಲ್ಲಾ ಗೋಳೂ......

ಪುಟ್ಟಿ : ಹಾಡಲ್ಲ ಅಜ್ಜಿ , ಕತೆ ಹೇಳು, ಕತೆ

ಅಜ್ಜಿ : ಸರಿ ಎಲ್ಲಾ ಕೂತ್ಕೊಳ್ಳಿ, ಈಗಲೇ ಹೇಳ್ತೀನಿ. ಒಂದೇ ಒಂದು ಕತೆ ಹೇಳೋದು.

ಪುಟ್ಟಿ : ಒಂದೇನಾ? ಎರಡಾದ್ರೂ ಹೇಳಜ್ಜಿ

ಅಜ್ಜಿ : ಊಹೂಂ ಒಂದೇ ಒಂದು.

ಪುಟ್ಟಿ : ಸರಿ ಹಾಗಾದ್ರೆ, ದೊಡ್ಡ ಕತೆ ಹೇಳ್ಬೇಕು

ಅಜ್ಜಿ : ಹೂಂ, ಒಂದಾನೊಂದು ಊರಿನಲ್ಲಿ

ಪುಟ್ಟಿ : ಒಬ್ಬ ರಾಜ ಇದ್ದ

ಅಜ್ಜಿ : ಬರೇ ರಾಜ ಅಲ್ಲ, ಮಹಾರಾಜ, ಅವನ ಹೆಸರು ಪುರುಷಸಿಂಹ ಮಹಾರಾಜ ಅಂತ. ಅವನಿಗೆ......

ಪುಟ್ಟಿ : ಒಬ್ಬಳು ಸುಂದರಿಯಾದ ರಾಣಿ ಇದ್ದಳು.

ಅಜ್ಜಿ : ಊಹುಂ, ಒಬ್ಬಳಲ್ಲ ಎಂಟು ಮಂದಿ ರಾಣಿಯರಿದ್ದರು.

## ಎರಡು

(ರಾಜನ ಆಸ್ಥಾನದಲ್ಲಿ ಮಂತ್ರಿ, ಸೇನಾಪತಿ ಮತ್ತಿತರರು ಆಸೀನರಾಗಿದ್ದಾರೆ. ಭಟರ ಪರಾಕು ಕೇಳಿ ಬರುತ್ತದೆ).

ಪರಾಕು : ಪುರುಷಾಪುರದ ನಿರಂಕುಶ ಚಕ್ರವರ್ತಿ, ಪುರುಷಸಿಂಹ ಮಹಾರಾಜರಿಗೆ -
ಬಹುಪರಾಕ್..... ಬಹುಪರಾಕ್
ಗಂಡುಮೆಟ್ಟಿನ ನೆಲದ ಪ್ರಚಂಡ ಪರಾಕ್ರಮೀ.....
ಕಷ್ಟ ನಿವಾರಕಾ..... ಇಷ್ಟ ಪ್ರದಾಯಕಾ......
ಅಷ್ಟಪತ್ನೀ ವ್ರತಸ್ಥಾ.............
ಸತ್ಯಪಕ್ಷಪಾತಿ, ನ್ಯಾಯಪಕ್ಷಪಾತಿ, ಧರ್ಮಪಕ್ಷಪಾತೀ........
ಚಪಾತಿಪ್ರಿಯಾ,....ಬಹುಪರಾಕ್ ಬಹುಪರಾಕ್

ರಾಜ : ಈ ಸಭೆಯಲ್ಲಿ ನಾವಿಂದು ಚರ್ಚಿಸಬೇಕಾದ ವಿಷಯ ಯಾವುದು?

ಮಂತ್ರಿ : ಮೊತ್ತ ಮೊದಲನೆಯದಾಗಿ ನಮ್ಮ ಪುರುಷಸಿಂಹ ಮಹಾರಾಜರ ಸಾಧನೆಗಳು.

ರಾಜ : ಏನು? ನನ್ನ ಸಾಧನೆಗಳು ಚರ್ಚಾಸ್ಪದವೆ?

ಮಂತ್ರಿ : ಛೇ, ಛೇ, ಹಾಗಲ್ಲ ಪ್ರಭೂ. ನಿಮ್ಮ ಸಾಧನೆ, ಪರಾಕ್ರಮ, ಕೀರ್ತಿ, ರಾಜ್ಯದ ಮೂಲೆ ಮೂಲೆಗೂ ತಲುಪುವಂತೆ ನಾವು ಪ್ರಚಾರ ಮಾಡಿದ್ದೇವೆ. ಆಶ್ಚರ್ಯದ ಸಂಗತಿ ಎಂದರೆ ಕ್ಷಮಿಸಿ, ಸಂತೋಷದ ಸಂಗತಿ ಎಂದರೆ, ಪ್ರಜೆಗಳು ಈ ಪ್ರಚಾರವನ್ನು ಸಂಪೂರ್ಣವಾಗಿ ನಂಬಿದ್ದಾರೆ.

ರಾಜ : ನಂಬಲೇಬೇಕು. ಬಾಳಿಗೆ ನಂಬಿಕೆಯೇ ಬೆಳಕು. ನಂಬಿ ಕೆಟ್ಟವರಿಲ್ಲವೋ ಅಂತ, ಒಂದು ಕೀರ್ತನೆಯೇ ಇದೆ. ಅಂದಹಾಗೆ ಮಂತ್ರಿಗಳೆ, ಈ ಕೀರ್ತನೆಯನ್ನು ಯಾವ ದಾಸರು ರಚಿಸಿದ್ದು? ಪುರಂದರದಾಸರೋ, ಕನಕದಾಸರೋ?

ಮಂತ್ರಿ : ಅವರಿಬ್ಬರೂ ಅಲ್ಲ, ಕುಮಾರದಾಸರೇ ಅದನ್ನು ಬರೆದಿರಬೇಕು.

ರಾಜ : ಕುಮಾರದಾಸರೋ? ಕುಮಾರವ್ಯಾಸರೋ?

ಮಂತ್ರಿ : ಈ ಬಗ್ಗೆ ನಾವು ತಲೆ ಕೆಡಿಸಿಕೊಳ್ಳುವುದು ಬೇಡ ಪ್ರಭುಗಳೇ, ನಿಜವಾಗಿ ಆ ಕೀರ್ತನೆಯನ್ನು ರಚಿಸಿದ್ದು ಯಾರು ಎಂಬ ಬಗ್ಗೆ ಒಂದು ಸಂಶೋಧನಾ ಮಂಡಲಿ ನೇಮಿಸೋಣ.

ರಾಜ : ಅಂದ ಹಾಗೆ ಆ ಕೀರ್ತನೆ ಯಾವುದು?

ಮಂತ್ರಿ : ಅದು....ಅದು.....

ರಾಜ : ಪರವಾಗಿಲ್ಲ ಬಿಡಿ. ಅದು ಯಾವುದೆಂಬ ಬಗ್ಗೆ ಇನ್ನೊಂದು ಸಂಶೋಧನಾ ಮಂಡಲಿ ನೇಮಿಸೋಣ.

ಸೈನಿಕ : (ಪ್ರವೇಶಿಸಿ) ಮಹಾರಾಜರಿಗೆ ಜಯವಾಗಲಿ. ನಿನ್ನೆ ರಾತ್ರಿ ನಮ್ಮ ರಾತ್ರಿ ಕಾವಲುಗಾರರು ನಗರದಲ್ಲಿ ಸಂಶಯಾಸ್ಪದ ರೀತಿಯಲ್ಲಿ ತಿರುಗಾಡುತ್ತಿದ್ದ ಮೂವರನ್ನು ಹಿಡಿದು ಬೇಡಿ ಹಾಕಿದ್ದಾರೆ. ಮಾತ್ರವಲ್ಲ, ಸೆರೆಮನೆಯಲ್ಲಿ ಕೂಡಿ ಹಾಕಿದ್ದಾರೆ.

ರಾಜ : ಶಹಭಾಸ್! ಶಹಬಾಸ್! ನಮ್ಮ ರಾತ್ರಿ ಕೆಲಸಗಾರರು ರಾತ್ರಿಯೂ ಕೆಲಸ ಮಾಡುತ್ತಾರೆಯೇ? ಕೆಲಸ ಮಾಡಿದ್ದು ಮಾತ್ರವಲ್ಲದೆ, ಕಳ್ಳರನ್ನೂ ಹಿಡಿದಿದ್ದಾರೆ. ಒಳ್ಳೆಯದು, ಅವರಿಗೆ ವಿಶೇಷ ಸಂಭಾವನೆ ನೀಡಬೇಕು.

ಸೈನಿಕ : ಹಾಗೇ ಆಗಲಿ ಮಹಾಪ್ರಭು, ಈ ಕೂಡಲೇ ಆ ಕಳ್ಳರಿಗೆ ವಿಶೇಷ ಸಂಭಾವನೆ ನೀಡುತ್ತೇವೆ.

ರಾಜ : ಮೂರ್ಖ! ಸಂಭಾವನೆ ಕೊಡಲು ಹೇಳಿದ್ದು ಕಳ್ಳರಿಗಲ್ಲ, ಕಾವಲುಗಾರರಿಗೆ. ಆ ಕಳ್ಳರನ್ನು ಕರೆದುಕೊಂಡು ಬಾ. ನಿಲ್ಲು, ಒಬ್ಬೊಬ್ಬರಾಗಿ ಬರಲಿ.

ಸೈನಿಕ : ಅಪ್ಪಣೆ ಮಹಾಪ್ರಭೂ

(ಮಂತ್ರಿ ರತ್ನಗಂಬಳಿ ಮಡಚುವನು. ಇತರ ಬೆಲೆ ಬಾಳುವ ವಸ್ತುಗಳನ್ನು ಅಡಗಿಸಿಡುವನು)

ರಾಜ : ಇದೇನು ಮಂತ್ರಿಗಳೆ? ಏನು ಮಾಡುತ್ತಿದ್ದೀರಿ?

ಮಂತ್ರಿ : ಇನ್ನು ಕೆಲವೇ ಕ್ಷಣಗಳಲ್ಲಿ ಇಲ್ಲಿಗೆ ಆಗಮಿಸಲಿರುವ ಆ ಚೋರ ಶಿಖಾಮಣಿಗಳ ಸ್ವಾಗತಕ್ಕೆ ಸಿದ್ಧತೆ ಮಾಡುತ್ತಿದ್ದೇವೆ ಪ್ರಭೂ.

ರಾಜ : ಹಾಂ. ನಿಜ. ನಿಜ, ನಾವೆಲ್ಲ ಕಳ್ಳರ ತನಿಖೆಯಲ್ಲಿ ಮುಳುಗಿರುವಾಗ ಅವರು ಇದನ್ನೆಲ್ಲಾ ಕದ್ದೊಯ್ಯುವ ಸಾಧ್ಯತೆ ಇದೆ. (ನನ್ನನ್ನು ಬಿಟ್ಟುಬಿಡಿ ಎಂದು ಕಳ್ಳನು ಚೀರುತ್ತಿರುವಾಗ ಸೈನಿಕರು ಕಳ್ಳನನ್ನು ಎಳೆತಂದು ರಾಜನ ಪಾದದಡಿ ನೂಕುವರು.)

ರಾಜ–ಮಂತ್ರಿ : ಹೂಂ ಎದ್ದು ನಿಲ್ಲು.

(ಕಳ್ಳನು ಎದ್ದು ಮಂತ್ರಿಯ ಎದುರು ನಿಲ್ಲುವನು).

ಸೇನಾಪತಿ : ರಾಜರಿಗೆ ಮುಖ ಮಾಡಿ ನಿಲ್ಲಬೇಕು ಅನ್ನುವುದೂ ನಿನಗೆ ಗೊತ್ತಿಲ್ಲವೇ?

ಕಳ್ಳ : (ಸೇನಾಪತಿಯತ್ತ ತಿರುಗಿ) ಕ್ಷಮಿಸಬೇಕು ಪ್ರಭೂ, ತಾವು ರಾಜರು ಎಂದು ನನಗೆ ತಿಳಿದಿರಲಿಲ್ಲ. ವಂದನೆಗಳು. ತಾವೇ ನಿಜವಾದ ರಾಜರು ಎಂಬುದು ತಮ್ಮ ಮುಖಕಾಂತಿಯನ್ನು ನೋಡಿದರೆ ಮಹಾ ಮೂರ್ಖನಿಗೂ ತಿಳಿಯುತ್ತದೆ. ತಮ್ಮ ದರ್ಶನದಿಂದ ಈ ಬಡವನ ಜೀವನ ಪಾವನವಾಯಿತು.

ಮಂತ್ರಿ : ಮೂರ್ಖ! ಮಹಾರಾಜರೆದುರು ತಲೆ ಅಡಿ ಹಾಕಿ ನಿಲ್ಲಬೇಕು. (ಕಳ್ಳ ಶೀರ್ಷಾಸನದ ಭಂಗಿಯಲ್ಲಿ ನಿಲ್ಲುವನು. ಬೀಳುವನು. ಸೈನಿಕರು ಅವನನ್ನು ಹೊಡೆದು ಕಾಲು ಬಗ್ಗಿಸಿ, ತಲೆ ತಗ್ಗಿಸಿ ನಿಲ್ಲಿಸುವರು.)

ರಾಜ : ನೋಡಿದರೆ ಇನ್ನೂ ಚಿಕ್ಕ ವಯಸ್ಸಿನವನ ಹಾಗೆ ಕಾಣುತ್ತಾನೆ.

ಮಂತ್ರಿ : ಬೆಳೆಯ ಸಿರಿ ಮೊಳಕೆಯಲ್ಲಿ. ಈತ ಮುಂದೆ ಈ ನಾಡಿನ ಕುಪ್ರಸಿದ್ಧ ಕಳ್ಳನಾಗುತ್ತಾನೆ ಎಂಬುದರಲ್ಲಿ ಸಂಶಯವಿಲ್ಲ.

ಸೇನಾಪತಿ : ಇವನು ಮಾಡಿದ ಕಳ್ಳತನಕ್ಕೆ ಈಗಲೇ ಕಠಿಣ ಶಿಕ್ಷೆ ಆಗಬೇಕು.

ಕಳ್ಳ : ಪ್ರಭೂ, ನಾನು ಯಾವ ಕಳ್ಳತನವನ್ನೂ ಮಾಡಿಲ್ಲ.

ಮಂತ್ರಿ : ಪ್ರಭೂ, ಇವನು ಕಳ್ಳನಷ್ಟೇ ಅಲ್ಲ, ಸುಳ್ಳನೂ ಹೌದು. ಆದ್ದರಿಂದ ಇವನಿಗೆ ಇಮ್ಮಡಿ ಶಿಕ್ಷೆ ಆಗಬೇಕು.

ಕಳ್ಳ : ಇಲ್ಲ ಪ್ರಭೂ, ಸತ್ಯವಾಗಿಯೂ ನಾನು ಸುಳ್ಳು ಹೇಳುತ್ತಿಲ್ಲ.

ಮಂತ್ರಿ : ಸುಳ್ಳು ಸುಳ್ಳೇ ಈತ ಸತ್ಯವಾಗಿಯೂ ಸುಳ್ಳು ಹೇಳುತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದಾನೆ ಎಂಬುದು ಇವನ ಮುಖಭಾವದಿಂದಲೇ ತಿಳಿಯುತ್ತದೆ.

ರಾಜ : ಹೌದು, ನಮ್ಮ ರಾಜ್ಯದಲ್ಲಿ ಸುಳ್ಳು ಹೇಳುವವರು ಮಾತ್ರ ಇಷ್ಟು ಧೈರ್ಯದಿಂದ ಮಾತಾಡಬಲ್ಲರು.

ಕಳ್ಳ : ಮಹಾಪ್ರಭುಗಳು ನನಗೆ ನ್ಯಾಯ ನೀಡಬೇಕು. ಸುಮ್ಮನೆ ರಸ್ತೆ ಬದಿಯಲ್ಲಿ ನಡೆದು ಹೋಗುತ್ತಿದ್ದ ನನ್ನನ್ನು ಸೈನಿಕರು ಬಂಧಿಸಿ ಹಿಂಸಿಸಿದ್ದಾರೆ.

ಸೇನಾಪತಿ : ಸುಳ್ಳು, ಈತ ಸುಮ್ಮನೆ ನಡೆಯುತ್ತಿರಲಿಲ್ಲ. ಅನುಮಾನಾಸ್ಪದವಾಗಿ ನಡೆಯುತ್ತಿದ್ದುದರಿಂದ ಇವನನ್ನು ಬಂಧಿಸಿದ್ದೇವೆ.

ಕಳ್ಳ : ನನ್ನ ಮನಸ್ಸಿನಲ್ಲಿ ಸ್ವಲ್ಪವೂ ಅನುಮಾನವಿರಲಿಲ್ಲ ಪ್ರಭೂ. ಮಂತ್ರಿಗಳ ಮನೆ ಅದೇ ರಸ್ತೆಯಲ್ಲಿ ಎಂಬುದು ನನಗೆ ಖಚಿತವಾಗಿ ಗೊತ್ತಿತ್ತು.

ರಾಜ : ನೀನು ಬೊಗಳುತ್ತಿರುವುದಾದರೂ ಏನು?

ಕಳ್ಳ : ಮಹಾಪ್ರಭೂ, ಈ ಊರಿನ ಪ್ರಸಿದ್ಧ ವರ್ತಕರಾದ ರತ್ನಪ್ಪ ಶೆಟ್ಟರು ರಾತ್ರಿ ಎರಡು ಗಂಟೆಗೆ ಮಂತ್ರಿಗಳ ಮನೆ ಹಿಂಬಾಗಿಲಿಗೆ ಹೋಗಿ ಅವರು ತೋರಿಸುವ ಸಿಮೆಂಟು ಮೂಟೆಗಳನ್ನು ತರಲು ನನ್ನ ಹತ್ತಿರ ಹೇಳಿದ್ದರು. ಅದಕ್ಕಾಗಿ ನಾನು ಹೊರಟಿದ್ದೆ. ನಾನು ಕಳ್ಳನಲ್ಲ. ಕೂಲಿಯವನು.

ಮಂತ್ರಿ : (ಕಳ್ಳನಿಗೆ) ಸುಮ್ಮನಿರು. ಮಹಾಪ್ರಭೂ! ಈತ ಅನುಮಾನಾಸ್ಪದವಾಗಿ ನಡೆದಾಡುತ್ತಿದ್ದದ್ದು ಮಾತ್ರವಲ್ಲ, ಈತ ನುಡಿಯುತ್ತಿರುವುದೂ ಅನುಮಾನಾಸ್ಪದ ವಾಗಿದೆ. ಇವನ ಹತ್ತಿರ ಮಾತು ಬೆಳೆಸಿ ಸಮಯ ವ್ಯರ್ಥ ಮಾಡುವುದರಲ್ಲಿ ಅರ್ಥವಿಲ್ಲ, ಇವನಿಗೆ ಕೂಡಲೇ ಶಿಕ್ಷೆ ವಿಧಿಸಬೇಕು.

ರಾಜ : ಹುಂ. ಈ ಕಳ್ಳ ಇನ್ನೂ ಬಾಲಕನಾಗಿರುವುದರಿಂದ ಇವನಿಗೆ ಛಡಿ ಏಟಿನ ಶಿಕ್ಷೆ ಸಾಕು. ಅನುಮಾನಾಸ್ಪದವಾಗಿ ನಡೆದದ್ದು, ಸುಳ್ಳು ಹೇಳಿದ್ದು, ಮತ್ತು....

ಮಂತ್ರಿ : ಅನುಮಾನಾಸ್ಪದವಾಗಿ ನುಡಿದದ್ದು.

ರಾಜ : ಹೌದು, ಈ ಮೂರು ತಪ್ಪುಗಳಿಗೆ ತಲಾ ಎರಡರಂತೆ ಒಟ್ಟು ಏಳು ಛಡಿ ಏಟು.

ಕಳ್ಳ : ಪ್ರಭೂ, ಎರಡು ಮೂರ್ಲಿ ಆರು, ಏಳಲ್ಲ.

ರಾಜ : ಛುಪ್, ನಡುವೆ ಮಾತಾಡಿದ್ದಕ್ಕೆ ಇನ್ನೂ ಒಂದು. ಒಟ್ಟು ಎಂಟು ಏಟು.

(ಸೈನಿಕರಿಗೆ ಹೊಡೆಯುವಂತೆ ಸನ್ನೆ ಮಾಡುವರು. ಮೊದಲ ಏಟು ಬಿದ್ದಾಗ ಕಳ್ಳನು ಬೊಬ್ಬೆ ಹೊಡೆಯುವನು)

ರಾಜ : ನಿಲ್ಲಿಸು, ಏಯ್ ಕಳ್ಳ, ನಮ್ಮ ರಾಜ್ಯದಲ್ಲಿ ಯಾರೂ ಅಳಬಾರದು ಎಂಬ ಕಾನೂನು ಇದೆ. ಅತ್ತರೆ ಇನ್ನೂ ಹೆಚ್ಚಿನ ಶಿಕ್ಷೆ ನೀಡಬೇಕಾಗುತ್ತದೆ.

(ಸೈನಿಕರು ಪುನಃ ಒಂದು..... ಎರಡು.... ಎಣಿಸುತ್ತಾ ಹೊಡೆಯುವರು. ಕಳ್ಳನು ಒತ್ತಾಯದಿಂದ ಗಹಗಹಿಸಿ ನಗುವನು)

ಮೇಳ : ಹೊಡಿ ಹೊಡಿ ತಾಳುವೆ ಛಡಿ ಏಟು! ಆಹಾ!
ಬಡಿ ಬಡಿ ಬಿಡದೆ ಇನ್ನಷ್ಟು ! ಓಹೋ!
ರಾಜರು ಪ್ರಜೆಗಳ ಪಾಲಿಸಲಿ
ಛಡಿ ಏಟನು ದಯಪಾಲಿಸಲಿ ಹೊಡಿ ಹೊಡೀ

(ಸೈನಿಕರು ಕಳ್ಳನ ಸರಪಳಿ ಬಿಚ್ಚ ತೊಡಗುವರು.)

ರಾಜ : ನಿಲ್ಲಿ, ಮೊದಲು ಹೊರಗೆ ಕೊಂಡೊಯ್ದು, ಆ ಬಳಿಕ ಸರಪಳಿ ಬಿಚ್ಚಿ.

(ಸೈನಿಕರು ಅವನನ್ನು ಕೊಂಡೊಯ್ದು ಇನ್ನೊಬ್ಬ ಕಳ್ಳನನ್ನು ಎಳೆದು ತರುವರು)

ರಾಜ : ಈ ಕಳ್ಳನೂ ಎಳೆಯ ವಯಸ್ಸಿನವನು. ಮಂತ್ರಿಗಳೆ, ಇದೇನು ಈಚೆಗೆ ನಮ್ಮ ರಾಜ್ಯದಲ್ಲಿ ಕಳ್ಳ ಮಕ್ಕಳೇ ಹೆಚ್ಚಾಗಿ ಹುಟ್ಟುತ್ತಿದ್ದಾರೆಯೇ?

ಮಂತ್ರಿ : ಇಲ್ಲ ಪ್ರಭೂ, ನಮ್ಮ ರಾಜ್ಯದ ವಾತಾವರಣ ಇವರನ್ನೆಲ್ಲ ದಾರಿ ತಪ್ಪಿಸುತ್ತಿದೆ. ಈ ಸಿನಿಮಾ, ಟೀವಿ ಇವುಗಳ ಪ್ರಭಾವದಿಂದ ಇವರೆಲ್ಲ ಕಳ್ಳರಾಗುತ್ತಿದ್ದಾರೆ.

ರಾಜ : ಈತ ಮಾಡಿರೋ ಕಳ್ಳತನ ಏನು?

ಸೈ : ಇವನು ರಾತ್ರಿ ಹೊತ್ತಿನಲ್ಲಿ ಸಂಶಯಾಸ್ಪದವಾಗಿ ಕುಳಿತಿದ್ದ.

೨ನೇ ಕಳ್ಳ : ನಾನು ಕುಳಿತದ್ದು ಮೂತ್ರಶಂಕೆಗೆ ಪ್ರಭೂ.

ಮಂತ್ರಿ : ಬಾಯ್ಮುಚ್ಚು. ಅದೇನೇ ಇದ್ದರೂ ನಮ್ಮ ಸೈನಿಕರು ನಿನ್ನನ್ನು ಬಂಧಿಸಿರುವುದರಿಂದ ನಮ್ಮ ಕಾನೂನಿನ ಪ್ರಕಾರ ನೀನು ಕಳ್ಳ.

ರಾಜ : ಇದನ್ನು ಸುಮ್ಮನೆ ಒಪ್ಪಿಕೊಂಡರೆ ಎರಡು ಛಡಿ ಏಟು. ಕಳ್ಳನಲ್ಲ ಅಂತ ಸುಳ್ಳು ಹೇಳಿದರೆ ನಾಲ್ಕು ಛಡಿ ಏಟು.

ಕಳ್ಳ : ಆಗಲಿ ಮಹಾಪ್ರಭೂ, ನಾನು ಖಂಡಿತಾ ಕಳ್ಳನಲ್ಲ.

ರಾಜ : ಅರೆ! ಇವರಿಗೆಲ್ಲ ಸುಳ್ಳು ಹೇಳಲು ಅದೆಷ್ಟು ಉತ್ಸಾಹ. ಹೂಂ, ನಾಲ್ಕು

(ಹೊಡೆಯುವಂತೆ ಸನ್ನೆ ಮಾಡುವನು. ಏಟು ಬಿದ್ದಾಗ ಕಳ್ಳನು ನಗುತ್ತಾನೆ.)

ರಾಜ : ಇವನು ಹಳೆ ಅಪರಾಧಿ ಇರಬೇಕು. ಅಳಬಾರದು ಎಂಬ ನಮ್ಮ ಕಾನೂನು ಇವನಿಗೆ ತಿಳಿದಿದೆ.

ಕಳ್ಳ : ಹೌದು ಮಹಾಸ್ವಾಮೀ, ನಾನಿಲ್ಲಿಗೆ ಅನೇಕ ಸಲ ಬಂದಿದ್ದೇನೆ. ಪ್ರತೀ ಬಾರಿಯೂ ಸತ್ಯ ಹೇಳಿದ್ದರಿಂದ ನನ್ನ ಬೆನ್ನು ಹೀಗಾಗಿದೆ. (ಬೆನ್ನಿನ ಬಾಸುಂಡೆ ತೋರಿಸುವನು.) ಈಗ ಜಡ್ಡುಗಟ್ಟಿದ ಈ ಬೆನ್ನಮೇಲೆ ಏಟು ಬೀಳುವಾಗ ಕಚಗುಳಿ ಇಟ್ಟಂತಾಗಿ ನನಗೆ ನಿಜವಾಗಿಯೂ ನಗು ಬರುತ್ತದೆ.

(ರಾಜನು ಸನ್ನೆ ಮಾಡುವನು. ಸೈನಿಕರು ಅವನನ್ನು ಎಳೆದೊಯ್ದು ಹುಡುಗಿಯೊಬ್ಬಳನ್ನು ಕರೆತರುವರು.)

ರಾಜ : ಮಂತ್ರಿಗಳೆ, ಇದೇನು? ನಮ್ಮ ರಾಜ್ಯದಲ್ಲಿ ಹೆಣ್ಣು ಮಕ್ಕಳೂ ಕಳ್ಳತನಕ್ಕೆ ಇಳಿದಿದ್ದಾರೆಯೇ?

ಮಂತ್ರಿ : ಇರಬಹುದು. ನಮ್ಮ ಸಂವಿಧಾನದಲ್ಲಿ ಎಲ್ಲರಿಗೂ ಸಮಾನ ಅವಕಾಶಗಳಿವೆ.

ರಾಜ : ಯಾರೇ ಕದ್ದರೂ ಅದು ಅಪರಾಧ. ಹೆಣ್ಣು ಮಕ್ಕಳು ಕದ್ದರಂತೂ ಅದು ಮಹಾಪರಾಧ. ಆದ್ದರಿಂದ ಇವಳಿಗೆ ಹತ್ತು ಛಡಿ ಏಟು ಕೊಡಬೇಕು.

ಕಳ್ಳಿ : ಪ್ರಭೂ ನಾನು ಬಡವಿ. ಕಸದ ತೊಟ್ಟಿಯಲ್ಲಿ ಆಹಾರ ಪದಾರ್ಥಗಳನ್ನು ಅರಸುತ್ತಿದ್ದೆ. ಕಳ್ಳತನ ಮಾಡಿಲ್ಲ, ನನ್ನನ್ನು ಬಿಟ್ಟುಬಿಡಿ.

ರಾಜ : ನಮ್ಮ ಸಮಾಜದಲ್ಲಿ ಮಹಿಳೆಯರ ಸ್ಥಾನಮಾನಗಳು ಏನು? ಅವರ ಜವಾಬ್ದಾರಿಗಳು ಏನು? ಅವರು ಹೇಗೆ ಬಾಳಬೇಕೆಂಬ ಬಗ್ಗೆ ನಾವು ಸ್ವತಃ ಸ್ತ್ರೀಯರ ಸ್ಥಾನಮಾನ ಅಥವಾ ಹದಿಬದೆಯ ಧರ್ಮ ಎಂಬ ಬೃಹದ್ಗ್ರಂಥ ವನ್ನು ಬರೆದು ಪ್ರಕಟಿಸಿದ್ದೇವೆ. ಮಂತ್ರಿಗಳೆ, ಅದರ ಒಂದು ಪ್ರತಿ ಈ ಕಳ್ಳಿಗೆ ಕೊಡಿ. (ಮಂತ್ರಿ ಕೊಡುವನು) ಇದನ್ನು ಚೆನ್ನಾಗಿ ಓದಿ, ಇನ್ನು ಮುಂದಾದರೂ ಒಳ್ಳೆಯ ನಡತೆ ರೂಢಿಸಿಕೋ. ನೀನು ಹುಟ್ಟಿದ ಮನೆಗೂ, ಹೋಗುವ ಮನೆಗೂ ಕೀರ್ತಿ ತರುವವಳಾಗು.

ಕಳ್ಳಿ : ಹಾಗೇ ಆಗಲಿ ಮಹಾಪ್ರಭೂ, ಆದರೆ ನನಗೆ ಓದಲಿಕ್ಕೆ ಬರುವುದಿಲ್ಲ. ಬೇಕಾದರೆ ಓದು ಬರಹ ಕಲಿತು......

ರಾಜ : ಬೇಡ, ಬೇಡ, ಹೆಣ್ಣು ಮಕ್ಕಳು ಹೆಚ್ಚು ಓದಬಾರದು. ಗೃಹಿಣೀ ಗೃಹಮುಚ್ಯತೇ ಅಂತ. ಅಂದರೆ ಹೆಣ್ಣುಮಕ್ಕಳು ಮುಚ್ಚಿದ ಬಾಗಿಲಿನ ಒಳಗೇ ಇರಬೇಕು. (ಸೈನಿಕರು ಸುಮ್ಮನೆ ನೋಡುತ್ತಿರುವರು.)

ರಾಜ : ಏನು ನೋಡುತ್ತಿದ್ದೀರಿ? ಛಡಿ ಏಟು ಹತ್ತು (ಸೈನಿಕರು ಹೊಡೆಯಲು ಕೈ ಎತ್ತಿದಾಗ)

ಮೇಳ : ಪುರುಷಪುರದಾ ಪ್ರಜೆಗಳು
ಎಂಥಾ ಸುಖಿಗಳು
ತಿನ್ನುವರು ಆಹಾ ತಿನ್ನುವರು
ನಗುನಗುತ್ತಲೆ ತಿನ್ನುವರು।
ಛಡಿ ಏಟುಗಳಾ ತಿನ್ನುವರು
ಎಂಥಾ ಸುಖಿಗಳು
ಉಣ್ಣುವರು ಅಹ ಉಣ್ಣುವರು
ಹಗಲೂ ಇರುಳೂ ಉಣ್ಣುವರು
ಮೂಕವೇದನೆ ಉಣ್ಣುವರು
ಎಂಥಾ ಸುಖಿಗಳು

## ಮೂರು

(ಉದ್ಯಾನವನದಲ್ಲಿ ರಾಣಿ ಕೋಮಲಾಂಗಿಣಿ ಮಲಗಿದ್ದಾಳೆ. ಸಖಿಯರು ಗಾಳಿ ಬೀಸುತ್ತಿದ್ದಾರೆ.)

ಮೇಳ : ಮಹಾರಾಜರಾ ಎಂಟನೆ ರಾಣಿ
ಎಂಟು ತಿಂಗಳು ತುಂಬು ಗರ್ಭಿಣಿ ।
ಸಾರ್ಥಕ ನಾಮ ಕೋಮಲಾಂಗಿಣಿ
ಚಿನ್ನದ ಪಂಜರದಾ ಗಿಣಿ
ಬೇಸರದಲ್ಲಿ ಮಲಗಿಹಳು
ಯೋಚನೆಯಲ್ಲಿ ಮುಳುಗಿಹಳು ।
ಕೊರೆಯುತ್ತಿರುವುದು ಏನೋ ಕೊರತೆ
ರಾಣಿಗೆ ಗೊತ್ತು ರಾಣಿಯ ಚಿಂತೆ

ರಾಣಿ : ಸ್ವಲ್ಪ ಜೋರಾಗಿ ಗಾಳಿ ಹಾಕು. ನಿನ್ನ ಕೈ ಸೆಟೆದು ಹೋಗಿದೆಯೇ?

ಸಖಿ : ಮಹಾರಾಣಿಯವರು ಯಾಕೋ ತುಂಬಾ ಚಿಂತೆಯಲ್ಲಿದ್ದೀರಿ. ಗರ್ಭಿಣಿಯರು ಸಿಟ್ಟಾಗಬಾರದು. ನಗುನಗುತ್ತಾ ಸಂತೋಷದಿಂದ ಇರಬೇಕು. ಇಂಥ ಸುಂದರ ವಾತಾವರಣದಲ್ಲೂ ನಿಮ್ಮ ಮನಸ್ಸು ಅರಳುತ್ತಿಲ್ಲವಲ್ಲ. ನಿಮ್ಮ ಬಯಕೆ ಏನೆಂಬುದನ್ನು ಹೇಳಿದರೆ, ಅದನ್ನು ಹೇಗಾದರೂ ಮಾಡಿ ಈಡೇರಿಸುವ ಹೊಣೆ ಈ ನಿಮ್ಮ ಪ್ರಾಣಸಖಿಯದು.

ರಾಣಿ : ಸಖೀ ನಾನು ಮಹಾರಾಜರಿಗೆ ಎಂಟನೆಯವಳು. ನನ್ನ ಸವತಿಯರೆಲ್ಲ ಹೇಗಿದ್ದಾರೆ ಹೇಳು?

ಸಖಿ : ಒಬ್ಬರಿಗಿಂತ ಒಬ್ಬರು ಚೆಲುವೆಯರು. ಆದರೆ ನಿಮ್ಮನ್ನು ಮೀರಿಸುವ ರೂಪ ಅವರ್‍ಯಾರಿಗೂ ಇಲ್ಲ ಎಂದು ಮಹಾರಾಜರೇ ಹೇಳುತ್ತಾರಲ್ಲ.

ರಾಣಿ : ಅವರ ರೂಪದ ಬಗ್ಗೆ ನನಗೆ ಕೋಪವಿಲ್ಲ. ಆದರೆ ಸಖಿ, ಅವರೆಲ್ಲರೂ ಗಂಡು ಮಕ್ಕಳನ್ನೇ ಹೆತ್ತಿದ್ದಾರೆ. ನನಗೆ ಮಾತ್ರ ಹೆಣ್ಣು ಹುಟ್ಟಿದರೆ ನಾನು ಏನು ಮಾಡಲಿ, ಈ ಪುರುಷಾಪುರದಲ್ಲಿ ಮಹಾರಾಜರಿಂದ ಹಿಡಿದು ಜನಸಾಮಾನ್ಯರವರೆಗೆ ಹೆಣ್ಣೆಂದರೆ ಎಲ್ಲರಿಗೂ ತಾತ್ಸಾರ.

ಸಖಿ- ೨ : ಹಾಗಿದ್ದರೆ ರಾಜವೈದ್ಯರನ್ನು ಕರೆಸಿ ಈ ಗರ್ಭವನ್ನು......

ಸಖಿ- ೧ : ನಿಲ್ಲಿಸು, ಹೆಣ್ಣಾಗಿ ಈ ಸಲಹೆ ನೀಡಲು ನಿನಗೆ ನಾಚಿಕೆ ಆಗುವುದಿಲ್ಲವೆ? ನೀವೇನೂ ಚಿಂತಿಸಬೇಡಿ ಮಹಾರಾಣಿ, ಈಗಲೇ ನನ್ನ ನಂಬಿಕೆಯ

ಮಂತ್ರವಾದಿಗಳನ್ನು ಕರೆಸುತ್ತೇನೆ. ಗಂಡುಮಗುವೇ ಆಗಬೇಕಾದರೆ ಏನು ಮಾಡಬೇಕೆಂದು ಅವರು ಸೂಕ್ತ ಸಲಹೆ ನೀಡುತ್ತಾರೆ.

ರಾಣಿ : ಆಗಲಿ, ಅದನ್ನೂ ಪ್ರಯತ್ನಿಸೋಣ. ಒಟ್ಟಿನಲ್ಲಿ ಗಂಡು ಅಂತ ಆದರೆ ಸಾಕು. ಓಹ್! ಹಾಳು ಬೆನ್ನು ನೋವು (ಸಖಿ-೧ ಹೋಗುವಳು.)

ಸಖಿ- ೨ : ಎಲ್ಲಿ ಮಹಾರಾಣಿ ಎಲ್ಲಿ?

ರಾಣಿ : ಬೆನ್ನು ನೋವು ಇನ್ನೆಲ್ಲಿ? ಬೆನ್ನಲ್ಲಿ. ಅದೂ ತಿಳಿಯುವುದಿಲ್ಲವೇ? (ರಾಣಿ ನರಳುವಳು....ಸಖಿ ಬೆನ್ನು ತಿಕ್ಕುವಳು. ಸಖಿ-೧ ಮಂತ್ರವಾದಿಯನ್ನು ಕರೆತರುವಳು.)

ಮಂತ್ರವಾದಿ : ಕಿರಿಯ ಮಹಾರಾಣಿಯವರಿಗೆ ವಂದನೆಗಳು. (ರಾಣಿ ಕುಳಿತುಕೊಳ್ಳುವಂತೆ ಸನ್ನೆ ಮಾಡುವಳು. ಮಂತ್ರವಾದಿ ಕುಳಿತು ಕವಡೆಗಳನ್ನು ಆಡಿಸಿ, ಮಂತ್ರ ಪಠಿಸುವನು.)

ಓಂ ಹ್ರಾಂ ಹ್ರಾಂ ಅಸ್ತ್ರಾಯ ಫಟ್
ಅಆ ಇಈ ಉಊ ಎಏ ಒಓ ಔಟ್
ಅಕಟ ವಿಕಟ ಶಕಟ ಅಸ್ತ್ರಾಯ ಫಟ್
ಓಂ ಲಟ ಲಟ ಲಟ ಲಂಪಟ
ಓಂ ಕಟ ಕಟ ಕಟ ಕಪಟ ಕಪಟ್

ಓಂ ಓಂ ಓಂ......ಅಷ್ಟಮದಲ್ಲಿ ವಕ್ರಶನಿ-ಪಂಚಮದಲ್ಲಿ ನೀಚಗ್ರಹ, ಕುಜ-ಗುರು ಸ್ವಸ್ಥಾನದಲ್ಲಿ - ಆದರೆ ಅವನ ಮೇಲೆ ರಾಹುವಿನ ಉಗ್ರದೃಷ್ಟಿ ಇರುವುದರಿಂದ.....

ಸಖಿ : ಏನಾಗುತ್ತದೆ ಸ್ವಾಮೀ?

ಮಂತ್ರವಾದಿ : ಕಾಣಿಕೆ ಕಾಣಿಕೆ (ಸಖಿ ಕಾಣಿಕೆ ಇಡುವಳು)

ಮಂ : ಅಂದರೆ ರಾಣಿಯವರ ಭೀತಿ ಸಕಾರಣವಾದುದು. ಗಂಡುಮಗುವಾಗಲು ಗ್ರಹಬಲ ಏನೇನೂ ಸಾಲದು.

ಸಖಿ : ಹೇಗಾದರೂ ಮಾಡಿ ಇದನ್ನು ತಪ್ಪಿಸಬೇಕು. ಮಹಾತ್ಮರಾದ ತಾವು ಗಂಡುಮಗುವೇ ಆಗುವಂತೆ ಏನಾದರೂ ಪರಿಹಾರದ ದಾರಿ ಕಾಣಿಸಬೇಕು.

ಮಂ : ಕಾಣಿಕೆ, ಕಾಣಿಕೆ, ಕಾಣಿಕೆ ಇಟ್ಟರೆ ಮಾತ್ರ ಕಾಣಿಸುತ್ತದೆ. (ಸಖಿ ಇನ್ನಷ್ಟು ಕಾಣಿಕೆ ಇಡುವಳು. ಮಂತ್ರವಾದಿ ಮತ್ತೆ ಮಂತ್ರ ಪಠಿಸುವನು. ನಂತರ ಎತ್ತರದ ಧ್ವನಿಯಲ್ಲಿ) ಈ ಸಂಜೆ ಸೂರ್ಯಾಸ್ತದ ಬಳಿಕ ಮಹಾರಾಣಿಯವರು ಸ್ನಾನ ಮಾಡಿ ಕೆಂಪು ಶಾಲು ಧರಿಸಿ, ಕೆಂಪು ಹೂ ಮುಡಿದು ಈ ಉದ್ಯಾನದ ದಕ್ಷಿಣ ದಿಕ್ಕಿಗೆ ಹೋಗಲಿ. ಅಲ್ಲಿ ಒಂದೇ ಒಂದು ಮಾವಿನ ಮರವಿದೆ.

ಅದರಲ್ಲಿ ನೂರೆಂಟು ಮಾವಿನ ಹಣ್ಣುಗಳಿವೆ. ಅವುಗಳಲ್ಲಿ ಒಂದೇ ಒಂದು ಕೆಂಪು ಹಣ್ಣು. ಉಳಿದ ಹಣ್ಣುಗಳು ಹಳದಿ. ಕೆಂಪನ್ನು ಹುಡುಕಿ ತಿನ್ನಬೇಕು. ಕೆಂಪು ತಿಂದರೆ ಗಂಡು, ಹಳದಿ ಹಣ್ಣು ತಿಂದರೆ ಹೆಣ್ಣು.

(ಕತ್ತಲೆಯಾಗಿ ಬೆಳಕು ಮೂಡಿದಾಗ ರಾಣಿ ಕೆಂಪು ಶಾಲು ಹೊದ್ದು ಕೆಂಪು ಹಣ್ಣು ಹುಡುಕುವ ಅಭಿನಯ ಮಾಡುತ್ತಾಳೆ.)

ಮೇಳ ೧ : ಹುಡುಕಿದಳು ಹುಡುಕಿದಳು
ದುಡುಕದೆ ಹುಡುಕಿದಳು ।
ಕಣ್ಣಿನಲ್ಲಿ ಎಣ್ಣೆ ಹಾಕಿ
ಕೆಂಪು ಹಣ್ಣಾ ಹುಡುಕಿದಳು

ಮೇಳ ೨ : ಕೆಂಪು ಹಣ್ಣನೆ ಹುಡುಕಿ ತಿಂದಳು
ಗಂಡು ಮಗುವಿನ ಕನಸು ಕಂಡಳು
ಮಂತ್ರಕೆ ಮಾವಿನ ಹಣ್ಣು ಬೀಳದು
ಮಹಾರಾಣಿಯು ಹೆಣ್ಣು ಹೆತ್ತಳು

(ಹಿನ್ನೆಲೆಯಲ್ಲಿ ಜನರ ಗುಸುಗುಸು – ಮಹಾರಾಣಿಗೆ ಹೆಣ್ಣಂತೆ, ಹೆಣ್ಣು ಮಗುವಂತೆ, ಛೇ, ಹೆಣ್ಣೆ? ಇತ್ಯಾದಿ).

ಮೇಳ : ಗಾದೆ ಮಾತು ಗೊತ್ತಿರಬಹುದು
ಹೆತ್ತವರಿಗೆ ಹೆಗ್ಗಣ ಮುದ್ದು
ಆದರೆ ಹೆಣ್ಣು ಮುದ್ದಲ್ಲಾ
ಎಂಬೀ ರೋಗಕೆ ಮದ್ದಿಲ್ಲಾ
ಬೇಡವೆನಿಸಿದಳು ತಂದೆ ತಾಯಿಗೂ
ಮಹಾರಾಣಿಯ ಹೆಣ್ಣುಮಗು

## ನಾಲ್ಕು

(ಬಯಲಿನಲ್ಲಿ ೭ ಜನ ರಾಜಕುಮಾರರು ಶಸ್ತ್ರಾಭ್ಯಾಸ ಮಾಡುತ್ತಿದ್ದಾರೆ. ಆಚಾರ್ಯರು ಸೂಚನೆಗಳನ್ನು ನೀಡುತ್ತಿದ್ದಾರೆ.)

ಮೇಳ : ರಾಜಕುಮಾರಿ ಒಳಗೇ ಉಳಿದಳು
ಕತ್ತಲೆಯಲ್ಲಿ ಕೊಳೆಯತೊಡಗಿದಳು
ರಾಜಕುಮಾರರು ಬೆಳೆಯತೊಡಗಿದರು
ಗುರುಕುಲ ಸೇರಿ ಕಲಿಯತೊಡಗಿದರು
ಗುರುಗಳು ಎಲ್ಲಾ ಹೇಳಿಕೊಟ್ಟರು

ಶಿಷ್ಯರು ಬೇಗನೆ ಕಲಿತು-ಬಿಟ್ಟರು
ಎಂಥ ಗುರು! ಎಂಥ ಗುರು!
ಗುರು ಗುರು ಅನ್ನದ ಸಾಧು ಗುರು
ತಕ್ಕ ಶಿಷ್ಯರಿಗೆ ತಕ್ಕ ಗುರು

ಆಚಾರ್ಯ : ಈಟಿ ಹಿಡಿಯುವುದು ಹಾಗಲ್ಲ ರಾಜಕುಮಾರ, ಒಳ್ಳೆ ಛತ್ರಿಯ ಹಾಗೆ ಹಿಡಿದುಕೊಂಡಿರುವೆಯಲ್ಲ, ನೋಡು, ಹೀಗೆ ಹಿಡಿಯಬೇಕು.

ರಾಜಕುಮಾರ-೧ : ಗುರುಗಳೆ, ಗುರುಗಳೆ, ಈ ಗದೆ ತುಂಬಾ ಭಾರವಾಗಿದೆ. ಕೊಂಚ ಹಗುರವಾದದ್ದನ್ನು ಕೊಡಿ. ಇದನ್ನು ತಿರುಗಿಸಿ, ತಿರುಗಿಸಿ ನನ್ನ ಕೈ ತುಂಡಾಗುವಂತಾಗಿದೆ.

ರಾಜಕುಮಾರ-೨ : ಗುರುಗಳೆ, ಈ ಬಿಲ್ಲನ್ನು ಕೊಂಚ ಬಗ್ಗಿಸಿಕೊಡಿ. ನನ್ನ ಕೈಗಳಲ್ಲಿ ಬೊಕ್ಕೆ ಎದ್ದಿವೆ.

(ಗುರುಗಳು ಗಮನಿಸುವುದಿಲ್ಲ)

ರಾಜಕುಮಾರಿ : (ಪೊದೆಯ ಮರೆಯಿಂದ ಹೊರಬಂದು) ಇಲ್ಲಿ ಕೊಡು, ನಾನು ಪ್ರಯತ್ನಿಸುತ್ತೇನೆ.

ರಾಜಕುಮಾರ-೨ : (ನಕ್ಕು) ಏನು? ನೀನು ಬಗ್ಗಿಸುತ್ತೀಯ? ನೀನು ಯಾರಂತ ನಮಗೆ ಗೊತ್ತಿಲ್ಲವೆ?

ರಾಜಕುಮಾರಿ : ನಾನು ರಾಜಕುಮಾರಿ ಸಹಜಾ, ನಿನ್ನ ತಂಗಿ.

ರಾಜಕುಮಾರ-೨ : ನೀನು ಹೆಣ್ಣು ಹುಡುಗಿ. ಇಂಥ ಕೆಲಸಗಳೆಲ್ಲ ನಿನ್ನಿಂದ ಆಗೋದಿಲ್ಲ. ನೀನು ಹೀಗೆ ಥೈ ಥೈ ಥಕಥೈ ಅಂತ ಕುಣೀಲಿಕ್ಕೆ ಹೋಗು.

ರಾಜಕುಮಾರ-೧ : ಅಥವಾ ಹೀಗೆ ಸರಿಗಮಾ.....ಅಂತ ಆಲಾಪನೆ ಎಳೀಬಹುದು. ಬಿಲ್ಲಿನ ಹಗ್ಗ ಎಳೆಯೋದು ಬೇಡ. ಅಲ್ಲವೆ ಗುರುಗಳೆ?

ಆಚಾರ್ಯ : ಹೌದಮ್ಮಾ ಹೌದು. ಹೆಣ್ಣು ಅಬಲೆ, ಕುಸುಮಕೋಮಲೆ. ಹೀಗೆ ಬಿಸಿಲಿಗೆ ಬಂದರೆ ಬಾಡಿ ಹೋಗುತ್ತಾಳೆ. ಮನೆಗೆ ಹೋಗಮ್ಮ.

ರಾಜಕುಮಾರಿ : ಸುಳ್ಳು, ಹಸೀ ಸುಳ್ಳು, ಇವರೊಂದಿಗೆ ನಾನೂ ಕಲಿತಿದ್ದರೆ ಇಷ್ಟು ಹೊತ್ತಿಗೆ ಇವರಿಗಿಂತ ಹೆಚ್ಚು ಕಲಿತುಕೊಳ್ಳುತ್ತಿದ್ದೆ. ಈಗಲೂ ಈ ಪಿಳ್ಳೆಗಳನ್ನು ಸೋಲಿಸುವಷ್ಟು ಶಸ್ತ್ರ ವಿದ್ಯೆ ನಾನಾಗಿಯೇ ಕಲಿತುಕೊಂಡಿದ್ದೇನೆ.

ರಾಜಕುಮಾರ-೩ : ಏನೇ, ನಮ್ಮನ್ನು ಪಿಳ್ಳೆ ಅಂತೀಯೇನೇ? ಬಜಾರಿ. ಎಷ್ಟು ಕೊಬ್ಬು ನಿನಗೆ

(ಹೊಡೆಯಲು ಹೋದಾಗ ರಾಜಕುಮಾರಿ ಅವನನ್ನು ತಳ್ಳುವಳು. ರಾಜಕುಮಾರ ಬಿದ್ದು ಅಳತೊಡಗುವನು.)

ಆಚಾರ್ಯ : ಏನಿದು ಹುಡುಗಾಟ? ಸುಮ್ಮನಿರಿ. ಮಹಾರಾಜರು ಬರುತ್ತಿರುವಂತಿದೆ. ಸಹಜಾ ಕುಮಾರಿ, ಬೇಗ ಇಲ್ಲಿಂದ ಮರೆಯಾಗು. ಮಹಾರಾಜರು ಇಲ್ಲಿ ನಿನ್ನನ್ನು ಕಂಡರೆ ಸಿಗಿದು ಹಾಕುತ್ತಾರೆ. (ರಾಜಕುಮಾರಿ ಮರೆಯಾಗುತ್ತಾಳೆ. ರಾಜ ಪ್ರವೇಶಿಸುತ್ತಾನೆ.)

ರಾಜ : ಆಚಾರ್ಯರೆ, ಹೇಗೆ ನಡೆದಿದೆ ನಮ್ಮ ಕುಮಾರಕಂಠೀರವರ ವಿದ್ಯಾಭ್ಯಾಸ?

ಆಚಾರ್ಯ : ಚೆನ್ನಾಗಿ.....ಚೆನ್ನಾಗಿಯೇ ನಡೆದಿದೆ ಪ್ರಭೂ....ಆಯುಧಗಳೆಂದರೆ ಇವರಿಗೆ ಆಟಿಕೆಗಳಂತಾಗಿವೆ.

ರಾಜ : ಒಳ್ಳೆಯದು. ಒಳ್ಳೆಯದು. ನಾನು ಏಕೆ ಎಂಟು ಮಂದಿ ರಾಣಿಯರನ್ನು ಮದುವೆಯಾದೆ ಎಂಬುದು ನಿಮಗೆ ಗೊತ್ತಿರಬಹುದಲ್ಲವೇ?

ಆಚಾರ್ಯ : ಗೊತ್ತಿಲ್ಲದೆ ಏನು ಮಹಾಪ್ರಭು, ಅಷ್ಟಪತ್ನಿ ವ್ರತಸ್ಥರಾಗಿ ಅಷ್ಟದಿಕ್ಕುಗಳಲ್ಲೂ ನಿಮ್ಮ ಕೀರ್ತಿ ಪತಾಕೆ ಹಾರಿಸಲು.

ರಾಜ : ಏಳು ದಿಕ್ಕುಗಳಲ್ಲಿರುವ ನಮ್ಮ ಶತ್ರುರಾಜರನ್ನು ಈ ಏಳು ಕುಮಾರರು ಜಯಿಸಬೇಕು. ಆ ಶನಿ ಹಿಡಿದ ಎಂಟನೆ ರಾಣಿ ಹೆಣ್ಣು ಹೆತ್ತದ್ದರಿಂದ ಎಂಟನೆ ದಿಕ್ಕಿಗೆ ಮಾತ್ರ ದಿಕ್ಕಿಲ್ಲದಂತಾಯಿತು.

ಆಚಾರ್ಯ : ಉಳಿದ ಒಂದು ದಿಕ್ಕನ್ನು ಗೆಲ್ಲಲು ನೀವೇ ಇರುತ್ತೀರಲ್ಲ.

ರಾಜ : ಹೌದು. ನನ್ನ ಜೊತೆ ನೀವೂ ಇರುತ್ತೀರಿ (ಆಚಾರ್ಯ ಬೆಚ್ಚಿ ಬೀಳುವನು.)

ರಾಜಕುಮಾರ-೩ : ಅಪ್ಪಾಜಿ, ಅಪ್ಪಾಜಿ, ಸಹಜಾ ಕುಮಾರಿ ತಾನೂ ಶಸ್ತ್ರಾಭ್ಯಾಸ ಕಲಿಯುತ್ತೇನೆ, ಕುದುರೆ ಸವಾರಿ ಮಾಡುತ್ತೇನೆ ಅಂತ ಇಲ್ಲಿಗೆ ಬಂದು, ನಮ್ಮನ್ನೆಲ್ಲ ಬಯ್ದು, ನನ್ನನ್ನು.....ನನ್ನನ್ನು ಬೀಳಿಸಿದ್ದಾಳೆ.

ರಾಜ : ಏನು? ಆ ಹೆಣ್ಣು ನಿನ್ನನ್ನು ಬೀಳಿಸಿತೆ? ನಾಚಿಕೆಗೇಡು. ಅವಳೇಕೆ ಇಲ್ಲಿ ಬಂದಳು, (ಚಪ್ಪಾಳೆ ತಟ್ಟಿ ಸೈನಿಕರಿಗೆ) ಆ ನಾಟ್ಯಾಚಾರ್ಯ ಶಾಸ್ತ್ರಿಗಳನ್ನು ಕರೆತನ್ನಿ. ಅವರು ಆ ಹೆಣ್ಣಿಗೆ ನಾಟ್ಯ ಕಲಿಸುತ್ತಿದ್ದಾರೆಯೇ ಅಥವಾ ಕರಾಟೆ ಕಲಿಸು ತ್ತಿದ್ದಾರೆಯೇ?

ರಾಜಕುಮಾರ-೧ : ಅವಳು ನಮಗೆಲ್ಲ ಸುಮ್ಮನೆ ತೊಂದರೆ ಕೊಡುತ್ತಾಳೆ. ಅವಳನ್ನು ಸೆರೆಮನೆಗೆ ಕಳಿಸುವುದು ಒಳ್ಳೆಯದು.

ರಾಜಕುಮಾರ-೨ : ಬಾವಿಗೆ ತಳ್ಳಿದರೂ ಆಗಬಹುದು.

ಶಾಸ್ತ್ರಿ : (ಲಾಸ್ಯದಿಂದ ನಡೆಯುತ್ತಾ) ಮಹಾಪ್ರಭುಗಳಿಗೆ ನಾಟ್ಯವಿಶಾರದನ ಶರಣು ಶರಣಾರ್ಥಿಗಳು.

ರಾಜ : ಶಾಸ್ತ್ರಿಗಳೆ, ಎಲ್ಲಿದ್ದಾಳೆ ಆ ಹೆಣ್ಣು, ನಿಮ್ಮ ಶಿಷ್ಯೆ?

ಶಾಸ್ತ್ರಿ : ಅವಳಿಗೆ ಈಗಷ್ಟೆ ಕದನಕುತೂಹಲ ರಾಗ ಹೇಳಿಕೊಟ್ಟೆ. ಅಭ್ಯಾಸ ಮಾಡುತ್ತಿದ್ದಾಳೆ.

(ರಾಜಕುಮಾರಿ ರಾಜನ ಎದುರು ಜಿಗಿದು ಬರುವಳು.)

ರಾಜಕುಮಾರಿ : ಅಪ್ಪಾಜಿ, ಅಪ್ಪಾಜಿ, ನಾನು ಸಂಗೀತ ನೃತ್ಯ ಎರಡೂ ಕಲಿತಾಗಿದೆ. ನನಗೆ ಕುದುರೆ ಸವಾರಿ ಮತ್ತು ಕತ್ತಿ ವರಸೆ....(ರಾಜ ಅವಳ ಕೆನ್ನೆಗೆ ಬಾರಿಸುವನು)

ರಾಜ : ಶಾಸ್ತ್ರಿಗಳೇ, ಇವಳು ಇಷ್ಟು ಕೆಟ್ಟು ಹೋಗುವ ತನಕ ನೀವೇನು ಮಾಡುತ್ತಿದ್ದಿರಿ?

ಶಾಸ್ತ್ರಿ : ಖಂಡಿತಾ ನಿದ್ದೆ ಮಾಡುತ್ತಿರಲಿಲ್ಲ ಪ್ರಭು, ಇವಳು ನನ್ನ ನಿದ್ದೆ ಕೆಡಿಸಿ ಬಿಟ್ಟಿದ್ದಾಳೆ. ಅವಳಿಗೀಗ ಮರ ಹತ್ತುವುದು, ಹಾರುವುದು, ಬಾಕ್ಸಿಂಗ್, ಕುಂಗ್‌ಫೂ, ಇಂಥವುಗಳಲ್ಲೇ ಆಸಕ್ತಿ. ಒತ್ತಾಯದಿಂದ ನೃತ್ಯ ಮಾಡು ಎಂದರೆ ಧಡ್ ಧಡ್ ಎಂದು ಹೆಜ್ಜೆ ಹಾಕಿ.....ಅಯ್ಯೋ ನನ್ನ ಎದೆಯೇ ಒಡೆದುಹೋಗುವಂತೆ ಹೃದಯಂಗಮ ನೃತ್ಯ ಮಾಡುತ್ತಾಳೆ.

ಆಚಾರ್ಯ : ಇವಳದ್ದು ಸ್ತ್ರೀ ಸಹಜ ಬುದ್ಧಿ ಅಲ್ಲ ಪ್ರಭೂ, ಯಾವುದೋ ದೆವ್ವ ಅಥವಾ ಪಿಶಾಚಿ ಅವಳನ್ನು ಹಿಡಿದುಕೊಂಡಿರಬೇಕು. ಯಾವಾಗಲೂ ಒಂಟಿಯಾಗಿ, ಮಂಕಾಗಿ ಕೂರುತ್ತಾಳೆ. ಒಮ್ಮೊಮ್ಮೆ ಮಿತಿಮೀರಿದ ಹುಡುಗಾಟ ಆಡುತ್ತಾಳೆ.

ರಾಜ : ಹಾಗಾದರೆ ಮಾಂತ್ರಿಕರಿಗೆ ಹೇಳಿ ಇವಳ ಭೂತ ಬಿಡಿಸಬೇಕು. ಆ ಹೆಣ್ಣು ಹಾಳಾಗಿ ಹೋಗಲಿ, ಈ ಕುಮಾರಕಂಠೀರವರ ಅಭ್ಯಾಸ ಮಾತ್ರ ಚೆನ್ನಾಗಿ ನಡೆಯಲಿ.

## ಐದು

(ಕಾಡಿನಲ್ಲಿ ಮರದ ಕೆಳಗೆ ರಾಜಕುಮಾರಿ ಕಣ್ಣಿಗೆ ಕಪ್ಪು । ಬಟ್ಟೆ ಕಟ್ಟಿಕೊಂಡು ಮಲಗಿದ್ದಾಳೆ. ಎರಡು ಜಿಂಕೆಗಳು ಕುಣಿಯುತ್ತಾ ಬಂದು ಅವಳ ಸುತ್ತ ತಿರುಗುತ್ತವೆ.)

ಮೇಳ ೧ : ಯಾವ ಪಿಶಾಚಿಯದು?
ಈ ಹುಡುಗಿಯ ಹಿಡಿದಿಹುದು
ಬಿಡದೆ ಕಾಡುತಿಹುದು

ಮೇಳ ೨ : ಎಂಥ ಪಿಶಾಚಿ? ಹೆಣ್ಣೆ? ಗಂಡೆ?
ಚಂದದ ಹುಡುಗಿಯ ಯಾಕೆ ಹಿಡ್ಕೊಂಡೆ?
ಬಿಟ್ಟು ಹೋಗು ತೊಲಗು

ನದಿಗೆ ಬಿದ್ದು ಮುಳುಗು
ನೀಚ ಪಿಶಾಚಿ, ಹಾಳು ಪಿಶಾಚಿ
ಸಾಯಿ ಪಿಶಾಚಿ ಛೀ, ಛೀ, ಛೀ

(ದೊಡ್ಡ ಜಿಂಕೆ ರಾಜಕುಮಾರಿಯ ಕಣ್ಣಿನ ಪಟ್ಟಿ ಎಳೆದು ಕಿತ್ತಾಗ ಆಕೆ ತಟ್ಟನೆ ಎದ್ದು ಕಿರುಚುವಳು)

ರಾಜಕುಮಾರಿ : ಅಮ್ಮಾ ಪಿಶಾಚಿ! ಅಯ್ಯೋ ಪಿಶಾಚಿ ! ದೆವ್ವ, ದೆವ್ವ

ದೊಡ್ಡ ಜಿಂಕೆ : ದೆವ್ವ ಅಲ್ಲವ್ವ, ಸರಿಯಾಗಿ ನೋಡವ್ವ

ಮೇಳ : ಪಿಶಾಚಿಯಲ್ಲ ಜಿಂಕೆ
ಬೇಡ ನಿನಗೆ ಶಂಕೆ
ಎಷ್ಟು ಚೆಂದ ನೋಡು
ಅಂಕು ಡೊಂಕು ಕೋಡು
ಪಟ್ಟೆ ಪಟ್ಟೆ ಚರ್ಮಾ
ಮುಟ್ಟಲು ಬಾರಮ್ಮಾ!

(ರಾಜಕುಮಾರಿ ಜಿಂಕೆಯ ಹಿಂದೆ ಓಡಿ ಮುಟ್ಟುವಳು)

ದೊಡ್ಡ ಜಿಂಕೆ : ಹೂಂ, ಮುಟ್ಟು, ಅದಿರ್ಲಿ, ಈ ಪುಟ್ಟ ಹುಡುಗೀನ ಈ ದಟ್ಟ ಕಾಡಿನಲ್ಲಿ ಕಣ್ಣಿಗೆ ಬಟ್ಟೆ ಕಟ್ಟಿ, ಬಿಟ್ಟು ಹೋದದ್ದು ಯಾರಪ್ಪ ಅದು?

ರಾಜಕುಮಾರಿ : ಯಾರ ಅಪ್ಪನೂ ಅಲ್ಲ, ನನ್ನ ಅಪ್ಪ.

ಸಣ್ಣ ಜಿಂಕೆ : ಎಂಥಾ ಅಪ್ಪನಪ್ಪಾ ಅವನು

ದೊಡ್ಡ ಜಿಂಕೆ : ಎಂಥಾ ಜನ, ಹಾಳು ಮನುಷ್ಯರೇ ಹೀಗೆ, ಸ್ವಲ್ಪಾನೂ ಪ್ರಾಣಿಪ್ರೀಯತೆ ಇಲ್ಲ, ಪ್ರಾಣಿತ್ವ ಇಲ್ಲ.

ಸಣ್ಣ ಜಿಂಕೆ : ಯಾಕೆ ಹೀಗೆ ಮಾಡ್ದ, ಏನು ಕತೆ?

ದೊಡ್ಡ ಜಿಂಕೆ : ನೀನು ಇಲ್ಲೇ ಇದ್ಬಿಡು. ನಂ ಜೊತೆ.

ರಾಜಕುಮಾರಿ : ನಾನು ಪುರುಷಾಪುರದ ರಾಜಕುಮಾರಿ. ಸಹಜಾ ಅಂತ ನನ್ನ ಹೆಸರು. ನನಗೆ ರಾಜಕುಮಾರರ ಹಾಗೆ ಶಸ್ತ್ರ ಕಲೀಬೇಕು, ಕುದುರೆ ಸವಾರಿ ಮಾಡಬೇಕು ಅಂತ ಆಸೆ. ಹಾಗೆ ಹೇಳಿದ್ದಕ್ಕೆ ನಮ್ಮ ಅಪ್ಪ ನನಗೆ ಪಿಶಾಚಿ ಹಿಡಿದಿದೆ ಅಂತ ತೀರ್ಮಾನಿಸಿ, ಮಂತ್ರವಾದೀನ ಕರೆಸಿ, ಚೆನ್ನಾಗಿ ಹೊಡೆದರು. ಇಲ್ಲಿ ನೋಡಿ, ಕಬ್ಬಿಣದ ಸಲಾಕೆ ಕಾಯಿಸಿ ಬರೆ ಎಳೆದರು.

ಜಿಂಕೆಗಳು : ಛೇ ಛೇ, ಥೂ ಥೂ ಥೂ ಪಾಪ.

ರಾಜಕುಮಾರಿ : ಆದರೂ ನಾನು ನನ್ನ ಹಟ ಬಿಡ್ಲಿಲ್ಲ. ಅದಕ್ಕೆ ನನ್ನ ಹೀಗೆ ಬಿಸಾಕಿದರು.

ದೊಡ್ಡ ಜಿಂಕೆ : ಸಾಕಿದವರೆ ಬಿಸಾಕಿದರೆ?

ಸಣ್ಣ ಜಿಂಕೆ : ಥೂ, ಥೂ, ಬೇಸರದ ಸಂಗತಿ.

ದೊಡ್ಡ ಜಿಂಕೆ : ರಾಜಕುಮಾರಿಗೆ ಹೀಗಾದರೆ

ಸಣ್ಣ ಜಿಂಕೆ : ಇನ್ನು ಜನಸಾಮಾನ್ಯರ ಗತಿ?

ದೊಡ್ಡ ಜಿಂಕೆ : ಹೋಗ್ಲಿ ಬಿಡು, ರಾಜಕುಮಾರಿ

ಸಣ್ಣ ಜಿಂಕೆ : ನಾವಿದ್ದೇವೆ, ಡೋಂಟ್ ವರಿ!

ದೊಡ್ಡ ಜಿಂಕೆ : ನಮಗೆ ಬೇಕಾದಷ್ಟು ಜನ ಕುದುರೆ ಮಿತ್ರರಿದ್ದಾರೆ. ತುಂಬಾ ಒಳ್ಳೆಯವರು.

ಸಣ್ಣ ಜಿಂಕೆ : ಅವರ ಜೊತೆ ಸ್ನೇಹ ಕುದುರಿದರೆ ಎಷ್ಟು ಬೇಕಾದ್ರೂ ಕುದುರೆ ಸವಾರಿ ಮಾಡಬಹುದು.

ರಾಜಕುಮಾರಿ : ನಿಜವಾಗಿಯೂ! ಹಾಗಾದ್ರೆ ಈಗಲೇ ಹೋಗೋಣ.

(ಜಿಂಕೆಗಳೊಂದಿಗೆ ಕುಣಿಯುತ್ತಾ ಹೋಗುವಳು.)

ಮೇಳ : ರಾಜಕುಮಾರಿ ಹೊರಟಳು ನೋಡಿ
ಜಿಂಕೆಯ ಜತೆಗೂಡಿ
ಜಿಗಿಯತೊಡಗಿದಳು ಚಿಗರೆಯ ಹಾಗೆ
ನಲಿಯತೊಡಗಿದಳು ನವಿಲಿನ ಹಾಗೆ
ಕುದುರೆ ಸವಾರಿಯ ಗುಂಗಿನಲಿ
ಕನಸಿನ ಲೋಕದ ರಂಗಿನಲಿ

ದೊಡ್ಡ ಜಿಂಕೆ : ಅದ್ಯಾಕೆ ಹಾಗೆ ನಿಂತ್ಬಿಟ್ಟೆ, ಬೇಗ ಬಾ,

ರಾಜಕುಮಾರಿ : ಯಾರೋ ಮೇಲಿಂದ ನೀರು ಸಿಂಪಡಿಸ್ತಾ ಇರೋ ಹಾಗಿದೆ.

ದೊಡ್ಡ ಜಿಂಕೆ : ಅಯ್ಯೋ ಪೆದ್ದಿ, ಅದು ಮಳೆ !

ಸಣ್ಣ ಜಿಂಕೆ : ಮಳೆ ಗೊತ್ತಿಲ್ವೆ? ನೀನು ಎಂಥವಳೆ?

ರಾಜಕುಮಾರಿ : ನಮ್ಮ ರಾಜ್ಯದಲ್ಲಿ ಮಳೆ ಇಲ್ದೆ ಬಹಳ ಸಮಯವಾಯ್ತು. ಮಳೆ ಹೇಗಿರುತ್ತೆ ಅನ್ನೋದೆ ಮರೆತು ಹೋಗಿದೆ.

ದೊಡ್ಡ ಜಿಂಕೆ : ಅಲ್ನೋಡು, ಕುದುರೆ ಬರ್ತಾ ಇದೆ. ಏಯ್, ಕುದುರೆ ಮಾವಾ, ಬಾ ಇಲ್ಲಿ. ಇವಳು ನಮ್ಮ ಹೊಸಾ ಫ್ರೆಂಡು. ರಾಜಕುಮಾರಿ ಸಹಜಾದೇವಿ.

ರಾಜಕುಮಾರಿ : ಬರೇ ಸಹಜಾ ಅನ್ನಿ, ಸಾಕು.

ಕುದುರೆ : ಗ್ಲಾಡ್ ಟು ಮೀಟ್ ಯೂ (ಮುಂಗಾಲಿನಲ್ಲಿ ಶೇಕ್ ಹ್ಯಾಂಡ್ ಮಾಡುವುದು.)

ದೊಡ್ಡ ಜಿಂಕೆ : ಇದು ಶೇಕ್ ಹ್ಯಾಂಡೊ, ಶೇಕ್ ಲೆಗ್ಗೊ?

ಕುದುರೆ : ಬೋತ್, ಬೋತ್.

ರಾಜಕುಮಾರಿ : ಕುದುರೆ ಮಾವಾ, ಕುದುರೆ ಮಾವಾ, ನಾನು ನಿನ್ನ ಬೆನ್‌ಮೇಲೆ ಕೂತ್ಕೊ ಬಹುದಾ?

ಕುದುರೆ : ಓಹೋ, ಧಾರಾಳವಾಗಿ, ನಿನ್ನಂಥ ಮುದ್ದಾದ ಹುಡುಗೀನ ಕೂರಿಸ್ಕೊಳ್ಳೋದು ಅಂದ್ರೆ ಅದು ನನ್ನ ಬೆನ್ನಿನ ಪುಣ್ಯ-

(ಹುಡುಗಿ ಕುದುರೆ ಏರುವಳು.)

ಮೇಳ : ಕೀಲು ಕುದುರೆ ಕೀಲು ಕುದುರೆ
ಹೋಗೋಣ ಹೋಗೋಣ
ಬಿದ್ದು ಗಿದ್ದು ಕೀಲು ಮುರಿದರೆ
ಜೋಪಾನಾ ಜೋಪಾನಾ
ಗುಡ್ಡ ಬೆಟ್ಟ ಹಳ್ಳ ಕೊಳ್ಳ
ದಾಟೋಣಾ ದಾಟೋಣಾ
ಬಣ್ಣದ ಲೋಕದ ವೀಣೆಯ ತಂತಿ
ಮೀಟೋಣಾ ಮೀಟೋಣಾ
ರಾಜಕುಮಾರಿ ಕುದುರೆ ಸವಾರಿ
ಎಷ್ಟು ಚಂದ ನೋಡಿ
ಹುಡುಗಿ ಅಂದವೊ, ಕುದುರೆ ಅಂದವೊ
ಆಹಾ ಎಂಥ ಜೋಡಿ !

ದೊಡ್ಡ ಜಿಂಕೆ : ರಾಜಕುಮಾರಿ ರಾಜಕುಮಾರಿ, ಸಾಕು. ವಾಪಸ್ ಬಂದುಬಿಡು.

(ಬೇರೆ ಬೇರೆ ಪ್ರಾಣಿಗಳು ರಾಜಕುಮಾರಿಗೆ ಹಣ್ಣು ಹಂಪಲು ತರುವವು)

ದೊಡ್ಡ ಜಿಂಕೆ : ನೀರು ಬೇಕೇನೆ? ತಗೋ.

ರಾಜಕುಮಾರಿ : (ಮುಖ ತೊಳೆದು) ಎಷ್ಟೊಂದು ತಣ್ಣಗಿದೆ! ಇಲ್ಲೂ ಫ್ರಿಜ್ ಇದ್ಯಾ?

ಸಣ್ಣ ಜಿಂಕೆ : ಇದು ನಳದ ನೀರಲ್ಲ, ಕೊಳದ ನೀರು.

ದೊಡ್ಡ ಜಿಂಕೆ : ಇವರೆಲ್ಲ ನಮ್ಮ ಗೆಳೆಯರು. ನಿನ್ನನ್ನ ನೋಡ್ಲಿಕ್ಕೆ ಬಂದಿದ್ದಾರೆ.

ಸಣ್ಣ ಜಿಂಕೆ : ಸುಮ್ನೆ ಬಂದಿಲ್ಲ. ಉಡುಗೊರೆ ತಂದಿದ್ದಾರೆ.

(ಪ್ರಾಣಿಗಳು ರಾಜಕುಮಾರಿಗೆ ಉಡುಗೊರೆ ನೀಡುವವು.)

## ಆರು

ಮೇಳ : ಕಾಡಿನಲ್ಲಿ ಹೀಗಿದ್ದರೆ
ನಾಡಿನ ಕತೆಯೇ ಬೇರೆ
ಈ ನಾಡಿನ ಕತೆಯೇ ಬೇರೆ
ಕಾಡೂ ಇಲ್ಲ, ಮೇಡೂ ಇಲ್ಲ
ಮಳೆಯೂ ಇಲ್ಲ, ಬೆಳೆಯೂ ಇಲ್ಲ
ರಾಜನಿಗಂತೂ ವೇಳೆಯೇ ಇಲ್ಲ

(ಆಸ್ಥಾನದಲ್ಲಿ ರಾಜ ಮಲಗಿ ಗೊರಕೆ ಹೊಡೆಯುತ್ತಿದ್ದಾನೆ)

ಮಳೆಯೂ ಇಲ್ಲ, ಬೆಳೆಯೂ ಇಲ್ಲ
ಮೋಡದ ಬದಲು ಕವಿದಿದೆ ಎಲ್ಲೆಡೆ
ಯುದ್ಧದ ಕಾರ್ಮೋಡ
ಕವಿದಿದೆ ಯುದ್ಧದ ಕಾರ್ಮೋಡ

(ಇಬ್ಬರು ಸೈನಿಕರು ಪ್ರವೇಶಿಸುವರು)

ಸೈನಿಕ ೧ : ಮಹಾರಾಜರಿಗೆ ಜಯವಾಗಲಿ

ಸೈನಿಕ ೨ : ಪುರುಷಸಿಂಹ ಮಹಾರಾಜರಿಗೆ ಜಯವಾಗಲಿ

(ರಾಜ ಏಳದಿದ್ದಾಗ ಹತ್ತಿರ ಬಂದು ಈಟಿ ನೆಲಕ್ಕೆ ಬಡಿದು ಗಟ್ಟಿಯಾಗಿ)

ಸೈನಿಕರು : ಪುರುಷಸಿಂಹನಿಗೆ ಜಯವಾಗಲಿ

ರಾಜ : (ಗಡಬಡಿಸಿ ಎದ್ದು) ಯಾರಲ್ಲಿ? ಏನಿದು ಗದ್ದಲ? (ಯೋಚಿಸಿ) ಓಹೋ, ಗೊತ್ತಾಯಿತು. ನನ್ನ ಕುಮಾರಕಂಠೀರವರು ವಿಜಯಯಾತ್ರೆ ಮುಗಿಸಿ ಹಿಂತಿರುಗಿ ಬರುತ್ತಿದ್ದಾರೆ ಅಂತ ಕಾಣುತ್ತದೆ. ಏಳು ದಿಕ್ಕಿನಿಂದ ಏಳು ಸೈನ್ಯ ಬರುವಾಗ ಗದ್ದಲ ಏಳುವುದು ಸಹಜ. ನಾವು ಏಳಬೇಕಾದ್ದು ಅನಿವಾರ್ಯ!

ಸೈನಿಕ ೧ : (ಸ್ವಗತ) ಹಾ ವಿಧಿಯೆ ! ಮಹಾಪ್ರಭುಗಳಿಗೆ ಈ ಅಪ್ರಿಯ ವಾರ್ತೆಯನ್ನು ಯಾವ ಬಾಯಿಂದ ಹೇಳಲಿ?

ರಾಜ : ಏನದು ಅಪ್ರಿಯ ವಾರ್ತೆ?

ಸೈನಿಕ ೨ : ಏಳು ದಿಕ್ಕುಗಳಿಂದ ಸೈನ್ಯ ಬರುತ್ತಿರುವುದು ನಿಜ ಮಹಾಸ್ವಾಮಿ, ಆದರೆ ಅದು ನಮ್ಮ ಸೈನ್ಯವಲ್ಲ, ಶತ್ರು ಸೈನ್ಯ.

ರಾಜ : (ಬೆಚ್ಚಿಬಿದ್ದು) ಹಾಂ ಎಂಥಾ ಅನಾಹುತ! ಯಾಕೆ ಹೀಗಾಯಿತು, ನಮ್ಮ ಮಹಾಮಂತ್ರಿಗಳು ಎಲ್ಲಿದ್ದಾರೆ?

ಸೈನಿಕ ೧ : ಅವರು ಸುದ್ದಿ ಸಿಕ್ಕಿದ ಕೂಡಲೇ ಸಿಕ್ಕಷ್ಟು ದೋಚಿಕೊಂಡು ರಾತ್ರೋರಾತ್ರಿ ರಾಜ್ಯಬಿಟ್ಟು ಪರಾರಿಯಾಗಿದ್ದಾರೆ.

ಸೈನಿಕ ೨ : ನಿಮ್ಮ ಮೊದಲ ಮೂವರು ರಾಜಕುಮಾರರು ಯುದ್ಧದಲ್ಲಿ ಸೋತು ಬಂಧಿಸಲ್ಪಟ್ಟಿದ್ದಾರೆ. ಇನ್ನಿಬ್ಬರು ಕಪ್ಪ ಕಾಣಿಕೆ ಒಪ್ಪಿಸಿ ಅಡಗಿಕೊಂಡಿದ್ದಾರೆ.

ರಾಜ : ಕೊನೆಯ ಇಬ್ಬರು?

ಸೈನಿಕ ೧ : ಅವರು ಯುದ್ಧದಲ್ಲಿ ಸೋತದ್ದು ಮಾತ್ರವಲ್ಲದೆ, ಆ ರಾಜ್ಯದ ನರ್ತಕಿಯರ ಅಂದಕ್ಕೆ ಮನಸೋತು ಅಲ್ಲೇ ತಂಗಿಬಿಟ್ಟಿದ್ದಾರೆ.

ರಾಜ : ಹಾಗಾದರೆ ಉಳಿದ ನಾನೊಬ್ಬ ಏನು ಮಾಡಲಿ?

ಸೈನಿಕ ೨ : ಶತ್ರುಸೈನ್ಯ ರಾಜ್ಯವನ್ನೆಲ್ಲ ಕೊಳ್ಳೆ ಹೊಡೆದು ಅರಮನೆಯತ್ತ ನುಗ್ಗುತ್ತಿದೆ.

ರಾಜ : (ಯೋಚಿಸಿ) ಈ ಪುರುಷಸಿಂಹ ಏಕಾಂಗಿ, ಆದರೂ ಹೆದರುವವನಲ್ಲ. ದೇಹದಲ್ಲಿ ನೆತ್ತರಿನ ಕೊನೆ ಹನಿ ಇರುವ ತನಕ ಹೋರಾಡಬೇಕು. ಕತ್ತಿಗಿಂತ ಲೇಖನಿ ಹರಿತ ಅನ್ನುತ್ತಾರೆ. ಆದ್ದರಿಂದ ಈ ಕತ್ತಿ ಬೇಡ, ಲೇಖನಿ ತಾ. ಈ ಕೂಡಲೇ ಅರ್ಧ ರಾಜ್ಯವನ್ನು ಶತ್ರುಗಳಿಗೆ ಬರೆದುಕೊಟ್ಟು ಶಾಂತಿ ಒಪ್ಪಂದ ಮಾಡಿಕೊಳ್ಳುತ್ತೇನೆ.

(ಹೊರಗೆ ಗದ್ದಲ ಕೇಳಿಸುತ್ತದೆ.)

ಸೈನಿಕ ೨ : (ಹೊರಗೆ ಇಣುಕಿ) ನೀವು ಅಲ್ಲಿಗೆ ಹೋಗುವ ಶ್ರಮ ತೆಗೆದುಕೊಳ್ಳುವುದು ಬೇಡ. ಅವರೇ ನಿಮಗೆ ಸೂಕ್ತ ಕಾಣಿಕೆಗಳನ್ನು ತರುತ್ತಿದ್ದಾರೆ.

(ನಾಲ್ಕಾರು ಶತ್ರು ಸೈನಿಕರು ಪ್ರವೇಶಿಸಿ ಪುರುಷಾಪುರಕ್ಕೆ ಧಿಕ್ಕಾರ, ಪುರುಷಸಿಂಹನಿಗೆ ಧಿಕ್ಕಾರ, ಎನ್ನುತ್ತಾ ರಾಜನನ್ನು ಬಂಧಿಸಿ, ಅವನ ಎದುರು ಸೆರೆಮನೆಯ ಕಟ್‌ಔಟ್ ಗಳನ್ನು ಇಡುತ್ತಾರೆ. ರಾಜ ಕಂಬಿ ಎಣಿಸುತ್ತಿರುವಾಗ)

ಮೇಳ : ಒಂದು ಎರಡು ಮೂರು ನಾಲ್ಕು
ಐದು ಆರು ಏಳು
ಕಂಬಿ ಎಣಿಸೊ ರಾಜರಿಗೆ

ಅಭಿನಂದನೆ ಹೇಳು
ಎಂಟು ಒಂಬತ್ತು ಹತ್ತು
ರಾಜನಿಗೆ ಆಪತ್ತು
ಒಂದರಿಂದ ಹತ್ತು
ಯುದ್ಧ ಮುಗಿದೇ ಹೋಯ್ತು.

## ಏಳು

(ಬೇಟೆಗಾರರು ಬೇಟೆಯಾಡುತ್ತಿರುವರು)

ಮೇಳ : ಬೇಟೆಗಾರರು ಇವರು ಬೇಟೆಗಾರರು
ಬಿಲ್ಲು ಬಾಣ ಬಲೆಯ ಹಿಡಿವ ಬೇಟೆಗಾರರು
ಹುಲಿಗಳನ್ನು ಹಿಡಿದು ತೊಗಲು
ಸುಲಿದು ಬಿಡುವರು
ಕರಿಗಳನ್ನು ಕೊಂದು ದಂತ
ಮುರಿದೆ ಬಿಡುವರು
ಬಲೆಗಳನ್ನು ಬೀಸಿ ಮೊಲವ
ಹಿಡಿದು ಬಿಡುವರು
ಒಂದೆ ಬಾಣದಿಂದ ಹಂದಿ
ಕೊಂದು ಕೆಡೆವರು

(ರಾಜಕುಮಾರಿ ಕುದುರೆಯೊಂದಿಗೆ ಬರುತ್ತಾಳೆ.)

ರಾಜಕುಮಾರಿ : ನಿಲ್ಲಿಸಿ, ಯಾರು ನೀವು? ಯಾಕೆ ಹೀಗೆ ಈ ಮುಗ್ಧಪ್ರಾಣಿಗಳನ್ನು ಕೊಲ್ಲುತ್ತಿದ್ದೀರಿ? ಇನ್ನು ಮುಂದೆ ಇವುಗಳ ತಂಟೆಗೆ ಬಂದರೆ ಜಾಗ್ರತೆ.

ಬೇಟೆಗಾರರು : ಅರೆ, ಹುಡುಗಿ! ಈ ಕಾಡಿನೊಳಗೆ ಬರಬೇಕಾದರೆ ಅದೆಷ್ಟು ಧೈರ್ಯ ಇವಳಿಗೆ?

ಬೇಟೆಗಾರ ೧, ೨ : ಇವಳನ್ನು ಎಲ್ಲೋ ನೋಡಿದ ಹಾಗಿದೆಯಲ್ಲ, ನಮ್ಮ ಮಹಾರಾಜರು ಕಾಡಿಗೆ ಅಟ್ಟಿದ ರಾಜಕುಮಾರಿ ಇವಳೇ ಇರಬಹುದೆ?

ರಾಜಕುಮಾರಿ : ಹೌದು, ನಾನು ಪುರುಷಾಪುರದ ರಾಜಕುಮಾರಿ. ನೀವೂ ಅಲ್ಲಿಯವರೆ?

ಬೇಟೆಗಾರ ೧ : ನಿಜ, ರಾಜಕುಮಾರಿಗೆ ವಂದನೆಗಳು. ನಿಮ್ಮನ್ನು ಕಾಡಿಗಟ್ಟಿದಾಗ ನಮಗೆಲ್ಲ ತುಂಬಾ ದುಃಖವಾಗಿತ್ತು. ಆದರೆ ನಾವು ಏನು ಮಾಡಲೂ ಸಾಧ್ಯವಿರಲಿಲ್ಲ. ಆದರೆ ನೀವಿಲ್ಲಿ ನೆಮ್ಮದಿಯಿಂದ ಬದುಕುತ್ತಿರುವುದನ್ನು ಕಂಡು ಆಶ್ಚರ್ಯ ವಾಗುತ್ತಿದೆ.

ರಾಜಕುಮಾರಿ : ಈ ಕಾಡಿನ ಪ್ರಾಣಿಮಿತ್ರರ ಪ್ರೀತಿ ನನ್ನನ್ನು ಉಳಿಸಿದೆ. ಈ ಪ್ರಾಣಿಗಳನ್ನು ನೀವು ಉಳಿಸಬೇಕು.

ಬೇಟೆಗಾರ ೨ : ಆಗಲಿ, ರಾಜಕುಮಾರಿ, ಆದರೆ ರಾಜ್ಯದಲ್ಲಿ ಆಹಾರದ ಅಭಾವ ತೀವ್ರವಾಗಿರುವುದರಿಂದ ನಾವಿಲ್ಲಿಗೆ ಬರಬೇಕಾಯಿತು. ಪುರುಷಾಪುರದ ಪ್ರಸ್ತುತ ಪರಿಸ್ಥಿತಿ ತಮಗೆ ಗೊತ್ತಿರಬಹುದು.

ರಾಜಕುಮಾರಿ : ಪುರುಷಾಪುರವನ್ನು ನೋಡದೆ ಅದೆಷ್ಟೋ ವರ್ಷಗಳಾದವು. ನನ್ನ ಪ್ರೀತಿಯ ತಾಯಿ, ತಂದೆ ಹೇಗಿದ್ದಾರೆ?

ಬೇಟೆಗಾರ ೨ : ಏನು ಹೇಳಲಿ ರಾಜಕುಮಾರಿ? ಪುರುಷಾಪುರ ಶತ್ರುಗಳ ವಶವಾಗಿ ಮಹಾರಾಜ ಬಂಧನದಲ್ಲಿದ್ದಾರೆ.

ರಾಜಕುಮಾರಿ : ಛೇ, ಛೇ ಯಾಕೆ ಹೀಗಾಯಿತು? ಹೇಗಾದರೂ ಮಾಡಿ, ಶತ್ರುಗಳನ್ನು ಓಡಿಸಿ, ಮಹಾರಾಜರನ್ನು ಬಿಡಿಸಬೇಕು.

ಬೇಟೆಗಾರರು : ಅಬ್ಬಾ, ತಂದೆಯ ಬಗ್ಗೆ ನಿಮ್ಮ ಪ್ರೀತಿ ಇನ್ನೂ ಹಾಗೇ ಇದೆಯೇ? ಪುರುಷಾಪುರ ನಮಗೂ ಜನ್ಮಭೂಮಿ. ನಾವೂ ನಿಮ್ಮೊಂದಿಗೆ ಬರುತ್ತೇವೆ.

ಬೇಟೆಗಾರ ೨ : ನೀವು ನಾಯಕತ್ವ ವಹಿಸಿದರೆ ಅಲ್ಲಲ್ಲಿ ಅಡಗಿಕೊಂಡಿರುವ ನಮ್ಮ ಸೈನಿಕರು ನಿಮ್ಮನ್ನು ಕೂಡಿಕೊಳ್ಳುತ್ತಾರೆ.

ರಾಜಕುಮಾರಿ : ಜತೆಗೆ ನಮ್ಮ ಕಾಡಿನ ಸೇನೆಯೂ ಬರುತ್ತದೆ. ಅಲ್ಲವೆ ಕುದುರೆ ಮಾವಾ?

ಕುದುರೆ : ನಡೆ ಹೋಗೋಣ. (ಎಲ್ಲರೂ ಹೊರಡುವರು.)

ಮೇಳ : ಕಾಡಿನ ಸೇನೆ ಕೂಡಿಸಿಕೊಂಡು
ನಡೆದಳು ಪುರುಷಾಪುರಕೆ
ಕುದುರೆಯನೇರಿ ರಾಜಕುಮಾರಿ
ಹೊರಟಳು ಪುರುಷಾಪುರಕೆ
ಓಡಿತು ಕುದುರೆ ಶರವೇಗದಲಿ
ಮೂಡಿದಂತೆ ರೆಕ್ಕೆ!

(ಶತ್ರುಸೈನಿಕರಿಗೂ ರಾಜಕುಮಾರಿಯ ಸೇನೆಗೂ ಯುದ್ಧ ನಡೆಯುವುದು.)

ಮೇಳ : ಬಗೆ ಬಗೆ ಆಯುಧ ತರ ತರ ಆಯುಧ
ಅಬ್ಬಾ ಅಬ್ಬಾ ಭಾರೀ ಯುದ್ಧ
ಕಟ ಕಟ ಕಟ ಕಟ ಕುದುರೆಯ ಖುರಪುಟ
ಈಟಿಗೆ ಈಟಿ ಏಟಿಗೆ ಏಟು

ಕತ್ತಿಗೆ ಗುರಾಣಿ ಟಣ್ ಟಣ್ ಟಣ್
ಹಾರಿತು ಕುತ್ತಿಗೆ ಮುರಿಯಿತು ಕಾಲು
ಎದೆಗೇ ಗದೆಯು ಧಡ್ ಧಡ್ ಧಡ್

ಮೇಳ : ಕಾಡಿನ ಸೈನ್ಯದ ಎದುರು
ನಾಡ ಸೇನೆ ಕಂಗಾಲು

ಶತ್ರುಗಳೆಲ್ಲ ಎಲ್ಲಿ?
ಎಲ್ಲಾ ದಿಕ್ಕಾಪಾಲು

ರಾಜಕುಮಾರಿ : ಇಷ್ಟು ಬೇಗ ಶತ್ರುಸೇನೆ ಸೋತು ಹೋಯಿತೆ?

ಬೇಟೆಗಾರ : ಇಷ್ಟು ಸಣ್ಣ ತುಕಡಿಗೆ ನಮ್ಮ ಏಳು ರಾಜಕುಮಾರರು, ಮಂತ್ರಿಗಳು, ಮಹಾರಾಜ ಪುರುಷಸಿಂಹರು ಶರಣಾದದ್ದು ಆಶ್ಚರ್ಯ.

ಜಿಂಕೆ : ಈ ಶತ್ರು ಸೈನಿಕರಿಗೆ ಹುಡುಗಿ ಕೈಯಲ್ಲಿ ಪೆಟ್ಟು ತಿಂದು ಅಭ್ಯಾಸವಿಲ್ಲ ಅನ್ಸುತ್ತೆ. ಒಂದೇ ಏಟಿಗೆ ಮೂರ್ಛೆ ಹೋದರು.

ರಾಜಕುಮಾರಿ : ಧನ್ಯವಾದಗಳು ಮಿತ್ರರೆ. ಬನ್ನಿ, ಇನ್ನು ಸೀದಾ ಅರಮನೆಗೆ ಹೋಗಿ ಮಹಾರಾಜರನ್ನು ಬಿಡಿಸಬೇಕು. (ಹೊರಡುವರು.)

ಮೇಳ : ವಿಜಯೋತ್ಸಾಹದಿ ಹೊಡೆಯುತ ಕೇಕೆ
ಬಂದರು ಅರಮನೆಗೆ
ಬೀಗವ ಮುರಿದರು ಬಾಗಿಲು ತೆರೆದರು
ರಾಜ ಬಂದ ಹೊರಗೆ
ತಂದೆಯ ಸೆರೆಯ ಬಿಡಿಸಿದಳು
ಕನ್ಯೆಯೆ ಸೆರೆಯ ಬಿಡಿಸಿದಳು

(ರಾಜ ಮಗಳನ್ನು ಅಪ್ಪಿ ಮುದ್ದಾಡುವನು.)

ಮಹಾರಾಜ : ಮಗಳೇ, ನನಗೆ ಏನು ಹೇಳಬೇಕೆಂತಲೇ ತೋಚುತ್ತಿಲ್ಲ. ನಿನ್ನ ಅಣ್ಣಂದಿರಿಂದ ಸಾಧ್ಯವಾಗದ್ದನ್ನು ಹೆಣ್ಣಾದ ನೀನು ಸಾಧಿಸಿ ನನ್ನ ಕಣ್ಣು ತೆರೆಸಿದೆ. ಇದಕ್ಕೆ ಪ್ರತಿಯಾಗಿ ನಿನಗೇನು ಉಡುಗೊರೆ ನೀಡಲಿ?

ರಾಜಕುಮಾರಿ : ನಿಮ್ಮ ಪ್ರೀತಿಗಿಂತ ದೊಡ್ಡ ಉಡುಗೊರೆ ಯಾವುದಿದೆ ಅಪ್ಪಾಜಿ? ಇನ್ನಾದರೂ ಅದು ನನಗೆ ದೊರೆತರೆ ನನಗೆ ಅಷ್ಟೇ ಸಾಕು.

ರಾಜ : ಮಗಳೇ, ಇನ್ನು ಮುಂದೆ ಈ ರಾಜ್ಯವನ್ನು ಆಳುವ ನೈತಿಕ ಹಕ್ಕು ನನಗಿಲ್ಲ.

ಜೊತೆಗೆ ದೈಹಿಕ ಸಾಮರ್ಥ್ಯವೂ ಕುಸಿಯುತ್ತಿದೆ. ಆದ್ದರಿಂದ ಈ ಸಿಂಹಾಸನದ ಜವಾಬ್ದಾರಿಯನ್ನು ಇಂದೇ ನಿನಗೆ ಒಪ್ಪಿಸುತ್ತೇನೆ.

ರಾಜಕುಮಾರಿ : ಬೇಡ ಅಪ್ಪಾಜಿ, ನಾನು ಕಾಡಿನಲ್ಲೇ ಸುಖವಾಗಿದ್ದೇನೆ. ನಾನು ಹೋರಾಡಿದ್ದು ನಿಮ್ಮನ್ನು ಬಿಡಿಸಲಿಕ್ಕೆ ಹೊರತು ಈ ಸಿಂಹಾಸನಕ್ಕಾಗಿ ಅಲ್ಲ. ಅದೂ ಅಲ್ಲದೆ ಇದು ಎಷ್ಟಾದರೂ ಪುರುಷಾಪುರ. ಹೆಣ್ಣು ಮಕ್ಕಳಿಗೆ ಇಲ್ಲಿ......

ರಾಜ : ಹಾಗೆನ್ನಬೇಡ ಮಗಳೆ, ನನ್ನ ಆಸೆಯನ್ನು ನೀನು ಈಡೇರಿಸಲೇ ಬೇಕು. ನಿನಗಾದ ಅನ್ಯಾಯವನ್ನು ಸರಿಪಡಿಸಲು ಮತ್ತು ಮುಂದೆ ಇಂಥ ಅನ್ಯಾಯವಾಗದಂತೆ ನೋಡಿಕೊಳ್ಳಲು ಇದೊಂದೇ ಮಾರ್ಗ. ಇನ್ನು ಮೇಲೆ ಈ ರಾಜ್ಯದ ಹೆಸರು ಪುರುಷಾಪುರವಲ್ಲ, ಮಾನವಪುರ.

ಮೇಳ : ರಾಜಕುಮಾರಿಗೆ ಜಯವಾಗಲಿ
ಸಹಜಾದೇವಿಗೆ ಜಯವಾಗಲಿ
ಮಾನವಪುರಕ್ಕೆ ಜಯವಾಗಲಿ.

(ಮಹಾರಾಜ ರಾಜಕುಮಾರಿಯನ್ನು ಸಿಂಹಾಸನದಲ್ಲಿ ಕೂರಿಸುವನು. ದೀಪ ಮಂಕಾಗಿ ಮತ್ತೆ ಬೆಳಕಾದಾಗ ರಾಜಕುಮಾರಿಯ ಜಾಗದಲ್ಲಿ ಕತೆ ಹೇಳುವ ಅಜ್ಜಿ ಕಾಣಿಸುತ್ತಾಳೆ.)

ಅಜ್ಜಿ : ಅದ್ಯಾಕೆ ಹಾಗೆ ನನ್ನನ್ನೇ ನೋಡ್ತಾ ಇದೀರಿ ಮಕ್ಕಳೆ
ನಾನೂ ರಾಜಕುಮಾರಿಯ ಹಾಗೆ ಕಾಣ್ತಾ ಇದೀನಾ?

ಪುಟ್ಟ : ಕತೆ ಮುಗಿದದ್ದೇ ಗೊತ್ತಾಗ್ಲಿಲ್ಲ ಅಜ್ಜಿ. ನಾಳೆ ಯಾವ ಕತೆ ಹೇಳ್ತೀಯಾ?

ಪುಟ್ಟಿ : ಏಯ್! ಎಲ್ಲಾ ದಿನ ಅಜ್ಜಿಗೇ ಯಾಕೆ ತೊಂದರೆ ಕೊಡಬೇಕು ? ನಾಳೆ ಅಜ್ಜನ ಹತ್ರ ಕತೆ ಹೇಳಲಿಕ್ಕೆ ಹೇಳೋಣ.

ಮೇಳ : ನಾಳೆಯ ಕತೆಯ ಯಾರು ಬಲ್ಲರು?
ನಾಳೆಯೆ ನೋಡೋಣ.
ಇಂದಿನ ಕತೆಯು ಇಲ್ಲಿಗೆ ಮುಗಿಯಿತು
ಬನ್ನಿರಿ ಹೋಗೋಣ.

# ಗೊಂಬೆ ರಾವಣ

ಡಾ. ಗಜಾನನ ಶರ್ಮ

## ಪಾತ್ರಗಳು

ಚಂದ್ರಸೇನ
ಮೋಹನ
ವಸುಂಧರೆ
ರೂಪಸೇನ
ಗಣೇಶ
ಅಂಬಿಕ
ಸರಯೂ
ವಿಶ್ವ
ಚಿನ್ಮಯ
ಲೋಕರಾಜ
ಜಯಂತಿ
ಮುದುಕಿ
ದ್ವಾರ ಪಾಲಕ
ದಾಸಿಯರು
ಸೀತೆ
ಸುನಂದೆ
ಶೂರ್ಪನಖಿ

# ಗೊಂಬೆ ರಾವಣ

## ದೃಶ್ಯ-೧

(ಉಪವನ ಒಂದರ ದೃಶ್ಯ. ಹತ್ತಾರು ಮಕ್ಕಳು ಚರ್ಚೆಯಲ್ಲಿ ತೊಡಗಿರುತ್ತಾರೆ. ಕೊನೆಗೆ ಒಂದು ನಿರ್ಧಾರಕ್ಕೆ ಬಂದವರಂತೆ ಉತ್ಸವವೊಂದರ ತಯಾರಿ ನಡೆಸುತ್ತಾರೆ. ಅತ್ತ-ಇತ್ತ ಓಡಾಡಿ, ಪರಿಕರಗಳನ್ನು ಹೊಂದಿಸಿಕೊಳ್ಳುತ್ತಾರೆ. ಒಬ್ಬ ಚಿಕ್ಕ ಹುಡುಗನಿಗೆ (ಗಣೇಶ) ಗಣಪತಿಯ ಮೊಗವಾಡ ತೊಡಿಸುತ್ತಾರೆ. ಇಬ್ಬರು ಮಕ್ಕಳು ತಮ್ಮ ಕೈಗಳನ್ನು ಪಲ್ಲಕ್ಕಿಯಂತೆ ಹಿಡಿದು ಗಣೇಶನನ್ನು ಅದರ ಮೇಲೆ ಕುಳ್ಳಿರಿಸಿಕೊಳ್ಳುತ್ತಾರೆ. ಕೆಲವರು ಮೆರವಣಿಗೆಯಲ್ಲಿ ಹೂವನ್ನು ಎರಚುವಂತೆ ಅಭಿನಯಿಸುತ್ತಾರೆ. ಕೆಲವರು ವಾದ್ಯ ಬಾರಿಸುವಂತೆ, ಇನ್ನು ಕೆಲವರು ಕುಣಿಯುತ್ತಾರೆ. ಹೂ ತರಲು ಒಳಗೆ ಹೋದ ಒಬ್ಬ ಹುಡುಗ (ರೂಪಸೇನ) ಬಂದಿರುವುದಿಲ್ಲ. ಉಳಿದ ಹುಡುಗರು ನಾಯಕನ (ಮೋಹನ) ಮಾತಿನಂತೆ ಹಾಡಿ, ಕುಣಿಯುತ್ತಾ ಉತ್ಸವದಲ್ಲಿ ಭಾಗಿಯಾಗುತ್ತಾರೆ.)

ಚಂದ್ರಸೇನ : (ರಾಗವಾಗಿ ಹಾಡುತ್ತಾನೆ)
ಗಜಾನನಽಽ.... ಗಜಾಽನನಽಽ
ಮಂಗಳ ಮೂರ್ತಿ ಗಜಾನನಽಽ

ಗುಂಪು : ಗಜಾನನಽಽ ಗಜಾನನಽಽ
ಮಂಗಳ ಮೂರ್ತಿ ಗಜಾನನಽಽ

ಚಂದ್ರಸೇನ : ಹೇ ಗಣನಾಥ, ಹೇ ಶುಭದಾತ
ವಿದ್ಯಾ ಬುದ್ಧಿಯ ನೀಡು ನೀ ಸತತ

ಗುಂಪು : ಹೇ ಗಜಾನನಽಽ ಗಜಾನನಽಽ
ಮಂಗಳಮೂರ್ತಿ ಗಜಾನನಽಽ

ಚಂದ್ರಸೇನ : ಪಾಶಾಂಕುಶಧರ ಮೂಷಕ ವಾಹನ
ಪೋಷಿಸು ದೇವ ದೇವೇಶ ಗಜಾನನಾ

ಗುಂಪು : ಗಜಾನನಽಽ ಗಜಾನನಽಽ
ಮಂಗಳ ಮೂರ್ತಿ ಗಜಾನನಽಽ

ಚಂದ್ರಸೇನ : ಸಕಲ ಚರಾಚರ ಹೇ ಲಂಬೋದರ
ನೀನೆ ಪರಾತ್ಪರ ನೀ ಪರಮೇಶ್ವರ

ಗುಂಪು : ಗಜಾನನಽಽ ಗಜಾನನಽಽ
ಮಂಗಳ ಮೂರ್ತಿ ಗಜಾನನಾಽಽ
ಗಜಾನನಽಽ ಗಜಾನನಽಽ
ಮಂಗಳ ಮೂರ್ತಿ ಗಜಾನನಽಽ

(ಮಕ್ಕಳು ಆನಂದದಿಂದ, ವೇಗವಾಗಿ ಕುಣಿಯುತ್ತಾ ಎತ್ತರದ ಧ್ವನಿಯಲ್ಲಿ ಹಾಡುತ್ತಿರುತ್ತಾರೆ. ಇದ್ದಕ್ಕಿದ್ದಂತೆ 'ಅಯ್ಯೋಽಽ'ಎಂದು ಕಿರುಚುತ್ತಾ ರೂಪಸೇನ ಭಯದಿಂದ ನಡುಗುತ್ತಾ ರಂಗದ ಮಧ್ಯಕ್ಕೆ ಬಂದು ಕುಸಿದು ಬೀಳುತ್ತಾನೆ. ಅವನನ್ನು ಕಂಡ ಗುಂಪು ನಿಶ್ಚಲವಾಗುತ್ತದೆ. ಗಣೇಶನನ್ನು ಹಿಡಿದ ಮಕ್ಕಳೂ ಸಹ ಗಾಭರಿಯಿಂದ ಕೈ ಬಿಡುತ್ತಾರೆ. ಗಣೇಶ ಕೆಳಗೆ ಬಿದ್ದು ನೋವಿನಿಂದ 'ಅಯ್ಯೋ' ಎಂದು ಕೂಗುತ್ತ ಮುಖವಾಡ ಎತ್ತಿ, ಬಿದ್ದಿರುವ ರೂಪಸೇನನನ್ನು ಬಗ್ಗಿ ನೋಡುತ್ತಾನೆ. ಮಕ್ಕಳು ಭಯದಿಂದ ದಿಕ್ಕು ತೋಚದೆ ರೂಪಸೇನನನ್ನು ನೋಡುತ್ತಾ ಇರುತ್ತಾರೆ. ತುಸು ಸಮಯ ರಂಗದಲ್ಲಿ ಮೌನ ಆವರಿಸುತ್ತದೆ.

ಸ್ವಲ್ಪ ಸಮಯದ ನಂತರ ಸುಧಾರಿಸಿಕೊಂಡು ಮಕ್ಕಳು ಒಬ್ಬೊಬ್ಬರಾಗಿ ರೂಪಸೇನನ ಬಗ್ಗೆ ಗಮನಹರಿಸುತ್ತಾರೆ. ಮೋಹನ, ಅಂಬಿಕಳಿಗೆ ನೀರು ತರಲು ಹೇಳುತ್ತಾನೆ. ಕೆಲವರು ಏನಾಗಿರಬಹುದೆಂಬ ಚರ್ಚೆ ಮಾಡುತ್ತಾರೆ. ಕೆಲವರು ಅವನನ್ನು ಉಪಚರಿಸುತ್ತಾರೆ. ವಸುಂಧರೆ ಅವನನ್ನು ತೊಡೆಯ ಮೇಲೆ ಮಲಗಿಸಿಕೊಂಡು ಗಾಳಿ ಬೀಸುತ್ತಾಳೆ.

ರೂಪಸೇನ ನಿಧಾನವಾಗಿ ಕಣ್ಣು ತೆರೆಯುತ್ತಾನೆ. ಮಕ್ಕಳಿಗೆ ಆನಂದವಾಗಿ, ಹರ್ಷೋದ್ಗಾರ ಮಾಡುತ್ತಾರೆ. ಒಬ್ಬೊಬ್ಬರೂ "ಏನು? ಏನಾಯ್ತು?" ಎನ್ನುವ ಕುತೂಹಲ ತೋರಿಸುತ್ತಾರೆ.)

ಮೋಹನ : ರೂಪಸೇನ,.. ರೂಪಸೇನ, ಏನಾಯಿತೊ? ಯಾಕೆ? ಯಾಕೆ ಹೆದರಿದೆ?

ಚಂದ್ರಸೇನ : ಯಾಕೆ ಇಷ್ಟೊಂದು ಭಯದಿಂದ ಓಡಿಬಂದೆ? ಯಾರಾದರೂ ಅಟ್ಟಿಸಿ ಕೊಂಡು ಬಂದರೆ?

ಉಳಿದವರು : ಯಾಕೋ? ಏನಾಯಿತೋ? ಹೇಳೋ?

(ವಸುಂಧರೆ ಅವನನ್ನು ತೊಡೆಯಿಂದ ಇಳಿಸಿ ನಿಧಾನವಾಗಿ ಕೂರಿಸುತ್ತಾಳೆ. ಆತನ ಭುಜ ಹಿಡಿದು, ರಮಿಸುತ್ತಾ)

ವಸುಂಧರೆ : ರೂಪಸೇನಾ,....... ಏ ರೂಪ, ಯಾಕೋ ಮಾತಾಡೋ, ಏನಾಯಿತೋ? ಹೇಳು, ಯಾಕೆ ಇಷ್ಟು ಹೆದರಿದ್ದೀಯ?

ಚಂದ್ರಸೇನ : ನೋಡು ಎಲ್ಲರೂ ನಿನಗೆ ಏನಾಗಿದೆಯೋ ಅಂತ ಹೇಗೆ ಕಂಗಾಲಾಗಿದ್ದಾರೆ; ಏನಾಯ್ತು ಹೇಳು? ಏನು ಕಂಡೆ? ಏನಾಯ್ತು ನಿನಗೆ?

ರೂಪಸೇನ : ನಾನು ಹೂ ತರೋದಕ್ಕೆ ಅಂತ...... ಉಪವನದ ಆ ಕಡೆ ಹೋದೆ..... (ನಿಧಾನವಾಗಿ ಮೇಲೇಳುತ್ತಾ)... ಅಲ್ಲಿ ಆ ಬೇಲಿಯ (ತೋರಿಸುತ್ತಾ) ಅಂಚಿನ ಮರಗಳ ನಡುವೆ.... (ಭಯದಿಂದ ನಿಲ್ಲಿಸಿ ಬಿಡುತ್ತಾನೆ)

ಗಣೇಶ : (ತಾನೂ ಭಯಗೊಂಡು)...... ಮರಗಳ ನಡುವೆ.. ಏನೋ?

ಅಂಬಿಕ : ಮರಗಳ ನಡುವೆ (ಯೋಚಿಸಿ) ದುಷ್ಟ ಪ್ರಾಣಿಗಳನ್ನೇನಾದರೂ ಕಂಡೆಯೇನೋ

ಸರಯೂ : ಏ... ಇವಳು ಹೇಳೋದ್ ನೋಡು, ರಾಜಧಾನಿಯ ಉಪವನಕ್ಕೆ ದುಷ್ಟ ಪ್ರಾಣಿಗಳು ಬರ್ತಾವೇನೆ? ಅಯ್ಯೋ ದೇವರೇ (ಹಣೆ ತಟ್ಟಿಕೊಳ್ಳುವಳು)

ಚಂದ್ರಸೇನ : ದಯವಿಟ್ಟು ನೀವು ಸುಮ್ಮನೆ ಮಾತಾಡಬೇಡಿ. ಏನಾಗಿದೆ ಅಂತ ಹೇಳೋದಕ್ಕೆ ಅವನಿಗೆ ಅವಕಾಶ ಕೊಡಿ ; ಹೇಳೋ ರೂಪ, ಅಲ್ಲಿ ಏನಾಯ್ತು?

ರೂಪಸೇನ : ಬೇಲಿ ಅಂಚಿನ ಮರಗಳ ಹತ್ತಿರ ನಾನು... ಹೂ ಆರಿಸುತ್ತಿದ್ದಾಗ.. ಆ ಪೊದೆಗಳ ನಡುವೆ... ಅಬ್ಬಬ್ಬ ನೆನೆಸಿಕೊಂಡರೇ....

ವಿಶ್ವ : ಆ ಪೊದೆಯ ಹತ್ತಿರ... ಏನೊ? ಹಾವು ನೋಡಿದೆಯಾ?

ಸರಯೂ : ಹಾವನ್ನು ನೋಡಿದರೆ ಅವನೇನು ಹೆದರೋಲ್ಲ. ಯಾಕೇಂದ್ರೆ ಮೊನ್ನೆ ಒಂದು ಹಾವನ್ನು ರೂಪನೇ ಕೊಂದಿದ್ದ.

ಗಣೇಶ : (ಏನೋ ಹೊಳೆದವನಂತೆ) ಸರಿ, ಹಾಗಾದರೆ; ನಾನು ಹೇಳ್ತೀನಿ. ಅಲ್ಲಿ...ಅಲ್ಲಿ.... ರಾಜಭಟರು ಇವನನ್ನು ಗದರಿಸಿದರು, ಅಷ್ಟೆ ಅಲ್ವೇನೋ?

ಮೋಹನ : ರಾಜಭಟರೇಕೆ ಗದರಿಸುತ್ತಾರೆ? ನಾವು ರಾಜಧಾನಿಯ ಮಕ್ಕಳೆಂದು ಅವರಿಗೆ ತಿಳಿಯದೇ?

ಗಣೇಶ : ಇಲ್ಲ ಮೋಹನ, ಗೊತ್ತಿದ್ದರೂ ಒಮ್ಮೊಮ್ಮೆ ಗದರಿಸುತ್ತಾರೆ. ಮೊನ್ನೆ... ನಾನೂ... ನಾನೂ ಆ ಬೀದಿಯ ಅಂಚಿನಲ್ಲಿ (ಅತ್ತ ಇತ್ತ ನೋಡುತ್ತಾ ಕಿರು ಬೆರಳೆತ್ತಿ) ಉಚ್ಚೆ ಮಾಡುತ್ತಿದ್ದಾಗ... ಆ ದಪ್ಪಮೀಸೆಯ ಸರದಾರ ನನ್ನನ್ನು (ಗಟ್ಟಿಯಾಗಿ) ಕಣ್ಣಲ್ಲೇ 'ತಿಂದು ಬಿಡ್ತೀನಿ' ಅಂದ. (ಎಲ್ಲರೂ ನಗುವರು) ಯಾಕ್ರೋ ನಗ್ತೀರಾ? ನಾ ಹೇಳಿದ್ದು ನಿಜ ಗೊತ್ತಾ? ಸುಳ್ಳೇನಲ್ಲ; ಹುಂ

ಅಂಬಿಕ : ಇರಲಿ ಗಣೇಶ; ಈಗ ರೂಪಸೇನಂಗೆ ಏನಾಯ್ತು ವಿಚಾರಿಸೋಣ. ಏ ರೂಪ, ಹೇಳೋ ಆ ಪೊದೆಗಳ ನಡುವೆ ಏನು ನೋಡಿದೆ?

ರೂಪಸೇನ : ಆ ಪೊದೆಗಳ ನಡುವೇ..... ನಾನು ಒಬ್ಬ ರಾಕ್ಷಸೀನ ಕಂಡೆ!

ಎಲ್ಲರೂ : ರಾಕ್ಷಸೀ!

ಮೋಹನ : ಏನೂ?! ರಾಕ್ಷಸೀ! ಅಲ್ಲಿದ್ದಳಾ?

ರೂಪಸೇನ : ಹೌದು. ನನಗೆ ನೆನೆಸಿಕೊಂಡರೇ ಈಗಲೂ ಭಯವಾಗುತ್ತೆ.

ಚಂದ್ರಸೇನ : ಏನೂ ಅಯೋಧ್ಯೆಯ ಉಪವನದಲ್ಲಿ ರಾಕ್ಷಸಿ? ಏ ರೂಪ, ಹೀಗೆ ಕೆಟ್ಟದಾಗಿ ಕಟ್ಟುಕಥೆ ಹೇಳಬಾರದು– ಒಮ್ಮೊಮ್ಮೆ ನಾವು ಕೆಟ್ಟದ್ದನ್ನು ಹೇಳಿದರೇ, ಕೇಳಿದರೇ, ಕೆಟ್ಟದ್ದೇ ಆಗುತ್ತಂತೆ.

ರೂಪಸೇನ : ಕಟ್ಟುಕಥೆಯಲ್ಲ. ಚಂದ್ರಸೇನ, ನಿಜವಾದ ರಾಕ್ಷಸಿ! ಅಬ್ಬ! ಎಷ್ಟು ವಿಕಾರ ವಾಗಿದ್ದಳು. ನೆನೆಸಿಕೊಂಡರೇ.... ಭಯವಾಗುತ್ತೆ!

ವಸುಂಧರೆ : ರೂಪ, ಎಂಥಾ ಸುಳ್ಳು ಹೇಳ್ತಿದ್ದೀಯೋ? ಯಾರಾದರೂ ನಿನ್ನ ಮಾತು ನಂಬ್ತಾರಾ? ಅದೂ ಈ ಅಯೋಧ್ಯೆಯಲ್ಲಿ ರಾಕ್ಷಸೀ ಇರ್‍ತಾಳೇ ಅಂದರೇ....?

ಗಣೇಶ : ಅದೂ ಅರಮನೆ ಉಪವನದಲ್ಲಿ ರಾಕ್ಷಸಿ ಇರ್‍ತಾಳಾ? ರಾಕ್ಷಸರು ಇರೋದು ಆಂ.. ಕಾಡಲ್ಲಿ, ಆಮೇಲೆ ಪಾತಾಳದಲ್ಲಿ ಅಲ್ವೇನೋ.

ಮೋಹನ : ರಾಮರಾಜ್ಯದಲ್ಲಿ ರಾಕ್ಷಸಿ!?

ಉಳಿದವರು : ರಾಮರಾಜ್ಯದಲ್ಲಿ ರಾಕ್ಷಸಿ? (ನಗುವರು)

ಚಿನ್ಮಯ : (ಇದುವರೆಗೂ ಏನೂ ಮಾತನಾಡದೆ ಸುಮ್ಮನೆ ಎಲ್ಲರನ್ನೂ ನೋಡುತ್ತಿದ್ದವಳು, ಒಮ್ಮೆಲೆ ರಾಗವಾಗಿ)

ಕೇಳಿ..... ಕೇಳಿ..... ಎಲ್ಲರೂ ಕೇಳಿ
ರಾಮರಾಜ್ಯದಲ್ಲಿ......
ರಾಜಧಾನಿಯಲ್ಲಿ.....

(ಉಳಿದವರು ಚಪ್ಪಾಳೆ ತಟ್ಟಿ ಕುಣಿಯುತ್ತಾ)

ರಾಮರಾಜ್ಯದಲ್ಲೀ.....
ರಾಜಧಾನಿಯಲ್ಲೀ....
ರಾಜಬೀದಿಯಲ್ಲೀ....
ರಕ್ಕಸಿಯ ಕಂಡನಂತೆ...!

(ಕುಣಿಯುತ್ತಾ)

ರಾಮರಾಜ್ಯದಲ್ಲೀ.....
ರಾಜಧಾನಿಯಲ್ಲೀ.....
ರಾಜಬೀದಿಯಲ್ಲೀ.....
ರಾಜೋದ್ಯಾನದಲ್ಲೀ....
ರಕ್ಕಸಿಯ ಕಂಡನಂತೆ...?!
ರಕ್ಕಸಿಯ ಕಂಡನಂತೆ...?!
ಹಗಲಲ್ಲಿ ಚಂದ್ರನಂತೇ....

ಉಳಿದವರು : ಕೇಳಿ, ಕೇಳೀ..... ಎಲ್ಲ ಕೇಳಿ...

ಚಿನ್ಮಯ : ರಾತ್ರಿಯಲ್ಲಿ ಸೂರ್ಯನಂತೇ....

ಉಳಿದವರು : ಕೇಳಿ, ಕೇಳೀ.... ಎಲ್ಲ ಕೇಳೀ...

ಎಲ್ಲರೂ : ಕೇಳಿ,ಕೇಳಿ... ಎಲ್ಲರೂ ಕೇಳೀ
ಹಗಲಲ್ಲಿ ಚಂದ್ರನಂತೇ....
ರಾತ್ರಿಯಲ್ಲಿ ಸೂರ್ಯನಂತೇ....
ಸತ್ತ ಗಿಡವೂ ಚಿಗುರಿದಂತೇ...
ಬೆಟ್ಟ ಎದ್ದು ನಡೆಯುವಂತೆ...
ಕೇಳಿ... ಕೇಳೀ ... ಎಲ್ಲರೂ ಕೇಳೀ...
ಇದಕ್ಕೂ ಸುಳ್ಳು ಇರುವುದೇ ಹೇಳೀ...

(ಜೋರಾಗಿ ಕೇಕೆ ಹಾಕಿ ಕುಣಿಯುತ್ತಿರುತ್ತಾರೆ)

ರೂಪಸೇನ : (ಕಿರಿಚಿ) ನಿಲ್ಲಿ. ನಾನು ರಾಕ್ಷಸಿ ಕಂಡದ್ದು ನಿಜ. ಬೇಕಾದರೆ ನೀವೂ ನನ್ನ ಜೊತೆಗೆ ಬನ್ನಿ. ನಿಮಗೂ ತೋರಿಸ್ತೀನಿ. ಅವಳ ವಿಕಾರವಾದ ರೂಪಾನ ನೆನೆಸಿದರೇ ಈಗಲೂ ಕೂಡ ನನ್ನ ಮೈ ನಡುಗುತ್ತೆ.

ಮೋಹನ : ಹಾಗಾದ್ರೆ ಹೇಳು ನೋಡೋಣ? ಆ ರಾಕ್ಷಸಿ ಹೇಗಿದ್ದಳು?
(ರೂಪಸೇನ ಏನನ್ನೋ ನೆನಪಿಸಿಕೊಂಡು ಹೇಳುವವನಂತೆ ನಿಧಾನವಾಗಿ, ರಾಗವಾಗಿ ಎತ್ತರವಾದ ಧ್ವನಿಯಲ್ಲಿ ಅಭಿನಯಿಸುತ್ತಾ ಹೇಳುತ್ತಾನೆ. ಉಳಿದವರು ಅವನನ್ನೇ ಹಿಂಬಾಲಿಸುತ್ತಾ, ಅನುಕರಿಸುತ್ತಾ, ಭಯವನ್ನು ವ್ಯಕ್ತಪಡಿಸುತ್ತಾ ಹೋಗುತ್ತಾರೆ)

ರೂಪಸೇನ : ಬಂಡೆಯೊಂದು ಜೀವ ತಳೆದು.
ಬೇಲಿಯನ್ನು ಜಿಗಿದ ಹಾಗೇ....
ಕ್ರೂರ ಪ್ರಾಣಿ ಕೋಪದಿಂದ
ಕೊಂಬು ಚಾಚಿ ಬಂದ ಹಾಗೇ....

ಕೆಲವರು : ಆಮೇಲೆ....?

ಗಣೇಶ : ಆ ಮೇಲೆ ಹೇಗೇ ? (ಭಯದಿಂದ)

ರೂಪಸೇನ : ಹೇಳ್ತೀನಿ ಕೇಳೂ....
ಅವಳ...ಽ
ಎರಡು ಕಣ್ಣು ಕೆಂಡದುಂಡೇ....
ಹೊಟ್ಟೆಯೊಂದು ದೊಡ್ಡ ಬಂಡೇ...
ಹಂಡೆಯಂತೆ ಅವಳ ಕುಂಡೇ...(ನಗುವರು)
ಕೆದರಿನಿಂತ ಕೊಳಕು ಮಂಡೇ...

ಇನ್ನು ಕೆಲವರು : ಆ ಮೇಲೆ...

ರೂಪಸೇನ : ಮೊಂಡು ಮೂಗು, ಚೂಪು ಉಗುರು
ಕಾಲು ಕೈಯ್ಯ ತುಂಬ ನಿಗುರು
ಪಾಚಿಗಟ್ಟಿ ನಿಂತ ಮೈ
ಕೊಂಬೆಯಂತೆ ಅವಳ ಕೈ
ಮರದ ಬೊಡ್ಡೆಯಂಥ ಕಾಲು
ಬಿದಿರು ಅಡ್ಡೆಯಂತೆ ತೋಳು

ಮೋಹನ : ಮುಂದೆ...

ರೂಪಸೇನ : ಮುಂದೇ... ಮುಂದೇನೂ ಅಂತ ಹೇಳಲಿ...
ಜೀವ ಸಣ್ಣ ಮುದ್ದೆಯಾಗಿ
ಉಟ್ಟ ವಸ್ತ್ರ ಒದ್ದೆಯಾಗಿ
ನಿಂತ ಜಾಗ ಹೊತ್ತು ಗೊತ್ತು
ಎಲ್ಲ ಮರೆತು ಹೋಯ್ತು ಸತ್ತು...
ನಿಲ್ಲಲಿಲ್ಲ ಅಲ್ಲಿ ಕ್ಷಣವು...
ನಿಂತರಿಲ್ಲ ನನ್ ಹೆಣವೂ...
ಅಯ್ಯಪ್ಪಾ ಮುಂದೇನೂಂತ ಹೇಳಲಾರೆ...
ಬೇಕಾದ್ರೆ ಬನ್ನಿ.... ನಿಮಗೇ ತೋರಿಸುತ್ತೇನೆ.

ಗಣೇಶ : (ನಿಧಾನವಾಗಿ)
ಜೀವ ಸಣ್ಣ ಮುದ್ದೆಯಾಗಿ
ಉಟ್ಟ ವಸ್ತ್ರ ಒದ್ದೆಯಾಗಿ
ನಿಂತ ಜಾಗ ಹೊತ್ತು ಗೊತ್ತು
ಎಲ್ಲ ಮರೆತು ಹೋಯ್ತು ಸತ್ತು...
ಬೇಡಪ್ಪಾ ಬೇಡ. ನಾನಂತೂ ಬರೋದೂ ಇಲ್ಲ;
ನೀನು ತೋರಿಸೋದೂ ಬೇಡ. ಕೇಳಿದರೇ ಭಯವಾಗುತ್ತೆ.

(ತನ್ನ ಮುಖ ಮುಚ್ಚಿಕೊಳ್ಳುವನು)

ವಸುಂಧರೆ : ಹೆದರಬೇಡ ಗಣೇಶ; ನಿನ್ನ ಜೊತೆಗೆ ನಾವೆಲ್ಲರೂ... ಇರ್ತೀವಿ. ಮೋಹನ ನಡಿಯೋ, ನಾವೇ ಹೋಗಿ ನೋಡೇ ಬಿಡೋಣ.

ಮೋಹನ : ನೋಡೋದಕ್ಕೆ ಖಂಡಿತವಾಗಿ ನಾನು ತಯಾರೀನೇ. ಆದರೆ ಒಂದು ಮಾತು, ಅಲ್ಲಿ ಯಾರೂ ಗಲಾಟೆ ಮಾಡಬಾರ್ದು ಅಷ್ಟೆ.

ಲೋಕರಾಜ : ತಡಿಯೋ ಮೋಹನ, ಒಂದು ವೇಳೆ ಆ ರಾಕ್ಷಸೀ ನಮ್ಮನ್ನು ನೋಡಿ ನಮ್ಮ ಕಡೆ ನುಗ್ಗಿದರೇ....?

ಅಂಬಿಕ : ಲೋಕರಾಜ, ನೀ ಬರೀ ಪುಕ್ಕಲು ಮನುಷ್ಯ ಕಣೋ. ಎಂಥಾ ರಾಕ್ಷಸರೂ ಮಕ್ಕಳ ಮೇಲೆ ಒಂದು ಬಾರಿ ಆಕ್ರಮಣ ಮಾಡೋಲ್ಲವಂತೆ, ಗೊತ್ತಾ?

ಜಯಂತಿ : ಹಾಗೆಲ್ಲಾ ಹೇಳೋದಕ್ಕೆ ಆಗೋದಿಲ್ಲ. ಅಂಬಿಕಾ, ನಾವು ಹಿಂದೆ ಮುಂದೆ ಯೋಚಿಸದೇ ಹೋಗೋದು ಅಷ್ಟು ಒಳ್ಳೆಯದಲ್ಲ. ನನ್ನ ಕೇಳಿದರೆ ಎಲ್ಲ ವಿಷಯವನ್ನೂ ದೊಡ್ಡವರ ಹತ್ತಿರ ಹೇಳಿಬಿಡೋಣ.

ಗಣೇಶ : ಅದೇ ಸರಿಯಾದ ದಾರಿ, ಮೋಹನ. ನಾವು ಹುಡುಗಾಟ ಆಡೋದು ಬೇಡ. ಬೇಕಾದರೆ ರಾಜಭಟರಿಗೆ ಹೇಳಿಬಿಡೋಣ.

ವಿಶ್ವ : ಛೇ. ನಿಮಗೆ ಯಾಕೆ ಅರ್ಥವಾಗೋದಿಲ್ಲ? ನಿಜ ತಿಳೀದೇ ದೊಡ್ಡವರಿಗೆ ಹೇಳಿದರೆ, ಕೊನೆಗೆ ಅವರು ನಮ್ಮನ್ನು ದಡ್ಡರೂ ಅಂತಾರೆ. ಇನ್ನು ರಾಜ ಭಟರಿಗೆ ತಿಳಿಸಿದರಂತೂ ಸುಳ್ಳಾದರೆ ನಮಗೆ ರಾಜದಂಡವೇ ಗತಿಯಾಗುತ್ತೆ.

ಮೋಹನ : ಅದಕ್ಕೆ ನಾನು ಹೇಳೋದು, ಹತ್ತಿರ ಹೋಗಿ ನಿಜವೋ, ಸುಳ್ಳೋ ಪರೀಕ್ಷಿಸಿ ನೋಡೋಣ. ಕಣ್ಣಾರೆ ಕಂಡರೂ ಪರಾಂಬರಿಸಿ ನೋಡಬೇಕು ಅಂತ ಪಂಚತಂತ್ರದಲ್ಲಿ ಹೇಳಿಲ್ಲವೇ?

ವಿಶ್ವ : ಇದೀಗ ಸರಿಹೋಯ್ತು. ಮೊದಲು ಪರೀಕ್ಷೆ ಮಾಡೋಣ. ಎಲ್ಲರೂ ಮೆಲ್ಲಗೆ ಹೋಗಿ ನೋಡೋಣ. ಆಮೇಲೆ ಏನೂ ಅಂತ ಯೋಚಿಸೋಣ.

ರೂಪಸೇನ : ಸರಿ, ಹಾಗಾದರೆ ಎಲ್ಲರೂ ಬನ್ನಿ. ನನ್ನ ಜೊತೆಗೆ ಬರುವವರೆಲ್ಲರೂ ನನ್ನನ್ನು ಹಿಂಬಾಲಿಸಿ.

(ಎಲ್ಲರೂ ಒಬ್ಬೊಬ್ಬರಾಗಿ ರೂಪಸೇನನನ್ನು ಹಿಂಬಾಲಿಸುತ್ತಾರೆ. ಒಬ್ಬ ಹೋಗಿದ್ದನ್ನು ನೋಡಿ ಇನ್ನೊಬ್ಬ, ಇನ್ನೊಬ್ಬನನ್ನು ನೋಡಿ ಮತ್ತೊಬ್ಬ, ಹೀಗೆ ಎಲ್ಲರೂ ಹೊರಡುವ ಸಿದ್ಧತೆ ಮಾಡುತ್ತಾರೆ. ಹಿಮ್ಮೇಳದಲ್ಲಿ ಹಾಡು ಬರಲು ಪ್ರಾರಂಭವಾಗುತ್ತಿದ್ದಂತೆ, ಇತ್ತ ಮಕ್ಕಳೂ ಹೊರಡುತ್ತಾರೆ.)

ಯೋಚಿಸಿ, ಯೋಚಿಸಿ, ಯೋಚಿಸಿ ಕಡೆಗೆ
ಹೊರಟರು ಮಕ್ಕಳು ರಕ್ಕಸಿಯೆಡೆಗೆ
ಒಬ್ಬರ ನೋಡಿ ಒಬ್ಬರು ಹೊರಟರು
ಕಡೆಯಲಿ ಎಲ್ಲರು ಒಟ್ಟಿಗೆ ನಡೆದರು

ಅಂತಿರಬಹುದೇ?.. ಇಂತಿರಬಹುದೇ...?
ಕುಂತಿರಬಹುದೇ? ನಿಂತಿರಬಹುದೇ...?

ಹಾಗಿರಬಹುದೇ..? ಹೀಗಿರಬಹುದೇ..?
ಮಕ್ಕಳ ಊಹೆಗೆ ಕೊನೆ ಇರಬಹುದೇ...?

ಗಗನದ ಎತ್ತರ...? ಭುವನದ ಅಗಲ?
ಹೊತ್ತಿರಬಹುದೆ ಕರಡಿಯ ತೊಗಲ...?
ಕಾರೆಯ ಮುಳ್ಳು... ಕೋರೆಯ ಹಲ್ಲು?
ತರತರ ಊಹೆ–ಗಿಜಿ ಗಿಜಿ ಗುಲ್ಲು...
ಹೊರಟರು ಮಕ್ಕಳು ಉಪವನದೆಡೆಗೆ
ಕಾಣಲು ಹೊರಟರು – ರಕ್ಕಸಿಯೆಡೆಗೆ

(ಹಿಮ್ಮೇಳದ ಹಾಡು ಮುಗಿಯುವ ಹೊತ್ತಿಗೆ ರೂಪಸೇನನೊಂದಿಗೆ ಮಕ್ಕಳು ರಂಗವನ್ನು ಎರಡು ಬಾರಿ ಸುತ್ತಿರುತ್ತಾರೆ. ಅವರು ಒಂದು ಬಾರಿ ಸುತ್ತಿ ಬದಿಗೆ ಬಂದಾಗ ರಂಗ ಕತ್ತಲೆಯಾಗಿ ನಂತರ ಬೆಳಕು ಮೂಡಿದ ಮೇಲೆ ಇನ್ನೊಂದು ಸುತ್ತು ಸುತ್ತಿರುತ್ತಾರೆ. ರೂಪಸೇನ ಎಲ್ಲರನ್ನೂ ಹತ್ತಿರ ಕರೆದು ಮರದ ಕಡೆ ಬೆರಳು ಮಾಡಿ ತೋರಿಸುತ್ತಾನೆ. ಕೆಲವರು ನಿಂತು, ಕೆಲವರು ಕುಳಿತು – ಇನ್ನು ಕೆಲವರು ತುದಿಗಾಲಿನಲ್ಲಿ ನಿಂತು ನೋಡುತ್ತಾರೆ. ಒಬ್ಬರನ್ನೊಬ್ಬರು ಎಳೆದು, ಜಗಳವಾಡಿ ನೋಡುತ್ತಾರೆ. ಮಧ್ಯೆ ಕೆಲವರು ಹೆಚ್ಚು ಶಬ್ದ ಮಾಡದಂತೆ ಸೂಚಿಸುತ್ತಾರೆ. ಮರದ ಕೆಳಗೆ ಆಕೃತಿಯೊಂದು ಮುಸುಕು ಮುಚ್ಚಿ ಮಲಗಿದಂತೆ ಕಂಡು ಬರುತ್ತದೆ. ಮಕ್ಕಳು ಭಯಮಿಶ್ರಿತ ಕುತೂಹಲದೊಂದಿಗೆ ನೋಡುತ್ತಾರೆ. ಕೆಲವರು ಧೈರ್ಯ ವಹಿಸಿ ಆಕೃತಿಯೆಡೆಗೆ ನಡೆಯುತ್ತಾರೆ.)

ರೂಪಸೇನ : (ಮೋಹನನನ್ನು ತಡೆದು) ಬೇಡ ಮೋಹನ, ಅದೇ ರಾಕ್ಷಸಿ ಅನ್ನಿಸುತ್ತೆ. ಈಗ ಮುಸುಕು ಮುಚ್ಚಿ ಮಲಗಿದ್ದಾಳೆ ಅಷ್ಟೆ.

ಜಯಂತಿ : ಹುಡುಗಾಟ ಬೇಡ, ಮೋಹನ. ಈ ರಾಕ್ಷಸರು ಬೇಕಾದ ಹಾಗೆ ರೂಪ ಬದಲಾಯಿಸುತ್ತಾರೆ.

ವಿಶ್ವ : (ಗದರಿಸುತ್ತಾ) ಜಯಂತಿ, ನಿನಗೆ ಭಯವಾದರೆ ನೀನು ಮನೆಯಕಡೆ ಹೋಗು. ಎಲ್ಲರನ್ನೂ ಗಾಬರಿಗೊಳಿಸಬೇಡ.

ಮೋಹನ : ದಯವಿಟ್ಟು ಕಿತ್ತಾಡಬೇಡಿ. ಧೈರ್ಯದಿಂದ ಹೋಗಿ, ನಿಜ ಏನೂ ಅಂತ ಪರೀಕ್ಷೆ ಮಾಡೋಣ (ಮುಂದೆ ಹೋಗುತ್ತಾನೆ)

ವಸುಂಧರೆ : ಮೋಹನ, ಸ್ವಲ್ಪ ನಿಧಾನಿಸು. ತೀರಾ ಅವಸರ ಬೇಡ

(ಮುಂದುವರೆಯುತ್ತಿದ್ದ ಮೋಹನ, ವಿಶ್ವ ಕೋಪದಿಂದ ಅಲ್ಲಿಯೇ ನಿಲ್ಲುತ್ತಾರೆ. ಮೋಹನ ವಸುಂಧರೆಯನ್ನು ಕೋಪದಿಂದ ನೋಡಿ, ಬಾಯಿಗೆ ಬೆರಳಿಟ್ಟು ಸುಮ್ಮನಿರುವಂತೆ ಅಭಿನಯಿಸಿ, ಮತ್ತೆ ಮುಂದುವರೆಯುತ್ತಾನೆ. ಕೆಲವರು ಮೆಲ್ಲನೆ ಅವರನ್ನು ಹಿಂಬಾಲಿಸುತ್ತಾರೆ. ಇನ್ನು ಕೆಲವರು ನಿಂತಲ್ಲಿಯೇ ಭಯ ಮತ್ತು ಕುತೂಹಲದಿಂದ ಇವರನ್ನೇ ನೋಡುತ್ತಿರುತ್ತಾರೆ. ಮೋಹನ ಮರದ ಹತ್ತಿರ ಹೋಗಿ, ಧೈರ್ಯ ತಂದುಕೊಂಡು ಆಕೃತಿಯತ್ತ ಕೈ ಚಾಚುತ್ತಿದ್ದಾಗ)

ರೂಪಸೇನ : ಬೇಡ ಮೋಹನ, ನನಗ್ಯಾಕೋ ತುಂಬಾ ಭಯವಾಗುತ್ತಾ ಇದೆ. ಹೋಗಿ ದೊಡ್ಡವರಿಗೆ ತಿಳಿಸಿ ಬಿಡೋಣ.

ಅಂಬಿಕ : ಯಾಕೆ ಹೆದರುವೆ ರೂಪ? ಏನಾಗುತ್ತದೆ ನೋಡಿ ಬಿಡೋಣ. ರಕ್ಕಸಿ ಯಾಗಿದ್ರೆ ಹೀಗೆ ಉಪವನದಲ್ಲಿ ಇರುತ್ತಿದ್ದಳೆ? ಅದೂ ಮುಸುಕು ಮುಚ್ಚಿ ಮಲಗಿ?

ಮೋಹನ : (ಹಿಂತಿರುಗಿ) ನಿಜ ರೂಪ; ಯಾವ ರಾಕ್ಷಸಿಗೂ ರಾಮರಾಜ್ಯ ಪ್ರವೇಶ ಮಾಡುವ ಧೈರ್ಯವಿಲ್ಲ. ಇನ್ನು ಹೀಗೆ ಉಪವನ ಪ್ರವೇಶಿಸಿ, ಮುಸುಕು ಮುಚ್ಚಿ ಮಲಗಿರುವ ಸಾಧ್ಯತೆಯಂತೂ ಇಲ್ಲವೇ ಇಲ್ಲ.

(ಮೋಹನ ಮತ್ತೆ ಆಕೃತಿಯ ಕಡೆಗೆ ಕೈ ಚಾಚುತ್ತಾನೆ. ಉಳಿದವರು ಭಯದಿಂದ ನೋಡುತ್ತಿರುತ್ತಾರೆ. ಮೋಹನ ಕೈ ತಟ್ಟಿ ಕರೆಯುತ್ತಾನೆ. ನಿಧಾನವಾಗಿ ಕೈಚಾಚಿ ಮುಟ್ಟಲು ಪ್ರಯತ್ನಿಸುತ್ತಿದ್ದ ಹಾಗೇ ಗಣೇಶ ಭಯದಿಂದ "ಬೇಡಾ" ಎಂದು ಕಿರಿಚುತ್ತಾನೆ. ಎಲ್ಲರೂ ಭಯದಿಂದ ಹೌಹಾರುತ್ತಾರೆ. ಜಯಂತಿ ಗಣೇಶನನ್ನು ಹಿಡಿದುಕೊಂಡು ಬಾಯಿಗೆ ಕೈ ಮುಚ್ಚಿ ನಿಲ್ಲಿಸಿಕೊಳ್ಳುತ್ತಾಳೆ. ಮೋಹನ, ವಿಶ್ವ ಮತ್ತೆ ಮುಂದೆ ಹೋಗಿ ಆಕೃತಿಯನ್ನು ಮುಟ್ಟುತ್ತಾರೆ. ಅದು ಮೆಲ್ಲನೆ ಅಲ್ಲಾಡುತ್ತದೆ. ಕೆಲವು ಮಕ್ಕಳು ಭಯದಿಂದ ಕಣ್ಣು ಮುಚ್ಚಿಕೊಳ್ಳುತ್ತಾರೆ. ಅವರು ಆಕೃತಿಯನ್ನು ಮುಟ್ಟಿ, ತಟ್ಟಿ ಮೇಲೇಳಿಸುವ ಪ್ರಯತ್ನ ಮಾಡುತ್ತಾರೆ. ಕೆಲವರು ದೇವರನ್ನು ಸ್ಮರಿಸುತ್ತಾರೆ. ಆಕೃತಿ ನಿಧಾನವಾಗಿ ಮುಸುಕು ತೆಗೆದು ಮೇಲೇಳುವ ಪ್ರಯತ್ನ ಮಾಡುತ್ತದೆ. ಹುಡುಗರು ಜೀವ ಎಡಗೈಯಲ್ಲಿ ಹಿಡಿದು ಅತ್ತಲೇ ನೋಡುತ್ತಿರುತ್ತಾರೆ. ಅದು ನಿಧಾನವಾಗಿ ತಡವಿ, ಕುಳಿತುಕೊಳ್ಳಲು ಪ್ರಯತ್ನಿಸಿದಾಗ ಮಕ್ಕಳು ಅದೊಂದು ಅಜ್ಜಿಯೆಂಬುದನ್ನು ಗುರುತಿಸಿ, ಸಂತೋಷಪಡುತ್ತಾರೆ. ಒಬ್ಬೊಬ್ಬರೂ ತಮಗೇ, ಅರಿವಾಗದಂತೆ "ರಾಕ್ಷಸಿಯಲ್ಲ, ಅಜ್ಜಿ" ಎಂದುಕೊಳ್ಳುತ್ತಾರೆ. ಹಿಮ್ಮೇಳದಲ್ಲಿ ಹಾಡು ಬರುತ್ತದೆ.)

ಬೆಕ್ಕಸ ಬೆರಗಲಿ ಮಕ್ಕಳು ನೋಡಲು
ರಕ್ಕಸಿಯಲ್ಲವು; ಮುದುಕಿ
ಉಕ್ಕಿದ ಹರುಷದಿ ಮಕ್ಕಳು ಉಲಿದರು
"ಉಳಿದೆವು ಸಾಯದೆ ಬದುಕಿ"
ಬಂಡೆಯ ಗಾತ್ರದ ರಕ್ಕಸಿ ಬದಲು
ಕಂಡಳು ನಡುಗುವ ಅಜ್ಜಿ
ಕೆಂಡದುಂಡೆಗಳು ಕಾರುವ ಬದಲು
ಕೆರೆವಳು ಮೈ ಕೈ ಕಜ್ಜಿ
ಭೀಮಕಾಯದ ರಕ್ಕಸಿಯಲ್ಲ
ವಾಮನ ರೂಪದ ಬಡವೆ
ತಾಮಸ ಗುಣದ ರಕ್ಕಸಿಗೇಕೆ
ರಾಮರಾಜ್ಯದ ಗೊಡವೆ?

ಬೆಕ್ಕಸ ಬೆರಗಲಿ ಮಕ್ಕಳು ನೋಡಲು
ರಕ್ಕಸಿಯಲ್ಲವು; ಮುದುಕಿ
ಉಕ್ಕಿದ ಹರುಷದಿ ಮಕ್ಕಳು ಉಲಿದರು
"ಉಳಿದೆವು ಸಾಯದೆ ಬದುಕಿ"

(ಮಕ್ಕಳು ತುಂಬು ಹರುಷದಿಂದ ತಮ್ಮ ತಮ್ಮಲ್ಲೇ ಮಾತಾಡಿಕೊಳ್ಳುತ್ತಾ)

ಮೋಹನ : ರೂಪಸೇನ, ನೀನು ನೋಡಿದ ರಾಕ್ಷಸಿ ಇವಳೇ ಏನು? (ಮಕ್ಕಳು ನಗುವರು)

ರೂಪಸೇನ : (ಖಿನ್ನನಾಗಿ) ಅಲ್ಲ, ಮೋಹನ ; ಖಂಡಿತವಾಗಿ ಇವಳಲ್ಲ. ಆದರೆ... ಆದರೆ. ಇದೇ ಮರದ ಬಳಿ ಆ ರಾಕ್ಷಸಿಯನ್ನು ನಾನು ಕಂಡಿದ್ದು...

ಜಯಂತಿ : ಹಾಗಾದರೆ ಈಗೆಲ್ಲಿ ಆ ರಾಕ್ಷಸಿ? ರಾಕ್ಷಸಿಗೂ ಈ ಬಡವಿ ಮುದುಕಿಗೂ ಎಲ್ಲಿಗೆಲ್ಲಿಯ ಸಂಬಂಧ? ನೀನೆಲ್ಲೋ ಹಗಲು ಕನಸು ಕಂಡಿರಬೇಕು. ಅಷ್ಟೆ.

ಗಣೇಶ : ನನಗೆ ಗೊತ್ತಾಯ್ತು ಕಣ್ರೋ. ಇವನಿಗೆ ಈ ಅಜ್ಜಿ ನೋಡಿ...(ತಲೆಯಾಡಿಸುತ್ತಾ) ಅಜ್ಜಿ ಕಥೆಯ ರಾಕ್ಷಸಿ ನೆನಪಾಗಿರಬೇಕು ಅಷ್ಟೆ.

ವಿಶ್ವ : ಹಾಗಾದರೆ ರಾಕ್ಷಸಿ ಎಲ್ಲಿ ಹೋದಳು? ಅಥವಾ ಈ ಅಜ್ಜಿ ಇಲ್ಲಿ ಹೇಗೆ ಬಂದಳು?

ರೂಪಸೇನ : ಆದರೆ ನಾನು ರಾಕ್ಷಸಿ ನೋಡಿದ್ದು ಸತ್ಯ. ಕನಸೂ ಅಲ್ಲ, ಕಥೆಯೂ ಅಲ್ಲ. ಖಂಡಿತವಾಗಿಯೂ ಇಲ್ಲಿ ಇದೇ ಸ್ಥಳದಲ್ಲಿ, ರಾಕ್ಷಸಿಯಂತೂ ಇದ್ದಳು.

ವಸುಂಧರೆ : ಹಾಗಾದರೆ ಒಂದು ಕೆಲಸ ಮಾಡೋಣ. ಈಗ ಈ ಅಜ್ಜಿಯನ್ನೇ ಕೇಳಿ ಬಿಡೋಣ, ಸತ್ಯ ತಿಳಿಯುತ್ತೆ. (ಅಜ್ಜಿಯನ್ನು ಕುರಿತು ಆಕೆಯ ಹತ್ತಿರ ಹೋಗಿ ದೊಡ್ಡದಾಗಿ) ಅಜ್ಜೀ, ಅಜ್ಜೀ... ಇಲ್ಲಿ ಸ್ವಲ್ಪ ಹೊತ್ತಿನ ಮೊದಲು ಒಬ್ಬ ರಾಕ್ಷಸೀನ ನೀನು ಕಂಡೆಯಾ?

ಮುದುಕಿ : (ನಿಧಾನವಾಗಿ ಮೇಲೇಳುತ್ತಾ, ಸ್ವಲ್ಪ ಗಲಿಬಿಲಿಗೊಂಡು) ರಾಕ್ಷಸೀ!? ಅದೂ ಈ ಉಪವನದಲ್ಲಿ!? ಎಲ್ಲಿಂದ ಬರಬೇಕು ಮಕ್ಕಳೇ!? ಸಾಧ್ಯವೇ ಇಲ್ಲ. (ಸ್ವಲ್ಪ ಯೋಚಿಸಿ) ಅದೂ ಅಲ್ಲದೆ ನನಗೆ.. ಕಣ್ಣು ಕೂಡ ಸರಿಯಾಗಿ ಕಾಣ್ಸೋದಿಲ್ಲ. ಇನ್ನು ... (ನಗುತ್ತಾ) ರಾಕ್ಷಸೀನ ಹೇಗೆ ನೋಡಲಿ?

ಮೋಹನ : ಹಾಗಲ್ಲ ಅಜ್ಜಿ. ಈ ನಮ್ಮ ಗೆಳೆಯ ಈಗ ಸ್ವಲ್ಪ ಹೊತ್ತಿನ ಮೊದಲು, ಇದೇ ಸ್ಥಳದಲ್ಲಿ ಒಬ್ಬ ವಿಕಾರ ರೂಪದ ರಾಕ್ಷಸೀನ ಕಂಡನಂತೆ. ಆ ರಾಕ್ಷಸೀ ನೋಡೋಕೆ ಅಂತ ನಾವೆಲ್ಲರೂ ಬಂದರೆ, ಇಲ್ಲಿ ರಾಕ್ಷಸಿ ಬದಲು ನೀನು ಇದ್ದೀಯ. ಅದಕ್ಕೆ ನೀ ಏನಾದರೂ, ಆಕೇನ ಕಂಡೆಯಾ ಅಂತ ಕೇಳಿದ್ದು.

ಮುದುಕಿ : (ನಾಟಕೀಯವಾಗಿ...) ಎಲ್ಲಿ. ಯಾರಾರು ಆ ರಾಕ್ಷಸೀನ ಮೊದಲು ನೋಡಿದವರು? ನೀನೆ ಏನೋ ಮುಂಡೇದೆ? (ರೂಪಸೇನನಿಗೆ) ರಾತ್ರಿ ಸರಿಯಾಗಿ ನಿದ್ರೆ ಮಾಡಿದ್ದಿಯೊ ಇಲ್ಲವೋ? (ಎಲ್ಲರೂ ನಗುವರು)

ರೂಪಸೇನ : (ಅವಮಾನಿತನಾಗಿ) ನಿದ್ದೇನೂ ಮಾಡಿದ್ದೆ, ಬುದ್ಧೀನೂ ನೆಟ್ಟಗಿತ್ತು. ಇಲ್ಲಿ ಏನೋ ನಡೆದಿದೆ. ನನಗಂತೂ ಏನೋ ಅನರ್ಥ ಆಗುತ್ತೆ ಅನ್ನಿಸುತ್ತೆ!

ಮುದುಕಿ : (ಅವನ ಕಿವಿ ಹಿಂಡುತ್ತಾ) ಅಯ್ಯೋ ಮುಂಡೇದೇ.? ನಿನಗೇನು ಹುಚ್ಚೇ? ರಾಮರಾಜ್ಯದೊಳಗೆ ರಾಕ್ಷಸಿ ಬರ್ತಾಳೇನೋ? ಹೋಗಿ ದೊಡ್ಡವರ ಮುಂದೆ ಹೀಗೆ ಹೇಳಬೇಡ, ನಗ್ತಾರೆ. ತಿಳೀತೇ? (ತಲೆಯಾಡಿಸುವಳು)

ವಸುಂಧರೆ : ಇಲ್ಲ ಅಜ್ಜಿ, ಇಲ್ಲಿ ಏನೋ ವಿಚಿತ್ರ ನಡೆದಿರಲೇಬೇಕು. ಇಲ್ಲದೇ ಇದ್ದರೆ ನಮ್ಮ ಜೊತೆಗೇ ಆಟ ಆಡುತ್ತಿದ್ದವನು ಇಷ್ಟೊಂದು ಹೆದರಲು ಕಾರಣವೇ ಇಲ್ಲ.

ಮುದುಕಿ : ಅಯ್ಯೋ ಮಕ್ಕಳಿರಾ, ನಿಮಗೆಲ್ಲೋ ಭ್ರಾಂತಿ ಅಷ್ಟೆ. ಇದಕ್ಕೆಲ್ಲ ತಲೆ ಕೆಡಿಸಿಕೊಳ್ಳದೇ ನಿಮ್ಮ ಪಾಡಿಗೆ ನೀವು ಆಡಿಕೊಳ್ಳಿ. ಹೋಗಿ, ನಿಮಗೆ ಯಾಕೆ ರಾಕ್ಷಸಿಯ ವಿಚಾರ (ತನ್ನಲ್ಲೇ ನಗುವಳು)

ಮೋಹನ : ಅದೂ ಸರಿಯೆ. ನಡೆಯಿರೋ ಹೋಗೋಣ. ಒಂದೂ ಅರ್ಥವೇ ಆಗ್ತಿಲ್ಲ.

(ಮಕ್ಕಳು ತಮ್ಮ ತಮ್ಮಲ್ಲಿಯೇ ಮಾತಾಡಿಕೊಳ್ಳುತ್ತಾ ಹೊರಡುತ್ತಾರೆ. ಮುದುಕಿ ಅವರನ್ನೇ ಗಮನಿಸುತ್ತಾಳೆ. ಅವರೆಲ್ಲರೂ ಹೊರಟು ಹೋಗುತ್ತಿದ್ದಾಗ, ಅವರನ್ನು ಕರೆಯುತ್ತಾ)

ಮುದುಕಿ : ಮಕ್ಕಳೇ ಇಲ್ಲಿ ಬನ್ನಿ; ನೀವೆಲ್ಲಾ ರಾಮರಾಜ್ಯದ ಜಾಣ ಮಕ್ಕಳಲ್ಲವೆ? ಹೀಗೆ ಬಡವಿಯಾದ ಮುದುಕಿಯನ್ನು ಏಕಾಂಗಿಯಾಗಿ ಬಿಟ್ಟು, ಆಕೆಗೆ ಸಹಾಯ ಮಾಡದೇ ನಿಮ್ಮ ಪಾಡಿಗೆ ನೀವು ಹೊರಟು ಹೋಗುವುದು ತಪ್ಪಲ್ಲವೇ?

ವಸುಂಧರೆ : ಏನಜ್ಜೀ. ನಮ್ಮಿಂದ ಏನಾದರೂ ಸಹಾಯ ಬೇಕಿತ್ತೇ?

ಮುದುಕಿ : ಹೌದು ಮಗಳೇ, ನನಗೆ ನಿಮ್ಮಿಂದ ಒಂದು ಸಹಾಯವಾಗಬೇಕಿತ್ತು...

ಅಂಬಿಕ : ಹೇಳಜ್ಜಿ. ನಿನಗೆ ನಮ್ಮಿಂದ ಯಾವ ಸಹಾಯ ಬೇಕು?

ಮುದುಕಿ : ಮಗೂ.. ನಾನು ಮಿಥಿಲಾ ನಗರದಿಂದ ಬಂದಿದ್ದೇನೆ. ನನಗೆ ನಿಮ್ಮ ಅರಸಿಯಾದ ಸೀತಾದೇವಿಯನ್ನು ಕಾಣಬೇಕಾಗಿದೆ. ಅವಳನ್ನು ಭೇಟಿ ಮಾಡಿಸುತ್ತಿರಾ?

ಮೋಹನ : ಅಜ್ಜೀ, ನಾವು ಬೇಕಾದರೆ ಅರಮನೆಗೆ ದಾರಿ ತೋರಿಸಬಹುದು, ಆದರೆ ಅರಮನೆಯ ಒಳಗೆ ಹೋಗಲು, ಕೊತವಾಲರ ಪರವಾನಗಿ ಬೇಕಂತೆ.

ಮುದುಕಿ : ಆ ಪರವಾನಗಿ, ನನಗೆ ಎಲ್ಲಿಂದ ಸಿಗಬೇಕೋ ಮಗೂ? ನೀವೇ ಏನಾದರೂ ಮಾಡಿ ಸೀತೆಯ ಭೇಟಿ ಮಾಡಿಸಿದರೆ ನಿಮ್ಮ ಉಪಕಾರವನ್ನು ಎಂದಿಗೂ ಮರೆಯೋಲ್ಲ.

ವಿಶ್ವ : ಅದೆಲ್ಲಾ ಆಗೋಲ್ಲ ಅಜ್ಜಿ; ಈ ದಿನ ಶ್ರೀರಾಮ ಬೇರೆ ಊರಲಿಲ್ಲವಂತೆ. ಅರಮನೆಯೊಳಗೆ ಇವತ್ತಂತೂ ಯಾರನ್ನೂ ಬಿಡೋದಿಲ್ಲ.

ಜಯಂತಿ : ಹಾಗೆಲ್ಲ ಮಾತಾಡಬಾರದು ವಿಶ್ವ, ವೃದ್ಧರಿಗೆ ನಮ್ಮಿಂದ ಸಾಧ್ಯವಾಗುವ ಎಲ್ಲಾ ಸಹಾಯ ಮಾಡಬೇಕು ಎಂದು.... ಗುರುಗಳು ಹೇಳಿದ್ದನ್ನು ಮರೆಯ ಬಾರದು. ನಮ್ಮ ಕೈಲಾದ ಸಹಾಯ ಮಾಡೋಣ.

ಲೋಕ : ನಮ್ಮ ಕೈಲಾದ ಸಹಾಯ ಅಂದರೆ ಏನು ಮಾಡುವುದು? ಅರಮನೆಯ ದ್ವಾರಪಾಲಕರಂತೂ ಬಹಳ ಕಠಿಣ ಮನಸ್ಸಿನವರು. ನಾವು ಹತ್ತಿರ ಹೋದರೆ ನಮಗೇ ಗದರುತ್ತಾರೆ.

(ಇದುವರೆಗೂ ಮಕ್ಕಳ ಮಾತನ್ನು ಕೇಳುತ್ತಿದ್ದ ಮುದುಕಿ ಒಮ್ಮೆಲೇ ಬೇಸರದಿಂದ)

ಮುದುಕಿ : ಹೋಗಲಿ ಬಿಡಿ, ಮಕ್ಕಳೇ, ನಿಮ್ಮಿಂದ ಸಾಧ್ಯವಾಗದಿದ್ದರೆ ಬೇಡ. ಏನೋ ರಾಮರಾಜ್ಯದ ಜಾಣ ಮಕ್ಕಳೂ, ವೃದ್ಧೆಯ ಬಗ್ಗೆ ಕನಿಕರ ತೋರಿಸು ತ್ತಾರೇನೋ ಅಂತ ಕೇಳಿದೆ.

ಚಂದ್ರಸೇನ : ಬೇಸರ ಬೇಡ ಅಜ್ಜಿ. ನಿಜ. ನಾವು ರಾಮರಾಜ್ಯದ ಜಾಣ ಮಕ್ಕಳು. ನಿನ್ನಂತಹವರಿಗೆ ಖಂಡಿತಾ ಸಹಾಯ ಮಾಡುತ್ತೇವೆ. ಯೋಚಿಸಬೇಡ. ಏನಾದರೂ ಉಪಾಯ ಹೂಡುತ್ತೇವೆ.

(ಎಲ್ಲರೂ ಯೋಚನೆ ಮಾಡುತ್ತಾರೆ; ಕೊನೆಗೆ ಚಂದ್ರಸೇನ ಎಲ್ಲರನ್ನೂ ಹತ್ತಿರ ಕರೆಯು ತ್ತಾನೆ; ಮಕ್ಕಳು ಪರಸ್ಪರ ಚರ್ಚೆ ನಡೆಸುತ್ತಾರೆ. ಕೊನೆಗೆ ಏನೋ ನಿರ್ಧಾರಕ್ಕೆ ಬಂದು ಸಂತೋಷದಿಂದ ಅಜ್ಜಿಯ ಸುತ್ತಲೂ ಕುಣಿಯತೊಡಗುತ್ತಾರೆ)

ಮೋಹನ : ನಡೆ ಅಜ್ಜಿ, ಇದೀಗ ನಿನಗೆ ಸೀತಾದೇವಿಯನ್ನು ಭೇಟಿ ಮಾಡಿಸುವ ಉಪಾಯ ಹೂಡುತ್ತೇವೆ. ನಿರಾಶಳಾಗಬೇಡ. ನಮ್ಮ ಜೊತೆಗೆ ಬಾ.

(ಮಕ್ಕಳು ಅಜ್ಜಿಯ ಜೊತೆ ಹೊರಡುತ್ತಾರೆ. ಕೆಲವರು ಹಿಂದೆ, ಕೆಲವರು ಮುಂದೆ. ಅಜ್ಜಿಯು ಮಕ್ಕಳು ನೋಡದಿದ್ದಾಗ ನೆಟ್ಟಗೆ ನಿಂತು ನಾಟಕೀಯವಾಗಿ ಅತ್ತ-ಇತ್ತ ನೋಡುತ್ತಾಳೆ. ಮಕ್ಕಳು ನೋಡಿದಾಗ ಬಗ್ಗಿ ನಡುಗುವಂತೆ ಅಭಿನಯಿಸುತ್ತಾಳೆ. ಮಕ್ಕಳು ತಮ್ಮ ತಮ್ಮಲ್ಲೇ ಚರ್ಚಿಸುತ್ತಾ ಕುಣಿಯುತ್ತಾ ಹೋಗುತ್ತಿರುತ್ತಾರೆ. ಹಿಮ್ಮೇಳದಲ್ಲಿ ಹಾಡು ಬರುತ್ತಿದೆ.)

ಬಾಗಿದ ಬೆನ್ನಿನ ಬಡವಿ ಮುದುಕಿ
ಬಂದಳು ಸೀತೆಯ ಅರಮನೆ ಹುಡುಕಿ

ಜೋಲುವ ಚರ್ಮ ನಡುಗುವ ಕಾಲು
ತಡವುತ ನಡೆವಳು ಹಿಡಿಯುತ ಕೋಲು

ಬಾಗಿದ ಬೆನ್ನಿನ ಬಡವಿ ಮುದುಕಿ
ಬಂದಳು ಸೀತೆಯ ಅರಮನೆ ಹುಡುಕಿ

ಬಾಗಿದೆ ಬೆನ್ನು ಕಾಣದು ಕಣ್ಣು
ಕೂದಲು ಬೆಳ್ಳಗೆ ಮಾಗಿದ ಹಣ್ಣು

ಬಾಗಿದ ಬೆನ್ನಿನ ಬಡವಿ ಮುದುಕಿ
ಬಂದಳು ಸೀತೆಯ ಅರಮನೆ ಹುಡುಕಿ

(ಮಕ್ಕಳು ಅಭಿನಯಿಸುತ್ತಾ ರಂಗವನ್ನು ಸುತ್ತಿ, ಒಳಗೆ ಹೋಗುತ್ತಿದ್ದಂತೆ ಕತ್ತಲು)

## ದೃಶ್ಯ – ೨

(ಅರಮನೆಯ ದ್ವಾರ, ದ್ವಾರಪಾಲಕರಿಬ್ಬರೂ ಅತ್ತ ಇತ್ತ ತಿರುಗುತ್ತಾ ಬಾಗಿಲು ಕಾಯುತ್ತಿರುತ್ತಾರೆ. ಇದ್ದಕ್ಕಿದ್ದಂತೆ ನಾಯಿ ಬೊಗಳುತ್ತದೆ. ಅತ್ತ ಹೋಗಿ ನೋಡಿದರೆ ಇಬ್ಬರು ಮಕ್ಕಳು. ಅವರನ್ನು ಹಿಂದಕ್ಕೆ ಕಳುಹಿಸುತ್ತಿದ್ದಂತೆ ಈ ಕಡೆಗೆ 'ಕತ್ತೆ' ಕಿರುಚುತ್ತದೆ. ಹೋಗಿ ನೋಡಿದರೆ ಇಬ್ಬರು ಮಕ್ಕಳು. ಅವರನ್ನೂ ಆಚೆ ಕಳುಹಿಸುತ್ತಿದ್ದಂತೆ ಇನ್ನಿಬ್ಬರು ಬೆಕ್ಕಿನಂತೆ ಮೆಲ್ಲಗೆ, ಅಂಬೆಗಾಲಿಟ್ಟು ಒಳನುಗ್ಗುತ್ತಿರುತ್ತಾರೆ. ಅಲ್ಲಿಗೆ ಹೋದರೆ ಬೆಕ್ಕಿನಂತೆ ಕೂಗುತ್ತಾ ಓಡುತ್ತಾರೆ. ಹೀಗೆ ಮಕ್ಕಳು ಬೇರೆ ಬೇರೆ ಉಪಾಯಗಳಿಂದ ಒಳಗೆ ಹೋಗಲು ಪ್ರಯತ್ನಿಸುವುದು, ದ್ವಾರಪಾಲಕರು ತಡೆಯುವುದು, ನಡೆಯುತ್ತಲೇ ಇರುತ್ತದೆ.

ಒಂದು ಗುಂಪು ಈ ರೀತಿ ಒಳಗೆ ನುಗ್ಗಲು ಪ್ರಯತ್ನಿಸಿದರೆ, ಇನ್ನೊಂದು ಗುಂಪಿನ ಮಕ್ಕಳು ಒಬ್ಬೊಬ್ಬರಂತೆ ದ್ವಾರದ ಎದುರು, ಒಂದು ಬದಿಗೆ ಗುಂಪುಗೂಡುತ್ತಾರೆ. ಹಿಮ್ಮೇಳದ ಹಾಡಿಗೆ ನರ್ತಿಸುತ್ತಾರೆ. ದ್ವಾರಪಾಲಕರೊಡನೆ ಮೋಜು ಮಾಡುತ್ತಾರೆ. ಇವರು ಹೀಗೆ ಮಾಡುತ್ತಿದ್ದಾಗ, ಕೆಲವರು ಮೆಲ್ಲಗೆ ನುಗ್ಗಲು ಪ್ರಯತ್ನಿಸಿ ಸಿಕ್ಕಿಬೀಳುತ್ತಾರೆ. ಈ ತರಹ ಒಂದು ಉತ್ಸಾಹದ ವಾತಾವರಣ. ದ್ವಾರಪಾಲಕರು ಮಕ್ಕಳು ತಮಾಷೆಗೆ ಹೀಗೆ ಮಾಡುತ್ತಿದ್ದಾರೆಂದು ತಿಳಿದಿರುತ್ತಾರೆ.)

ಎಲ್ಲರೂ : ಮಾವ, ಮಾವ, ಮಾವಯ್ಯ
ಸುಮ್ಮನೆ ನಿಂತರೆ ಹೇಗಯ್ಯ

ಒಬ್ಬಳು : ಕೊಬ್ಬರಿ ಬೆಲ್ಲ ಕೊಡಲೇ ಇಲ್ಲ
ಹಬ್ಬದ ಹೋಳಿಗೆ ತರಲೇ ಇಲ್ಲ

ಇನ್ನೊಬ್ಬಳು : ಅರಮನೆ ಬಾಗಿಲು ಕಾಯುವೆಯಂತೆ
ಅರಸಗೆ ಮುಜುರೆ ಮಾಡುವೆಯಂತೆ

ಮತ್ತೊಬ್ಬ : ಮಕ್ಕಳ ಕಂಡರೆ ಅಕ್ಕರೆಯಂತೆ
ನಕ್ಕರೆ ಮಕ್ಕಳು ಸಕ್ಕರೆಯಂತೆ

(ಮತ್ತೊಮ್ಮೆ ಎಲ್ಲರೂ ಕುಣಿಯುತ್ತಾರೆ)

ಎಲ್ಲರೂ : ಮಾವ, ಮಾವ, ಮಾವಯ್ಯ
ಸುಮ್ಮನೆ ನಿಂತರೆ ಹೇಗಯ್ಯ

ಕೊಬ್ಬರಿ ಬೆಲ್ಲ ಕೊಡಲೇ ಇಲ್ಲ
ಹಬ್ಬದ ಹೋಳಿಗೆ ತರಲೇ ಇಲ್ಲ

ಅರಮನೆ ಬಾಗಿಲು ಕಾಯುವೆಯಂತೆ
ಅರಸಗೆ ಮುಜುರೆ ಮಾಡುವೆಯಂತೆ

ಮಕ್ಕಳ ಕಂಡರೆ ಅಕ್ಕರೆಯಂತೆ
ನಕ್ಕರೆ ಮಕ್ಕಳು ಸಕ್ಕರೆಯಂತೆ

(ರಂಗದ ಒಂದು ಬದಿಯಿಂದ ಅಜ್ಜಿ ನಿಧಾನವಾಗಿ ಪ್ರವೇಶ ಮಾಡುತ್ತಾಳೆ)

ಬಂದಳು ಅಜ್ಜಿ ತಂದಳು ಬಜ್ಜಿ
ತಿಂದರೆ ಮೈಕೈ ತುಂಬಿತು ಕಜ್ಜಿ
ನಡುಗುತ ನಡುಗುತ ಬರುತಿಹ ಅಜ್ಜಿಗೆ
ಕುಡಿಸುವ ಬನ್ನಿರಿ ಕಡಾಯಿ ಮಜ್ಜಿಗೆ

(ಬೇಕೆಂದೇ ಹೆಚ್ಚು ಗಲಾಟೆಯಾಗುವಂತೆ ಕುಣಿಯುತ್ತಾರೆ. ದ್ವಾರಪಾಲಕರು ನೋಡುತ್ತಾ ನೋಡುತ್ತಾ ಕೊನೆಗೆ ಗದ್ದಲ ವಿಪರೀತವಾದಾಗ)

ದ್ವಾರ ಪಾಲಕ : ಏ. ಮಕ್ಕಳಾ, ಯಾಕೆ ಹಾಗೆ ಗದ್ದಲ ಮಾಡ್ತೀರಿ? ಅರಮನೆಯೆದುರು ಹೆಚ್ಚು ಗದ್ದಲ ಮಾಡಬಾರದು ಎಂದು ತಿಳಿಯದೇ ನಿಮಗೆ?

ಜಯಂತಿ : ಹಾಗಲ್ಲ ಮಾಮ; ಇಲ್ಲಿ ನೋಡಿ ಒಬ್ಬಳು ಅಜ್ಜಿ ಬಂದಿದ್ದಾಳೆ. ಅವಳು ಮಿಥಿಲಾ ನಗರದಲ್ಲಿ ಮಕ್ಕಳು ಆಡುವ ಹೊಸ ಆಟ ಹೇಳಿಕೊಟ್ಟಿದ್ದಾಳೆ. ಅದನ್ನು ನಾವೀಗ ಆಡುತ್ತಿದ್ದೇವೆ.

ದ್ವಾರ ಪಾಲಕ : ಹೊಸ ಆಟ ಬೇಕಾದರೂ ಆಡಿ; ಹಳೆ ಆಟ ಬೇಕಾದರೂ ಆಡಿ ಆದರೆ ಇಲ್ಲಿ ಹೆಚ್ಚಿಗೆ ಗದ್ದಲ ಮಾಡಬೇಡಿ. ಅಷ್ಟೆ.

ಮೋಹನ : ಹಾಗೆ ಒಂದು ವಿಚಾರ ಮಾಮ. ಈ ಅಜ್ಜಿಗೆ ತಾಯಿ ಸೀತಾದೇವಿಯನ್ನು ನೋಡಬೇಕಂತೆ. ಅದಕ್ಕೇ...

ದ್ವಾರ ಪಾಲಕ : ಅದಕ್ಕೆ ಏನಾಗಬೇಕು? ಅರಮನೆಯ ಒಳಗೆ ಹೋಗಲು ಗುರುತಿನ ಚೀಟಿ ತಂದರಾಯಿತು. ಅದಕ್ಕೆಂದು ಮಕ್ಕಳು ಗದ್ದಲ ನಡೆಸಬೇಕೇನು?

ರೂಪಸೇನ : ಪಾಪ! ಅಜ್ಜಿ ದೂರದಿಂದ ನಡೆದು ಬಂದಿದ್ದಾಳಂತೆ. ಇನ್ನು ಪರವಾನಗಿ, ಗುರುತಿನ ಚೀಟಿ ಅಂತ ಎಷ್ಟು ಅಲೆಯಬೇಕೋ? ಅದಕ್ಕೆ ದಯಮಾಡಿ...

ದ್ವಾರ ಪಾಲಕ : ದಯಮಾಡಿ ಎನು ಮಾಡಬೇಕು? ನೀವು ಎಷ್ಟು ಹೇಳಿದರೂ ಕೊತವಾಲರ ಅಪ್ಪಣೆಯಿಲ್ಲದೆ ಯಾರನ್ನೂ ಬಿಡೋದಿಲ್ಲ.

ವಸುಂಧರೆ : ಹಾಗಲ್ಲ ಮಾಮ; ನಿಮ್ಮ ಕಾನೂನು ನಮಗೆ ತಿಳಿಯದೇ? ನಾನು ಕೊತವಾಲರ ಮಗಳೇ ತಾನೇ?

ಅಂಬಿಕ : ಹೌದು ಮಾಮ, ಇವರಪ್ಪನಿಗೆ ಇವಳನ್ನು ಕಂಡರೆ ತುಂಬಾ ಪ್ರೀತಿ. ಇವಳು ಹೇಳಿದರೇ...

ದ್ವಾರ ಪಾಲಕ : ಸರಿ ಮತ್ತೆ. ಸಮಸ್ಯೆ ಬಗೆ ಹರಿಯಿತಲ್ಲ. ಏ ಹುಡುಗಿ, ನೀನು ಇವಳನ್ನು ನಿಮ್ಮ ತಂದೆ ಹತ್ತಿರ ಕರೆದುಕೊಂಡು ಹೋಗಿ ಪರವಾನಗಿ ಕೊಡಿಸು.

ವಸುಂಧರೆ : ಹಾಗೇ ಮಾಡಬೇಕೆಂದಿದ್ದೆ ಮಾಮ; ಆದರೆ ಪಾಪ ಈ ಅಜ್ಜಿಗೆ ನಡೆಯುವುದಕ್ಕೆ ತ್ರಾಣವಿಲ್ಲ.

ದ್ವಾರ ಪಾಲಕ : ನೋಡಿ ಮಕ್ಕಳು ಮಕ್ಕಳ ಹಾಗೆ ಇರಬೇಕು. ಹೀಗೆ ದೊಡ್ಡವರ ವ್ಯವಹಾರದಲ್ಲಿ ತಲೆ ಹಾಕಬಾರದು. ಈ ಮುದುಕೀನ ನಾವು ವಿಚಾರಿಸಿಕೊಳ್ಳುತ್ತೇವೆ. ಈಗ ನೀವು ನಿಮ್ಮ ನಿಮ್ಮ ಮನೆಗಳಿಗೆ ನಡೆಯಿರಿ.

ಚಂದ್ರಸೇನ : (ಹೆದರುತ್ತ) ಹಾಗಲ್ಲ ಮಾಮ, ನಮ್ಮ ರಾಜ್ಯದಲ್ಲಿ ಮಕ್ಕಳಿಗೆ, ಮುದುಕರಿಗೆ ತುಂಬಾ ಗೌರವ ಕೊಡ್ತಾರೆ ಅಂತ ಹೇಳಿದ್ದೀವಿ. ಈಗ ನೀವು ಬಿಡದೆ ಇದ್ದರೆ ನಮ್ಮ ಮಾತು ಸುಳ್ಳಾಗುತ್ತಲ್ಲಾ ಅಂತ ಚಿಂತೆ.

ದ್ವಾರ ಪಾಲಕ : ನೋಡಿ, ನಿಮಗೆ ಇಂಥಾ ಚಿಂತೆಗಳೆಲ್ಲಾ ಬೇಡ. ಈಗ ನೀವುಗಳು ನಿಮ್ಮ ಮನೆಗಳಿಗೆ ಹೋಗ್ತೀರೋ ಇಲ್ಲಾ....?

ಮುದುಕಿ : ಹಾಗಲ್ಲಪ್ಪಾ, ನಾನು ಈ ಮಕ್ಕಳಿಗೆ ಹೇಳಿದೆ. "ಅರಮನೆ ದ್ವಾರಪಾಲಕರು ಹಾಗೆಲ್ಲ ಒಳಗೆ ಬಿಡೋಲ್ಲ" ಅಂತ. ಅದರೆ ಈ ಮುಂಡೇವು "ಇಲ್ಲ, ನಮ್ಮ ರಾಮರಾಜ್ಯದಲ್ಲಿ ಎಲ್ಲರಿಗೂ ಕರುಣೆ, ಪ್ರೀತಿ ಜಾಸ್ತಿ, ಅದರಲ್ಲೂ ಮುದುಕರನ್ನು ಕಂಡರೇ..." ಅಂದರು. ಹಾಗಾಗಿ ನಾನು ಬಂದೆನಪ್ಪಾ.

ಗಣೇಶ : ಹೌದು ಮಾಮ. ಈಗ ನೀವು ಬಿಡದೇ ಇದ್ದರೇ ನಮ್ಮ ಮಾತೂ ಸುಳ್ಳಾಗುತ್ತೆ. ನಿಮ್ಮ ಗೌರವಕ್ಕೂ...

ದ್ವಾರ ಪಾಲಕ : ಏನು? ಈ ಮುದುಕೀನ ಒಳಗೆ ಬಿಡದೇ ಇದ್ದರೆ ನಮ್ಮ ಗೌರವ ಏನಾಗುತ್ತೆ? ಏ ಹುಡುಗಾ, ಇದು ತಲೆಹರಟೆ ಮಾಡುವ ಸ್ಥಳವಲ್ಲ. ಎಲ್ಲರೂ ಮೊದಲು ಜಾಗ ಖಾಲಿ ಮಾಡಿ.

ಮೋಹನ : ಹಾಗಲ್ಲ ಮಾಮ, ನೀವು ಕೋಪ ಮಾಡಿಕೊಳ್ಳಬೇಡಿ. ನೀವು ಬೇಕಾದರೆ, ಸೀತಾದೇವಿಗೆ ಹೀಗೇ ಅಂತ ಹೇಳಿ, ಅವರು ಬೇಡವೆಂದರೆ... ಸರಿ.

ಜಯಂತಿ : ಹೌದು ಮಾಮ, ಸೀತಾದೇವಿಯವರು ಇಂಥಾ ವೃದ್ಧರಿಗೆ ಖಂಡಿತಾ ಕರುಣೆ ತೋರಿಸ್ತಾರೆ.

ಗಣೇಶ : ಹೌದು ಮಾಮ, ಅದಕ್ಕೆ ನಾವು ಅಜ್ಜಿಗೆ ಹೇಳಿದ್ದು ನೀವು ಒಳ್ಳೆಯವರೂ ಅಂತ.

ರೂಪಸೇನ : ದಯವಿಟ್ಟು ಕೇಳಿ ಬನ್ನಿ ಮಾಮ.

ದ್ವಾರ ಪಾಲಕ : (ಗದರುತ್ತಾ) ಸಾಧ್ಯವಿಲ್ಲ., ಸಾಧ್ಯವಿಲ್ಲ, ಸಾಧ್ಯವಿಲ್ಲ. ಈ ದಿನ ಶ್ರೀರಾಮಚಂದ್ರ ಪ್ರಭುಗಳು ಊರಿನಲ್ಲಿಲ್ಲ. ಅವರಿಲ್ಲದಾಗ ಅಪರಿಚಿತರನ್ನು ಬಿಡಲು ಸಾಧ್ಯವೇ ಇಲ್ಲ.

ಮಕ್ಕಳು : ಪಾಪ! ಮುದುಕಿ, ಬಿಡಿ ಮಾಮ.

(ಮಕ್ಕಳು ಮತ್ತೆ ಗದ್ದಲ ಮಾಡುತ್ತಾ ಕುಣಿಯತೊಡಗುತ್ತಾರೆ)

ಬಾಗಿದ ಬೆನ್ನು ಬಡವಿ ಮುದುಕಿ
ಬಂದಳು ಸೀತೆಯ ಅರಮನೆ ಹುಡುಕಿ
ಜೋಲುವ ಚರ್ಮ ನಡುಗುವ ಕಾಲು
ತಡವುತ ನಡೆವಳು ಹಿಡಿಯುತ ಕೋಲು

(ಮಧ್ಯದಲ್ಲಿ ದ್ವಾ. ಪಾ. ತಡೆಯುತ್ತಾರೆ. ಗದರುತ್ತಾರೆ. ಆದರೆ ಮಕ್ಕಳು ಇನ್ನೂ ಜೋರಾಗಿ ಹಾಡುತ್ತಾ ಕುಣಿಯುತ್ತಾರೆ.)

ಬಾಗಿದೆ ಬೆನ್ನು ಕಾಣದು ಕಣ್ಣು
ಕೂದಲು ಬೆಳ್ಳಗೆ ಮಾಗಿದ ಹಣ್ಣು
ಬಾಗಿದ ಬೆನ್ನಿನ ಬಡವಿ ಮುದುಕಿ
ಬಂದಳು ಸೀತೆಯ ಅರಮನೆ ಹುಡುಕಿ

(ಹಾಡುತ್ತಾ ಜೋರಾಗಿ 'ಸೀತಾಮಾತೆಯವರಿಗೆ ಜಯವಾಗಲೀ' ಎಂದು ಕಿರಿಚುತ್ತಾರೆ. ದ್ವಾರಪಾಲಕರು ಮಕ್ಕಳನ್ನು ಗದರಿಸಿ, ಹೊಡೆಯಲು ಬರುತ್ತಾರೆ. ಅದೇ ಸಮಯಕ್ಕೆ ಒಳಗಿನಿಂದ ದಾಸಿಯೊಬ್ಬಳು ಹೊರಗೆ ಬಂದು)

ದಾಸಿ : ದ್ವಾರಪಾಲಕ, ಏನಿದು ಗದ್ದಲ? ಸೀತಾಮಾತೆಯವರು ನಿನ್ನನ್ನು ಕರೆಯುತ್ತಿದ್ದಾರೆ.

(ದ್ವಾರಪಾಲಕ ಒಳಗೆ ಹೋಗುತ್ತಿದ್ದಂತೆ ಮಕ್ಕಳು ಆನಂದದಿಂದ ಕುಣಿಯುತ್ತಾ)

ಮಾವ, ಮಾವ, ಮಾವಯ್ಯ
ಸುಮ್ಮನೆ ನಿಂತರೆ ಹೇಗಯ್ಯ

ಕೊಬ್ಬರಿ ಬೆಲ್ಲ ಕೊಡಲೇ ಇಲ್ಲ
ಹಬ್ಬದ ಹೋಳಿಗೆ ತರಲೇ ಇಲ್ಲ

ಮಕ್ಕಳ ಕಂಡರೆ ಅಕ್ಕರೆಯಂತೆ
ನಕ್ಕರೆ ಮಕ್ಕಳು ಸಕ್ಕರೆಯಂತೆ

(ಅವರು ಕುಣಿಯುತ್ತಿದ್ದಂತೆ ದ್ವಾ. ಪಾ. ಒಳಗಿನಿಂದ ಬರುತ್ತಾನೆ)

ದ್ವಾರ ಪಾಲಕ : ಏ ಮಕ್ಕಳಾ, ಈ ಮುದುಕೀನೊಳಗೆ ಕಳುಹಿಸಿ ನೀವೆಲ್ಲರೂ ಅರಮನೆ ಚಾವಡಿಯಿಂದ ಸಿಹಿ ತಿಂಡಿ ತಿಂದು ಮನೆಗೆ ಹೋಗಬೇಕಂತೆ. ಇದು ಮಾತೆ ಸೀತಾದೇವಿಯವರ ಆಜ್ಞೆ. ಹುಂ ಹೊರಡಿ.

(ಮಕ್ಕಳು ಆನಂದದಿಂದ "ಸೀತಾಮಾತೆಯವರಿಗೆ ಜಯವಾಗಲೀ ಹೋ೬೬" ಎಂದು ಕಿರಿಚುತ್ತಾ ಓಡುತ್ತಾರೆ. ಮುದುಕಿ ಜಂಭದಿಂದ ಒಳಗೆ ಹೋಗುತ್ತಿದ್ದಂತೆ ರಂಗದಲ್ಲಿ ಕತ್ತಲೆ ಆವರಿಸುತ್ತದೆ.)

## ದೃಶ್ಯ – ೩

(ಅರಮನೆಯ ಅಂತಃಪುರದಲ್ಲಿ, ಸೀತೆ ಮಂಚದ ಮೇಲೆ ಕುಳಿತಿದ್ದಾಳೆ. ಪಕ್ಕದಲ್ಲಿ ಮುದುಕಿ ಕುಳಿತಿದ್ದಾಳೆ. ದಾಸಿ ಆಕೆಗೆ ಪಾನೀಯವನ್ನು ಕೊಡುತ್ತಾಳೆ. ಮುದುಕಿ ಅದನ್ನು ಕುಡಿಯುತ್ತಿದ್ದಂತೆ)

ಸೀತೆ : ಈಗ ಹೇಳು ತಾಯಿ, ಯಾರು ನೀನು?

ಮುದುಕಿ : ನನ್ನ ಗುರುತು ಮರೆತು ಹೋಯಿತೇ ಜಾನಕಿ? ನಾನು, ನಿನ್ನ ಸುನಂದೆ.

ಸೀತೆ : ನನ್ನ ಸುನಂದೆ!? ನಿನ್ನ ಮಾತು ನನಗೆ ಅರ್ಥವಾಗುತ್ತಿಲ್ಲ ತಾಯಿ.

ಮುದುಕಿ : ಅಯ್ಯೋ, ನೀನು ಮೂರು ವರುಷದ ಮಗು, ನಾನು ನಿನ್ನನ್ನು ಎತ್ತಿ ಮುದ್ದಾಡಿಸುತ್ತಿದ್ದೆ.

ಸೀತೆ : ಹಾಗಾದರೆ ನೀನು ಮಿಥಿಲೆಯ ಅರಮನೆಯ ದಾಸಿ ಸುನಂದೆಯೇನು!?

ಮುದುಕಿ : ನನ್ನ ಜಾನಕಿ (ಬೆರಳು ನಟಿಕೆ ಮುರಿದು ಆನಂದದಿಂದ) ಈಗಲಾದರೂ ಗುರುತಾಯಿತಲ್ಲ? ನಾನು ಯಾರೆಂದು?

ಸೀತೆ : (ಎದ್ದು ಆಕೆಯ ಭುಜ ಹಿಡಿದು) ದಯವಿಟ್ಟು ಕ್ಷಮಿಸು ಸುನಂದೆ, ಇಷ್ಟೊಂದು ವರ್ಷಗಳ ನಂತರ ನೋಡುತ್ತಿರುವುದರಿಂದ ನನಗೆ ಗುರುತೇ ಹತ್ತಲಿಲ್ಲ. ನನ್ನನ್ನು ಕ್ಷಮಿಸು.

ಮುದುಕಿ : (ಏನನ್ನೋ ನೆನಪಿಸಿಕೊಂಡವಳಂತೆ) ಜಾನಕೀ ಒಂದು ದಿನ ನಾನು ನಿನ್ನನ್ನು ತಲೆ ಮೇಲೆ ಹೊತ್ತಿಸಿಕೊಂಡು ಆಡಿಸುತ್ತಿದ್ದೆ. ಆಗ ನೀನು ಏನು ಮಾಡಿದೆ ಗೊತ್ತೆ!? (ನಗುತ್ತಾ)
ನನ್ನ ಮುಖ, ತಲೆಯ ಮೇಲೆಲ್ಲಾ...

(ನಗುವಳು, ಸೀತೆಯೂ ನಗುತ್ತಾಳೆ)

ಸುಳ್ಳಲ್ಲ ಜಾನಕಿ, ನೀನು ಮರೆತಿರಬಹುದು. ಆದರೆ ನನ್ನ ಮುದ್ದು ಸೀತೆಯನ್ನು ನಾ ಹೇಗೆ ಮರೆಯಲಿ? ಇನ್ನೂ ನನಗೆ ಆ ದಿನಗಳು ಹಸೀ ಹಸಿರು ನೆನಪು.

ಸೀತೆ : ಸರಿ ತಾಯಿ, ಈಗ ನೀನು ಎಲ್ಲಿರುವೆ? ಇಲ್ಲಿಗೆ ಹೇಗೆ ಬಂದೆ? ಇಷ್ಟು ದಿನ ನನ್ನ ಬಳಿ ಬರಲೇ ಇಲ್ಲವೇಕೆ?

ಮುದುಕಿ : ಏಕೆ ಬರಲಿಲ್ಲವೆಂದು ಹೇಳಲಿ ಸೀತಾ, ದಿನದಿನವೂ ನಿನ್ನ ಕತೆಯನ್ನು ಕೇಳುತ್ತಿದ್ದೆ. ನೀನು ಕಾಡಿಗೆ ಹೋಗಿದ್ದು, ಆ ದುಷ್ಟ ರಾವಣ ನಿನ್ನನ್ನು ಹೊತ್ತು ಒಯ್ದದ್ದು, ನೀನು ಅವನನ್ನು ಕೊಲ್ಲಿಸಿದ್ದು, ಎಲ್ಲವನ್ನೂ ಕೇಳುತ್ತಿದ್ದೆ. ಆದರೆ ನಿನ್ನನ್ನು ನೋಡುವ ಭಾಗ್ಯ ಒದಗಿರಲಿಲ್ಲ. ಈಗ ನಿರ್ಗತಿಕಳಾಗಿ ನಿನ್ನ ಬಳಿಗೆ ಬಂದಿದ್ದೇನೆ.

ಸೀತೆ : ಅಂದರೇ...

ಮುದುಕಿ : ಅಂದರೆ ಏನು ಹೇಳಲಿ ಮಗಳೇ... ನನ್ನ ಗಂಡ ತೀರಿದ ಮೇಲೆ ಮಕ್ಕಳು ನನ್ನನ್ನು ಮನೆಯಿಂದ ಆಚೆ ತಳ್ಳಿದರು.

ಸೀತೆ : ಅಯ್ಯೋ ಪಾಪ, ಮುಂದೆ...

ಮುದುಕಿ : ಮುಂದೇನೂಂತ ಹೇಳಲಿ ಮಗಳೇ. ಕಾಡು ಬಾ ಅನ್ನುತ್ತೆ. ಊರು ಹೋಗು ಅನ್ನುತ್ತೆ. ಹೇಗೋ ಜೀವ ಹಿಡಿದಿದ್ದೇನೆ (ಕಣ್ಣೊರೆಸಿಕೊಳ್ಳುತ್ತಾ) ಈಗ ನಿನ್ನನ್ನು ಕಂಡು ಜೀವನಕ್ಕೆ ಒಂದು ಮಾರ್ಗವನ್ನು ಕಂಡುಕೊಳ್ಳಲು ಬಂದೆ.

ಸೀತೆ : ಒಳ್ಳೆಯ ಕೆಲಸ ಮಾಡಿದೆ ತಾಯಿ, ಹೇಳು, ನಿನಗೇನು ಬೇಕು? ನನ್ನಿಂದ ಏನಾಗಬೇಕು.?

ಮುದುಕಿ : (ಅಳುತ್ತಾ) ಏನೂ ಅಂತ ಹೇಳಲಿ ಮಗಳೇ. ಎಲ್ಲವೂ ಆಗಬೇಕು. ಈಗ ನೀನೇ ನನಗೆ ದಿಕ್ಕು.

ಸೀತೆ : ಸರಿ ಸುನಂದೆ, ನಿನಗೆ ಜೀವನ ನಿರ್ವಹಣೆಗೆ ಒಂದಿಷ್ಟು ಹೊನ್ನು ಕೊಡುತ್ತೇನೆ. ಉಡಲು ವಸ್ತ್ರ ಕೊಡಿಸುತ್ತೇನೆ. ನಗರದ ಕೊತವಾಲರಿಗೆ ಹೇಳಿ ನಿನಗೆ ವಸತಿಗೆ ಏರ್ಪಾಡು ಮಾಡಿಸುತ್ತೇನೆ.

ಮುದುಕಿ : ಜಾನಕಿ, ನನಗೆ ಇವೆಲ್ಲವೂ ಬೇಡ. ನೀ ಕೊಟ್ಟ ಹೊನ್ನು ಎಷ್ಟು ದಿನ ಬಂದೀತು? ನೀ ಕೊಟ್ಟ ಉಡುಪನ್ನು ಎಷ್ಟು ದಿನ ತೊಟ್ಟೇನು? ಕೊನೆಗೆ, ಮತ್ತೆ ನಿನ್ನ ಬಳಿ ಬರಲೇಬೇಕಾಗುತ್ತದೆ. ನನಗೆ ಮತ್ತೆ ಮತ್ತೆ ನಿನ್ನನ್ನು ಕಾಣುವ, ಕೇಳುವ ಸಾಮರ್ಥ್ಯವಿಲ್ಲ ಮಗಳೇ.

ಸೀತೆ : ಹಾಗಾದರೆ... ನಾನೇನು ಮಾಡಲಿ ತಾಯಿ?

ಮುದುಕಿ : (ಅತ್ತ ಇತ್ತ ನೋಡಿ ಮೆಲ್ಲನೆ)
ನೀನು ಹೇಗೂ ರಾವಣನನ್ನು ನೋಡಿರುವೆಯಷ್ಟೆ?

ಸೀತೆ : ರಾವಣನನ್ನು? ನಾನು ಆ ದುಷ್ಟನ ಪಾದಕ್ಕಿಂತ ಹೆಚ್ಚು ಭಾಗವನ್ನು ನೋಡಿಯೇ ಇಲ್ಲ.

ಮುದುಕಿ : ತೊಂದರೆಯಿಲ್ಲ. ನೀನು ಅವನ ಪಾದವನ್ನಷ್ಟೇ ಮಣ್ಣಿನಿಂದ ನಿರ್ಮಿಸಿ ಕೊಡು. ನಾನು ಅದಕ್ಕೆ ಹೊಂದುವಂತೆ ಉಳಿದ ರೂಪ ನಿರ್ಮಿಸಿಕೊಳ್ಳುತ್ತೇನೆ.

ಸೀತೆ : (ಭಯದಿಂದ) ರಾವಣನ ಮೂರ್ತಿಯಿಂದ ನೀನೇನು ಮಾಡುವೆ?

ಮುದುಕಿ : (ಉತ್ಸಾಹದಿಂದ) ಆ ದುಷ್ಟ ರಾವಣನ ಮೂರ್ತಿ ಹಿಡಿದುಕೊಂಡು ಮನೆಮನೆಗೆ ಹೋಗುತ್ತೇನೆ. ಹೋದಲ್ಲಿ, ಬಂದಲ್ಲಿ, ಹತ್ತಾರು ಜನ ಕೂಡಿದಲ್ಲಿ, ಆ ದುಷ್ಟನ ಕತೆಯನ್ನು ಹೇಳುತ್ತೇನೆ. ಅವನು ನಿನಗೆ ಮಾಡಿದ ಅನ್ಯಾಯವನ್ನು ಮನ ಕರಗುವಂತೆ ವರ್ಣಿಸುತ್ತೇನೆ. ಅವರು ನೀಡಿದ ಭಿಕ್ಷೆಯಿಂದ ಜೀವನ ನಡೆಸುತ್ತೇನೆ.

ಸೀತೆ : ಸರಿ ಹಾಗಾದರೆ, ಸ್ವತಂತ್ರವಾಗಿ ಬದುಕುವ ನಿನ್ನ ಉದ್ದೇಶ ಒಳ್ಳೆಯದೇ. ಈಗಲೇ ನಾನು ನಿನಗೆ ಅವನ ಪಾದವನ್ನು ನಿರ್ಮಿಸಿಕೊಡುತ್ತೇನೆ. ದಾಸಿ, ಮೂರ್ತಿ ನಿರ್ಮಿಸಲು ಅಗತ್ಯವಾದ ಪರಿಕರಗಳನ್ನು ಕೊಂಡು ಬಾ.

(ದಾಸಿಯು ಒಳಗೆ ಹೋಗಿ ಎತ್ತರವಾದ ಬುಟ್ಟಿಯೊಂದನ್ನು ಹೊತ್ತು ತರುತ್ತಾಳೆ. ಸೀತೆ ಅದರಿಂದ ಪಾದವನ್ನು ನಿರ್ಮಿಸಿದಂತೆ ಅಭಿನಯಿಸುತ್ತಾಳೆ. ಅದನ್ನು ಮುದುಕಿಗೆ ನೀಡುತ್ತಾಳೆ. ಮುದುಕಿ ಅದರಿಂದ ರಾವಣನ ಮೂರ್ತಿ ನಿರ್ಮಿಸಿದಂತೆ ಅಭಿನಯಿಸುತ್ತಾಳೆ. ಬುಟ್ಟಿಯಲ್ಲಿದ್ದ ರಾವಣ ವೇಷದ ಗೊಂಬೆಯನ್ನು (ಹುಡುಗ) ಎತ್ತಿ ಸೀತೆಯ ಎದುರು ಮಲಗಿಸುತ್ತಾಳೆ. ಸೀತೆ ಅದನ್ನು ನೋಡಿ ಆಶ್ಚರ್ಯ ವ್ಯಕ್ತಪಡಿಸುತ್ತಾ, ಅದರ ಕೈಕಾಲು ಮುಖಗಳನ್ನು ಪರೀಕ್ಷೆ ಮಾಡುತ್ತಾಳೆ. ರಂಗದಲ್ಲಿ ಮೇಲಿನ ಕ್ರಿಯೆಗಳು ನಡೆಯುತ್ತಿದ್ದಾಗ ಹಿಮ್ಮೇಳದಲ್ಲಿ ಕೆಳಗಿನ ಹಾಡು ಬರುತ್ತಿರುತ್ತದೆ.)

ಹತ್ತು ತಲೆಯ ದುಷ್ಟ ದೈತ್ಯ ಲಂಕೇಶ ರಾವಣ
ಮತ್ತೆ ಗೊಂಬೆಯಾಗಿ ಹುಟ್ಟಿ–ಮಾಡಲೆಂದು ಹಗರಣ
ಮುಗ್ಧ ಸೀತೆ ಮಾಯೆಗೊಲಿದು ತನ್ನ ಕೇಡು ತನ್ನ ತಾನೆ
ತಂದುಕೊಳ್ಳತೊಡಗಿರಲು ಯಾರಿಗುಂಟು ಯಾರ ಹೊಣೆ?

ಸೀತೆ : ಸುನಂದೆ, ನೀನು ನಿಜವಾಗಿಯೂ ಒಬ್ಬ ಅದ್ಭುತ ಕಲಾವಿದೆ! ಎಷ್ಟು ಬೇಗ, ಎಷ್ಟು ಸುಂದರವಾಗಿ ಆ ದುಷ್ಟನ ಗೊಂಬೆಯನ್ನು ನಿರ್ಮಿಸಿಬಿಟ್ಟೆ!? ನಿಜಕ್ಕೂ ನೀನು ಅದ್ವಿತೀಯ ಕಲಾವಿದೆ! (ಗೊಂಬೆಯನ್ನು ಪರೀಕ್ಷಿಸಿ) ಆದರೆ... ಈ ದುಷ್ಟನಿಗೆ ಹತ್ತು ತಲೆಗಳಲ್ಲವೆ? ಮತ್ತೆ ಈ ಗೊಂಬೆ ರಾವಣನಿಗೆ ಒಂದೇ ತಲೆಯಿಟ್ಟಿರುವೆಯಲ್ಲಾ?

ಮುದುಕಿ : ಆ ದುಷ್ಟನಿಗೂ ಮೂಲದಲ್ಲಿ ಇದ್ದದ್ದು ಒಂದೇ ತಲೆ. ಆಮೇಲೆ ರಾಕ್ಷಸ ಮಾಯೆಯಿಂದ ಹತ್ತು ತಲೆ ನಿರ್ಮಿಸಿಕೊಂಡ. ನಾನು ಕಥೆ ಹೇಳುವಾಗ ಅದನ್ನೆಲ್ಲಾ ಜನರಿಗೆ ವಿವರಿಸುತ್ತೇನೆ. ಅವೆಲ್ಲ ದೊಡ್ಡ ತೊಂದರೆಗಳಲ್ಲ.. ಆದರೇಽ...

ಸೀತೆ : ಆದರೆ... ಏನು ಕೊರತೆ ಸುನಂದೆ?

ಸುನಂದೆ : (ಅತ್ತ ಇತ್ತ ನೋಡಿ ರಂಗವನ್ನು ನಿಧಾನವಾಗಿ ಒಂದು ಬಾರಿ ಸುತ್ತಿ)

ಸತ್ತ ಗೊಂಬೆಯನ್ನೆತ್ತಿ ಎಷ್ಟು ಆಡಿಸಿದರೂ
ಅರ್ಥವಾಗದು ಜನರಿಽಗೆ, ಎಲೆ ಜಾನಕಿ
ಇಷ್ಟವಾಗದು ಇವರಿಽಗೆ (ಪ್ರೇಕ್ಷಕರನ್ನು ತೋರಿಸುತ್ತಾ)

ಇತ್ತು ಪ್ರಾಣವ ಇದಕೆ ಕಷ್ಟವನು ಕಳೆ ತಾಯಿ
ಮತ್ತೆ ಮರೆಯೆನು ನಿನ್ನನು, ಎಲೆ ಜಾನಕಿ
ಬೊಂಬೆ ಪೊರೆವುದು ನನ್ನನು.

ಸೀತೆ : ಅಂದರೆ.....

ಮುದುಕಿ : ಅಂದರೆ ನಿನ್ನ ಪುಣ್ಯ ಪ್ರಭಾವದಿಂದ ಈ ಗೊಂಬೆಗೆ ಜೀವ ನೀಡಿದರೆ ಜೀವಂತ ಗೊಂಬೆಯನ್ನು ಆಡಿಸಿ ಜೀವನ ಕಳೆಯುತ್ತೇನೆ. ಜೀವಂತ ಗೊಂಬೆ ಕುಣಿಸುವುದರಿಂದ ಜನರಿಗೂ ಹೆಚ್ಚು ಸಂತೋಷವಾಗುತ್ತದೆ. ನಿನ್ನ ಕಥೆಯೂ ಜನಪ್ರಿಯವಾಗುತ್ತದೆ.

ಸೀತೆ : ಇದೆಂಥಾ ಕೋರಿಕೆ ಸುನಂದೆ? ನಾನು ನನ್ನ ಪುಣ್ಯದಿಂದ ಆ ದುಷ್ಟನನ್ನು ಮತ್ತೆ ಜೀವಂತಗೊಳಿಸಬೇಕೆ?

ಮುದುಕಿ : ನಾನೇನು ನಿಜವಾದ ರಾವಣನನ್ನು ಜೀವಂತಗೊಳಿಸಲು ಕೇಳು ತ್ತಿದ್ದೇನೆಯೇ? ಈ ಗೊಂಬೆಗೆ ಜೀವ ನೀಡಲು ಹೇಳಿದೆ. ಇದು ಹೇಗೂ ರಾವಣನಂತೆ ಹತ್ತುತಲೆ ಹೊತ್ತಿಲ್ಲವೆಂದು ಇದೀಗ ನೀನೇ ಹೇಳಿದೆಯಲ್ಲವೇ?

ಸೀತೆ : ಏನೇ ಆದರೂ ಇಂತಹ ವಿಚಿತ್ರ ಕೋರಿಕೆ ಈಡೇರಿಸಲು ನಾನು ಸಮರ್ಥಳಿಲ್ಲ ತಾಯಿ.

ಮುದುಕಿ : ಹೋಗಲಿ ಬಿಡು ತಾಯಿ... (ಅಳುತ್ತಾ) ಏನೋ ಎತ್ತಿ ಆಡಿಸಿದ ಮುದಿ । ಜೀವಕ್ಕೆ ಏನಾದರೂ ಆಸರೆ ನೀಡಬಹುದು ಎಂದುಕೊಂಡು ಬಂದೆ. ಆದರೆ ನೀನು... ನೀನು (ಜೋರಾಗಿ ಅಳುತ್ತಾ) ಹೋಗಲಿ ಬಿಡು. ಇನ್ನು ಈ ನಿರ್ಜೀವ ಗೊಂಬೆ ಇಟ್ಟುಕೊಂಡು ನಾನೇನು ಮಾಡಲಿ? ಬರಿ ನಿರ್ಜೀವ ಗೊಂಬೆ ಯಾದರೆ ನೀನೇಕೆ ಬೇಕು? ನಾನೇ ರೂಪಿಸುತ್ತಿದ್ದೆ.
ಇದು ನಿನ್ನ ಬಳಿಯೇ ಇರಲಿ. ಬಡ ಮುದುಕಿ ಇದ್ದರೇನು? ಸತ್ತರೇನು? (ಹೊರಡುತ್ತಾ) ನಿನ್ನಿಂದಲಾದರೂ ಬದುಕಿಗೆ ಒಂದು ಮಾರ್ಗ ಸಿಕ್ಕೀತೆಂದು ಬಂದೆ... ಆದರೆ ನನ್ನ ಹಣೆಯ ಬರಹ ನಿನಗೂ ಕರುಣೆ ಬರಲಿಲ್ಲ. ಸರಿ ತಾಯಿ, ಹೋಗಿ ಬರುತ್ತೇನೆ.

ಸೀತೆ : ಇದೆಂಥಾ ಸಂದಿಗ್ಧ ಪರಿಸ್ಥಿತಿ? ಎಂತಹಾ ವಿಚಿತ್ರ ಕೋರಿಕೆ? ದೇವರೇ ಇದರಿಂದ ಇನ್ನೊಂದು ಅನಾಹುತ ನಡೆಯಲಿಕ್ಕಿಲ್ಲ ತಾನೆ?

ಮುದುಕಿ : (ಹಿಂತಿರುಗಿ ಬರುತ್ತಾ) ಅಂದರೇ... ನಿನಗೆ ನನ್ನ ಮೇಲೆ ನಂಬಿಕೆ ಇಲ್ಲ, ಅಲ್ಲವೇ? ಈ ಮುದಿ ವಯಸ್ಸಿನಲ್ಲಿ, ನಾನೇ ಎತ್ತಿ ಆಡಿಸಿದ ನನ್ನ ಮುದ್ದು ಸೀತೆಗೆ ನಾನು ಕೇಡು ಬಗೆಯುತ್ತೇನೆಯೇ? ಹೋಗಲಿ ನನ್ನ ಈ ನಡುಗುವ ಕಾಲು, ಜೋಲುವ ಚರ್ಮ ನೋಡು. ನನಗೆ ಅಂತಹ ಶಕ್ತಿ ಇದೆಯೆನ್ನಿಸು ತ್ತದೆಯೇ ನಿನಗೆ? (ಕೆಣಕುವಂತೆ) ಜಾನಕಿ, ಹೀಗೆಲ್ಲ ಮಾತನ್ನಾಡುವ ಬದಲು ಒಂದೇ ಮಾತಿನಲ್ಲಿ "ಏ ಬಡ ಮುದುಕಿ ನಿನಗೆ ಸಹಾಯ ಮಾಡಲು ನನಗೆ ಮನಸ್ಸಿಲ್ಲ" ಅನ್ನಬಾರದೆ?

ಸೀತೆ : (ಏನೋ ನಿರ್ಧಾರ ತೆಗೆದುಕೊಂಡವಳಂತೆ) ಕೋಪಿಸಿಕೊಳ್ಳಬೇಡ, ಸುನಂದೆ ಬಾ, ನನ್ನ ಹಣೆಯಲ್ಲಿ ಬರೆದಂತಾಗಲಿ. ಎಲ್ಲಿ ಆ ಗೊಂಬೆಯನ್ನು ಇತ್ತ ಕೊಡು.

(ಆ ಗೊಂಬೆಯನ್ನು ಬಲಗೈಯಿಂದ ಮುಟ್ಟಿ, ಎಡಗೈಯನ್ನು ತನ್ನೆದೆಯ ಮೇಲಿಟ್ಟುಕೊಂಡು ಧ್ಯಾನಿಸುವಳು. ಮುದುಕಿಯು ಆನಂದದಿಂದ ನೋಡುತ್ತಿರುವಂತೆಯೇ ಗೊಂಬೆ ನಿಧಾನವಾಗಿ ಬಾಯಿಯಾಡಿಸುತ್ತದೆ. ಕಣ್ಣು ಹೊರಳಿಸುತ್ತದೆ. ಕತ್ತು ತಿರುಗಿಸುತ್ತದೆ. ನಿಧಾನವಾಗಿ ಕೈ ಎತ್ತುತ್ತದೆ. ಕಾಲು ಜಾಡಿಸುತ್ತದೆ. ನಿಂತಲ್ಲಿಯೇ ಒಂದು ಬಾರಿ ಕುಪ್ಪಳಿಸುತ್ತದೆ. ಸೀತೆ ಅದನ್ನು ನೊಡುತ್ತಾ ಭಯ, ಆಶ್ಚರ್ಯ ವ್ಯಕ್ತಪಡಿಸುತ್ತಾಳೆ. ಗೊಂಬೆ ನಿಧಾನವಾಗಿ ಅತ್ತ ಇತ್ತ ನೋಡುತ್ತಾ ರಂಗದಲ್ಲಿ ಓಡಾಡಲು ಪ್ರಾರಂಭಿಸುತ್ತದೆ. ಸೀತೆ ಧ್ಯಾನಿಸುತ್ತಿದ್ದಾಗ ಹಿಮ್ಮೇಳದಲ್ಲಿ ಈ ರೀತಿ ಹಾಡು ಬರುತ್ತದೆ.)

ಒಬ್ಬರ ಬದುಕು ಸಾಗುವುದಾದರೆ
ನನ್ನಯ ಪುಣ್ಯದಿ ಆಗುವುದಾದರೆ
ದೇವರೇ ಗೊಂಬೆಗೆ ಜೀವವ ನೀಡು
ಮುದುಕಿಯ ಬದುಕಿಗೆ ದಾರಿಯ ಮಾಡು

ಸೀತೆ : ಸರಿ ಸುನಂದೆ, ನಿನ್ನ ಕೋರಿಕೆ ನೆರವೇರಿತಲ್ಲವೇ? ಇನ್ನು ನಡೆ, ಹೋಗಿ ನಿನಗೆ ಇಷ್ಟವಾಗುವಂತೆ ಬದುಕು ನಡೆಸು, ಹೋಗಿ ಬಾ ತಾಯಿ.

(ಸೀತೆ ಹಾಗೆ ಹೇಳುತ್ತಿದ್ದಂತೆ ಅಜ್ಜಿ ಮುಖವನ್ನು ಮೇಲೆತ್ತಿ ಸೀತೆಯತ್ತ ನೋಡುತ್ತಾಳೆ. ಬಗ್ಗಿದ ಸೊಂಟ ನೆಟ್ಟಗಾಗುತ್ತದೆ. ಕೈಕಾಲು ಸೆಟೆದು ನಿಲ್ಲುತ್ತಾಳೆ. ಕೈಯಲ್ಲಿದ್ದ ಕೋಲನ್ನು ಎತ್ತಿ ರಂಗದ ಮಧ್ಯಕ್ಕೆ ಎಸೆಯುತ್ತಾಳೆ. ರಂಗದಲ್ಲಿ ಬೆಳಕು–ಕತ್ತಲೆ ಮಿಂಚು ಹೊಡೆದಂತಾಗುತ್ತದೆ. ಗುಡುಗಿದ ಶಬ್ದ ಕೇಳಿಸುತ್ತದೆ. ಅಲ್ಲೋಲ ಕಲ್ಲೋಲವಾದಂತೆ ಅನ್ನಿಸುತ್ತದೆ. ಕತ್ತಲು ಮೂಡಿ ಬೆಳಕಾಗುವಷ್ಟರಲ್ಲಿ ಮುದುಕಿಯ ಜಾಗದಲ್ಲಿ ರಕ್ಕಸಿಯೊಬ್ಬಳು ನಿಂತು ಘರ್ಜಿಸುತ್ತಿರುತ್ತಾಳೆ. ಹಿಮ್ಮೇಳದಲ್ಲಿ ಚಂಡೆಯ ಸದ್ದು ತಾಂಡವವಾಡುತ್ತಿರುತ್ತದೆ. ರಕ್ಕಸಿ ವಿಕಾರವಾಗಿ ಯಕ್ಷಗಾನದ ರಾಕ್ಷಸರಂತೆ ಕೂಗುತ್ತಾ ರಂಗದಲ್ಲಿ ಕುಣಿಯುತ್ತಿರುತ್ತಾಳೆ.

ಶೂರ್ಪನಖಿ : (ಯಕ್ಷಗಾನದ ಧಾಟಿಯಲ್ಲಿ ಕೂಗುತ್ತಾ) ಹೋssss..... ಹೋssss.....

ಜಾನಕೀ ನೋಡು, ನೋಡು, ನೋಡು ನಿನ್ನ ಸುನಂದೆಯನ್ನು ಹ್ಹ ಹ್ಹ ಹ್ಹ ಹ್ಹ... ನೋಡು, ಗುರುತು ಸಿಕ್ಕಿತೆ ನಾನು ಯಾರೆಂದು?

(ಕುಣಿದು ಕೂಗಿ ಹತ್ತಿರ ಬರುತ್ತಿದ್ದಂತೆ ಸೀತೆ ನೆಲಕ್ಕುರುಳಿ ಬೀಳುತ್ತಾಳೆ)

ಓಹೋ... ನೀನೇ ಅಲ್ಲವೇ ಪರಮ ಪತಿವ್ರತಾ ಶಿರೋಮಣಿ! ಪತಿಭಕ್ತಿ ಪರಾಯಣಿ? ಹ್ಹ ಹ್ಹ ಹ್ಹ ಹ್ಹ...

ಅಂದು ನನ್ನವರೆಲ್ಲರಿಂದ ತುಂಬಿ ತುಳುಕುತ್ತಿದ್ದ ಸ್ವರ್ಣಲಂಕೆಯನ್ನು ಮಣ್ಣುಗೂಡಿಸಿದ ಮಾಟಗಾತಿ ನೀನೇ ಅಲ್ಲವೇ? ನನ್ನ ಅಣ್ಣಂದಿರನ್ನು, ಬಂಧು

ಬಾಂಧವರನ್ನು ಕೊಲ್ಲಿಸಿದವಳು ನೀನೇ ಅಲ್ಲವೇ? ನೀನೇ ಅಲ್ಲವೇ ನನ್ನ ಮೂಗು–ಮೊಲೆಗಳನ್ನು ಕೊಯ್ಸಿದವಳು?

ಅಂದಿನಿಂದ ಕುದಿಯುತ್ತಿದ್ದ, ಕಾಯುತ್ತಿದ್ದ ನನ್ನ ರಾಕ್ಷಸ ದ್ವೇಷ ಇಂದು ಕೈಗೂಡುತ್ತಿದೆ. ಇಂದಿಗೆ ನನ್ನ ಸೇಡು ಈಡೇರುತ್ತಿದೆ.

ಇದೋ ನೋಡು, ನಿನಗಾಗಿ ಸತ್ತ ನನ್ನಣ್ಣ ರಾವಣ ನಿನ್ನಿಂದಲೇ ಜೀವಂತವಾಗಿ ಇಲ್ಲಿ ನಿಂತಿದ್ದಾನೆ. ಇಲ್ಲಿದ್ದಾನೆ ನನ್ನ ಅಣ್ಣ ರಾವಣ, ಗೊಂಬೆ ರಾವಣ

(ವಿಕಟವಾಗಿ ನಕ್ಕು, ಗೊಂಬೆಯ ಹತ್ತಿರ ಕುಳಿತು)

ಅಣ್ಣಾ, ಗೊಂಬೆ ರಾವಣ, ಇದೋ ಇಲ್ಲಿದ್ದಾಳೆ. ನಿನ್ನ ಸ್ವರ್ಣಲಂಕೆಯನ್ನು ಬೆಂಕಿಗೆ ಆಹುತಿ ನೀಡಿದ ಪಾತಕಿ. ಇಲ್ಲಿದ್ದಾಳೆ. ನಿನ್ನ ಚಿತ್ತವಿಭ್ರಮಗೊಳಿಸಿ, ನಿನ್ನನ್ನು ಸಾವಿಗೆ ತಳ್ಳಿದ ಮಾಟಗಾತಿ ಜಾನಕಿ. ಓ ಜಾನಕೀ, ಇಗೋ ಇಲ್ಲಿ ಮತ್ತೆ ಬಂದಿದ್ದಾನೆ, ನಿನ್ನ ಮುಂದಿನ ಸುಖಜೀವನವನ್ನು ಹಾಳುಮಾಡುವುದಕ್ಕಾಗಿ ಈ ಗೊಂಬೆ ರಾವಣ. ನಿನ್ನನ್ನು ಮತ್ತೊಮ್ಮೆ ಕಾಡಿಗೆ ಅಟ್ಟುವ ಗೊಂಬೆ ರಾವಣ.

ಅನುಭವಿಸು, ಜಾನಕೀ ಅನುಭವಿಸು. ನಿನ್ನ ಗರ್ವಕ್ಕೆ ಪ್ರಾಯಶ್ಚಿತ್ತ; ನನ್ನ ಬಂಧುಗಳನ್ನು ಕೊಲ್ಲಿಸಿ ನನ್ನನ್ನು ಅನಾಥಳನ್ನಾಗಿ ಮಾಡಿದ್ದಕ್ಕೆ ಪ್ರಾಯಶ್ಚಿತ್ತ. ನಾನೇ ಪರಮಸುಂದರಿಯೆಂಬ ನಿನ್ನ ಹೆಮ್ಮೆಗೆ ಪ್ರಾಯಶ್ಚಿತ್ತ. ಜಾನಕೀ, ಇದೋ ಈ ಶೂರ್ಪನಖಿಯ ದ್ವೇಷದ ಜ್ವಾಲೆ ನಿನ್ನ ಜೀವನವನ್ನು ಹೇಗೆ ಸುಡುತ್ತದೆಯೆಂದು ನೋಡು, ಅನುಭವಿಸು, ನನ್ನ ರಾಕ್ಷಸ ದ್ವೇಷದ ಬೆಂಕಿಯ ಬಿಸಿಯನ್ನು...

(ವಿಕಟವಾಗಿ ನಕ್ಕು) ನಾನಿನ್ನು ಬರುತ್ತೇನೆ. ನಿನ್ನ ಜೀವನ ವೃಕ್ಷಕ್ಕೆ ಈ ಗೊಂಬೆ ರಾವಣ ಬೆಂಕಿಯಿಡಲಿದ್ದಾನೆ. ನೆನಪಿಡು, ಇದೇ ನನ್ನ ಸೇಡು, ಇದೇ ನನ್ನ ರಾಕ್ಷಸ ದ್ವೇಷ. ರಾಕ್ಷಸ ದ್ವೇಷ.

(ಕೂಗುತ್ತಾ, ಕುಣಿಯುತ್ತಾ ಇಡೀ ರಂಗದಲ್ಲಿ ತಾನೆ ತಾನಾಗಿ ವಿಜೃಂಭಿಸಿ ಹೋ ಎಂದು ಕಿರುಚುತ್ತಾ ಹೋಗುತ್ತಾಳೆ. ಅವಳು ಹೋದ ಮೇಲೆ ಕೂಡ ರಂಗದಲ್ಲಿ ಬಹಳಷ್ಟು ಹೊತ್ತು ಸ್ಮಶಾನ ಮೌನ ನೆಲೆಸಿರುತ್ತದೆ. ಗೊಂಬೆ ಒಂದು ಬದಿಯಲ್ಲಿ ನಿಂತಿರುತ್ತದೆ. ಶೂರ್ಪನಖಿ ಮಾಯವಾದ ಎಷ್ಟೋ ಸಮಯದ ನಂತರ... ದಾಸಿ ಒಳಗಿನಿಂದ ನೀರು ತಂದು, ಬಿದ್ದ ಸೀತೆಯ ಮೇಲೆ ಸಿಂಪಡಿಸುತ್ತಾಳೆ. ಅವಳನ್ನು ಹಿಡಿದು ಅಲ್ಲಾಡಿಸುತ್ತಾಳೆ. ಉಪಚರಿಸುತ್ತಾಳೆ.)

ಸೀತೆ : ದಾಸಿ, ಎಲ್ಲಿ ರಾಕ್ಷಸಿ? ಎಲ್ಲಿ ಆ ಶೂರ್ಪನಖಿ? ಎಲ್ಲಿ ಹೋದಳು?

ದಾಸಿ : ಆಕೆ ಘರ್ಜಿಸುತ್ತಾ ಹೊರಗೋಡಿ ಮಾಯವಾದಳು ತಾಯಿ

ಸೀತೆ : ಆಂ... ಹಾಗಾದರೆ ಆಕೆ ಹೋದಳೇ? (ತುಸು ಯೋಚಿಸಿ) ಆ ಗೊಂಬೆ ಎಲ್ಲಿ ಹೋಯಿತು ದಾಸಿ?

[ಸೀತೆ ಸುತ್ತಲೂ ಕಣ್ಣಾಡಿಸುತ್ತಿದ್ದಂತೆ ಮೂಲೆಯಲ್ಲಿ ಸುಮ್ಮನೆ ನಿಂತಿದ್ದ ಗೊಂಬೆ ಅಲ್ಲಿಂದಲೇ ನಗುತ್ತದೆ. ನಿಂತಲ್ಲಿಯೇ ಒಂದು ಬಾರಿ ಕುಪ್ಪಳಿಸುತ್ತದೆ. ಆಮೇಲೆ ನಿಧಾನವಾಗಿ ಹೆಜ್ಜೆಯನ್ನು ಎತ್ತಿಡುತ್ತಾ ಸೀತೆಯ ಕಡೆಗೆ ಬರುತ್ತದೆ. ಸೀತೆಯತ್ತ ಕೈ ಚಾಚುತ್ತದೆ. ಕೈ ತಟ್ಟಿ ನಗುತ್ತದೆ. ಹಿಮ್ಮೇಳದಲ್ಲಿ ಚಂಡೆಯ ಸದ್ದು ಬರುತ್ತಿರುತ್ತದೆ. ಗೊಂಬೆಯು ಚಂಡೆಯ ತಾಳಕ್ಕೆ ಸರಿಯಾಗಿ ಕುಣಿಯುತ್ತದೆ. ಸೀತೆ ಭಯದಿಂದ ಗೊಂಬೆಯನ್ನು ಹಿಡಿಯಲು ಹೋಗುತ್ತಾಳೆ. ದಾಸಿಯನ್ನು ಕರೆದು ಗೊಂಬೆಯನ್ನು ಹಿಡಿಯಲು ಹೇಳುತ್ತಾಳೆ. ಗೊಂಬೆ ಇಬ್ಬರಿಂದಲೂ ತಪ್ಪಿಸಿಕೊಂಡು, ಇಬ್ಬರನ್ನೂ ಕಾಡುತ್ತದೆ. ಸೀತೆ ಸುಸ್ತಾಗಿ ಮಂಚದಲ್ಲಿ ಕುಳಿತರೆ, ಮತ್ತೆ ಕೈ ತಟ್ಟಿ ಆಕೆಯನ್ನು ಗೊಂಬೆ ಕರೆಯುತ್ತದೆ. ಅವಳನ್ನು ಕಾಡುತ್ತದೆ. ಹಿಮ್ಮೇಳದಲ್ಲಿ ಹಾಡು ಬರುತ್ತದೆ.)

ಅತ್ತ ಇತ್ತ ಸುತ್ತ ಮುತ್ತ ನೋಡುತ್ತಿರು ಗೊಂಬೆ
ತಕ್ಕ ದಿಮ್ಮಿ ತಕ್ಕ ದಿಮ್ಮಿ ಕುಣಿಯುತ್ತಿರು ಗೊಂಬೆ
ಅಕ್ಕ ಪಕ್ಕ ಮೇಲೆ ಕೆಳಗೆ ಹಾರುತ್ತಿತ್ತು ಗೊಂಬೆ
ಚಿಕ್ಕಿಪಿಕ್ಕಿ ಚಿಕ್ಕಿಪಿಕ್ಕಿ ಚೀರುತ್ತಿತ್ತು ಗೊಂಬೆ

ಆಡುತ್ತಿತ್ತು ಓಡುತ್ತಿತ್ತು ನೋಡುತ್ತಿತ್ತು ಗೊಂಬೆ
ಒಳಗೆ ಹೊರಗೆ ಎದ್ದು ಬಿದ್ದು ಓಡುತ್ತಿತ್ತು ಗೊಂಬೆ
ಏಳ–ಬಿಡದೆ, ಕೂರ–ಬಿಡದೆ ಕಾಡುತ್ತಿತ್ತು ಗೊಂಬೆ
ತಟ್ಟಿ ಕೈಯ್ಯ, ಮುಟ್ಟಿ ಮೈಯ್ಯ ಆಡುತ್ತಿತ್ತು ಗೊಂಬೆ

ಮಲಗುತಿರಲು ಮಂಚದಿಂದ ದೂಡುತ್ತಿತ್ತು ಗೊಂಬೆ
ಹೋದರಲ್ಲಿ, ಬಂದರಿಲ್ಲಿ ಕಾಡುತ್ತಿತ್ತು ಗೊಂಬೆ
ಆಡುತ್ತಿತ್ತು ಓಡುತ್ತಿತ್ತು ನೋಡುತ್ತಿತ್ತು ಗೊಂಬೆ
ತಕ್ಕ ದಿಮ್ಮಿ ತಕ್ಕ ದಿಮ್ಮಿ ಕುಣಿಯುತ್ತಿತ್ತು ಗೊಂಬೆ

(ಹೀಗೆ ಗೊಂಬೆ ಸೀತೆಯನ್ನು ಕೂರಲೂ ಬಿಡದೆ, ನಿಲ್ಲಲೂ ಬಿಡದೆ, ಮಲಗಲೂ ಬಿಡದೆ ಕಾಡುತ್ತದೆ. ಸೀತೆ ಗೊಂಬೆಗೆ ಕೈ ಮುಗಿದು ಬೇಡುತ್ತಾಳೆ. ಕಾಲು ಹಿಡಿಯಲು ಹೋಗುತ್ತಾಳೆ. ಏನೇ ಆದರೂ ಗೊಂಬೆ ಆಕೆಯನ್ನು ಬಿಡದೆ ಕಾಡುತ್ತದೆ.

ಕೊನೆಗೆ ಸೀತೆ ದಾಸಿಯ ಸಹಾಯದಿಂದ ಒಂದು ದೊಡ್ಡ ಬುಟ್ಟಿಯನ್ನು ಗೊಂಬೆಯ ಮೇಲೆ ಬೋರಲು ಹಾಕುತ್ತಾಳೆ. ಗೊಂಬೆ ಸುಮ್ಮನಾಗುತ್ತದೆ. ಅದನ್ನು ಎತ್ತಿ ಮಂಚದ ಒಂದು ಬದಿಗೆ ತಂದು ನಿಲ್ಲಿಸುತ್ತಾರೆ. ಗೊಂಬೆ ಅದರೊಳಗೆ ಸುಮ್ಮನಿರುವುದನ್ನು ಕಂಡು ನೆಮ್ಮದಿಯ ನಿಟ್ಟುಸಿರು ಬಿಡುತ್ತಾರೆ. ಮಂಚದ ಮೇಲೆ ಆಕೆ ವಿಶ್ರಾಂತಿ ಪಡೆಯುತ್ತಿದ್ದಂತೆ ರಂಗದಲ್ಲಿ ಕತ್ತಲಾವರಿಸುತ್ತದೆ.)

## ದೃಶ್ಯ – ೪

(ಮತ್ತೆ ಉಪವನದ ದೃಶ್ಯ. ಹಲವಾರು ಮಕ್ಕಳು ಕುಳಿತು ತಮ್ಮ ತಮ್ಮಲ್ಲಿ ಮಾತನಾಡುತ್ತಿದ್ದಾರೆ. ರಂಗದಲ್ಲಿ ಬೆಳಕು ಮೂಡಿದಾಗ)

ಜಯಂತಿ : ನಾನು ನಿನ್ನೇನೆ ಹೇಳಿದೆ. ಹಾಗೆಲ್ಲಾ ಹಿಂದು–ಮುಂದು ನೋಡದೆ ಏನನ್ನೂ ಮಾಡಬಾರದು ಅಂತ. ಆದರೆ ನೀವುಗಳು ಕೇಳಲಿಲ್ಲ. ನಾವೇ ಬಹಳ ಸಾಹಸಿಗಳು ಅಂತ ಹೋದಿರಿ.

ಲೋಕರಾಜ : ನಾನು ಹೇಳಿದರೆ ನನಗೇ 'ಪುಕ್ಕಲು' ಅಂತ ಪಟ್ಟಕಟ್ಟಿದರು. ಪಾಪ! ಈಗ ಸೀತಾಮಾತೆಗೆ ಎಷ್ಟೊಂದು ದುಃಖ.

ಚಂದ್ರಸೇನ : ನನಗೆ ಆ ಮುದುಕಿಯನ್ನು ನೋಡಿದಾಗಲೇ ಅನುಮಾನ ಬಂತು. ಆಕೇನೇ ರಾಕ್ಷಸಿ ಇರಬಹುದು ಅಂತ.

ರೂಪಸೇನ : ಅನಿಸುತ್ತೆ, ಅನಿಸುತ್ತೆ. ಕಣ್ಣಾರೆ ರಾಕ್ಷಸಿಯನ್ನ ಕಂಡೆ – ಅಂತ ನಾನು ಹೇಳಿದರೆ ಎಲ್ಲರೂ ನಕ್ಕಿರಿ. ಈ ಗಣೇಶ ಕೂಡ "ಅಜ್ಜಿ ಕಥೆ ರಾಕ್ಷಸಿ" ಅಂತ ಹಾಸ್ಯ ಮಾಡಿದ. ನಾವು ನಿನ್ನೇನೇ ಹೋಗಿ ದೊಡ್ಡವರಿಗೆ ಹೇಳಿದ್ದರೆ – ಇಷ್ಟೊತ್ತಿಗೆ ಅವಳಿಗೆ ಒಂದು ಗತಿ ಕಾಣಿಸುತ್ತಿದ್ದರು.

ಅಂಬಿಕ : ರೂಪಸೇನ, ಈಗ ಗೊತ್ತಾದ ಮೇಲೆ ಹೇಳೋದು ಸುಲಭ. ಮೊದಲು ವಿಷಯ ತಿಳಿಯದೇ ಹೇಗೋ ಹೇಳ್ತೀಯಾ? ಈಗ ತಿಳೀತು, ಹೇಳುತ್ತಿದ್ದೀಯ ಅಷ್ಟೇ.

ಗಣೇಶ : ಆದರೆ ಏನು ಪ್ರಯೋಜನ – ಗೊಂಬೆ ರಾವಣ ಹುಟ್ಟಿದ ಮೇಲೆ

ಜಯಂತಿ : ಹುಟ್ಟಿದರೇನಾಯ್ತೋ. ಶ್ರೀರಾಮ ಪ್ರಭುಗಳು ಬಂದ ಮೇಲೆ ಆ ಗೊಂಬೆ ರಾವಣ ಉಳಿಯೋದಿಲ್ಲ.

ರೂಪಸೇನ : ಕೆಟ್ಟದನ್ನು ಸೃಷ್ಟಿ ಮಾಡೋದು ಸುಲಭ. ಆದರೆ ಅದನ್ನು ನಾಶ ಮಾಡೋದು ತುಂಬಾ ಕಷ್ಟ. ಅದರಲ್ಲೂ ರಾಕ್ಷಸರು ಮಾಯಾವಿಗಳು. ಅವರ ಎದುರು ಒಮ್ಮೊಮ್ಮೆ ಶ್ರೀರಾಮನಂಥವರೂ ನಿಸ್ಸಹಾಯರಾಗುತ್ತಾರೆ. ನಾನು ನಿನ್ನೇನೇ ಹೇಳಿದೆ ಏನಾದರೂ ಅನಾಹುತವಾಗಬಹುದೂ ಅಂತ, ಯಾರೂ ಕೇಳಲಿಲ್ಲ.

ಅಂಬಿಕ : ನಾವೇನು ಬೇಕೂ ಅಂತ ಮಾಡಿದೆವೇನೋ? ಏನೋ ಅಜ್ಜಿ, ಕೈಯ್ಯಲ್ಲಾಗ ದವಳೂ ಅಂತ ಸಹಾಯ ಮಾಡಿದಿವಿ. ಹೀಗಾಗುತ್ತೆ ಅಂತ ನಮಗೆ ಗೊತ್ತಿತ್ತಾ?

ಜಯಂತಿ : ಆದರೂ ನಾವು ಮಕ್ಕಳೂ ಅನ್ನೋದನ್ನು ಮರೆತು ದೊಡ್ಡವರಾಗಿ ನಡೆದು ಕೊಳ್ಳಬಾರದಿತ್ತು. ನಾವು ಆ ಮುದುಕಿಗೆ ಸಹಾಯ ಮಾಡದೇ ಇದ್ದಿದ್ದರೆ ಅವಳು ಅರಮನೆ ಒಳಗೆ ಹೋಗಲಿಕ್ಕೆ ಸಾಧ್ಯವಾಗ್ತಿರಲಿಲ್ಲ.

ಚಂದ್ರಸೇನ : ಏನು ಮಾಡೋಣ, ಏನೋ ಒಳ್ಳೆಯದಕ್ಕೇ ಅಂತ ಮಾಡಿದಿವಿ. ಆದರೆ ಅನಾಹುತ ಆಯ್ತು.

(ಅಷ್ಟರಲ್ಲಿ ಇನ್ನೂ ಕೆಲವು ಹುಡುಗರು, ಮೋಹನ, ವಿಶ್ವ, ವಸುಂಧರ ಬರುತ್ತಾರೆ)

ಮೋಹನ : ವಿಷಯ ಗೊತ್ತಾಯಿತೇನ್ರೋ? ನಿನ್ನೆ ರಾತ್ರಿ ಶ್ರೀ ರಾಮ ಅಯೋಧ್ಯೆಗೆ ಬಂದರಂತೆ!

ಜಯಂತಿ : ಬಂದು ಏನು ಮಾಡಿದರಂತೆ? ಗೊಂಬೆ ರಾವಣನನ್ನು...?

ವಿಶ್ವ : ಹೇಳೋದನ್ನು ಕೇಳಿ, ಶ್ರೀರಾಮ ದೂರದಿಂದ ಬಳಲಿ ಬಂದು ತಾಳ್ಮೆ ಕಳೆದು ಕೊಂಡಿದ್ದರಂತೆ. ಅರಮನೆಗೆ ಬಂದ ತಕ್ಷಣ ಒಂದಾದ ಮೇಲೊಂದು ಗಾಳಿಸುದ್ದಿ ಕಿವಿಗೆ ಬಿದ್ದಿತಂತೆ.

ಮೋಹನ : ಅರಮನೆಯ ಅಗಸನ ಹೆಂಡತಿ ಕೂಡ ಅರಮನೆಯಲ್ಲಿ ದಾಸಿಯಂತೆ. ಅವರಿಬ್ಬರಿಗೂ ಸೀತಾದೇವಿಯನ್ನು ಕಂಡರೆ ಆಗುತ್ತಿರಲಿಲ್ಲವಂತೆ. ಅವರು ಶ್ರೀರಾಮನಿಗೆ, ಸೀತೆ ರಾವಣನ ಗೊಂಬೆ ಮಾಡಿಕೊಂಡು, ಜೀವ ನೀಡಿ, ಅದರೊಡನೆ ಸರಸ ಆಡುತ್ತಾಳೆ ಅಂದರಂತೆ.

ವಿಶ್ವ : ಶ್ರೀರಾಮ ಹೋಗಿ ಸೀತಾದೇವಿಯನ್ನು ಭೇಟಿ ಮಾಡಿದರಂತೆ. ಅವರು ಮಾತನ್ನಾಡುತ್ತಿದ್ದಾಗ ಸೀತಾದೇವಿ ಮುಚ್ಚಿಟ್ಟ ಗೊಂಬೆ ಬುಟ್ಟಿಯ ಸಮೇತ ಕುಪ್ಪಳಿಸುತ್ತಾ ಎದುರಿಗೆ ಬಂದಿತಂತೆ. ಇದು ಏನೂ ಎಂದು ಕೇಳಿದಾಗ ಸೀತಾಮಾತೆ ಮಾತಾಡಲಿಲ್ಲವಂತೆ.

ಮೋಹನ : ಮೊದಲೇ ಇಲ್ಲಸಲ್ಲದ ಮಾತು ಕೇಳಿ ರೋಸಿ ಹೋಗಿದ್ದ ಶ್ರೀರಾಮ ಬುಟ್ಟಿಯ ಮುಚ್ಚಳ ತೆಗೆದರಂತೆ. ಅಲ್ಲಿ ರಾವಣನ ಗೊಂಬೆ ನೋಡಿ ಕೋಪದಿಂದ ಕಿಡಿಕಿಡಿಯಾದರಂತೆ.

ಅಂಬಿಕ : ಕಿಡಿಕಿಡಿಯಾಗಿ ಏನು ಮಾಡಿದರಂತೆ?

ವಿಶ್ವ : "ನೀನು ಸತ್ತ ರಾವಣನನ್ನು ಮತ್ತೆ ಗೊಂಬೆಯಾಗಿ ಸೃಷ್ಟಿಸಿ ಸಲ್ಲದ ಅನಾಹುತ ನಡೆಸಿದ್ದೀಯಾ, ಆದ್ದರಿಂದ ನಿನಗೆ ಶಿಕ್ಷೆಯಾಗಲೇಬೇಕು. ಅದಕ್ಕಾಗಿ ನೀನು ಮತ್ತೆ ಕಾಡಿಗೆ ಹೋಗಬೇಕು" ಎಂದರಂತೆ.

ಚಿನ್ಮಯ : ಅಂದರೆ, ಸೀತಾದೇವಿಗೆ ಮತ್ತೆ ವನವಾಸ ?

ಉಳಿದವರು : ಇದು ಬಹಳ ಅನ್ಯಾಯ. ಶ್ರೀರಾಮಚಂದ್ರ ಪ್ರಭುಗಳು ಹೀಗೆ ಮಾಡಬಾರದಾಗಿತ್ತು.

ಗಣೇಶ : ಅವೆಲ್ಲಾ ಸರಿ ಮೋಹನ; ಗೊಂಬೆ ರಾವಣನ ಕತೆ ಏನಾಯ್ತು?

ಮೋಹನ : ರಾಮ ಸೀತೆಯನ್ನು ಕಾಡಿಗೆ ಕಳುಹಿಸುವ ನಿರ್ಧಾರ ತೆಗೆದುಕೊಂಡಿದ್ದಕ್ಕೆ ಗೊಂಬೆ ಬಹಳ ಸಂತೋಷಪಟ್ಟು, ಅರಮನೆಯಲ್ಲಿ ಹಾವಳಿ ನಡೆಸತೊಡಗಿತಂತೆ. ಶ್ರೀರಾಮ ಅದನ್ನು ಕೊಲ್ಲಲು ಬಹಳ ಶ್ರಮ ಪಟ್ಟರಂತೆ. ಅದು ತಪ್ಪಿಸಿಕೊಂಡು ಇಡೀ ಅರಮನೆ ತುಂಬಾ ಓಡಾಡ್ತಂತೆ. ಆಮೇಲೆ ಶ್ರೀರಾಮ ಅದನ್ನು ಕೊಲ್ಲಲು ಕೋದಂಡಕ್ಕೆ ಮೊರೆ ಹೋಗಬೇಕಾಯ್ತಂತೆ.

(ಹಿನ್ನೆಲೆಯಲ್ಲಿ ಶ್ರೀರಾಮ ಗೊಂಬೆಯನ್ನು ಅಟ್ಟಿಸಿಕೊಂಡುಹೋಗಿ ಕೊಲ್ಲುವುದು ಕಂಡು ಬರುತ್ತದೆ.)

ಗಣೇಶ : ಅಂದರೆ 'ಗೊಂಬೆ ರಾವಣ ಸತ್ತ' ಅಂತಾಯ್ತು, ಸದ್ಯ

ಚಿನ್ಮಯ : ಮೋಹನ, ನನಗಂತು ಒಂದು ಅಪರಾಧಿ ಪ್ರಜ್ಞೆ ಕಾಡ್ತಾ ಇದೆ. ಇದರಲ್ಲಿ ನಮ್ಮದೂ ಹೊಣೆ ಇದೆ ಅಂತಾ ಅನ್ನಿಸ್ತಾ ಇದೆ.

ಜಯಂತಿ : ಹೌದು, ನಾವು ಮಾಡಿದ ತಲೆಹರಟೆಗೆ ಈಗ ಸೀತಾದೇವಿಗೆ ಮತ್ತೆ ವನವಾಸವಾಯ್ತು. ಖಂಡಿತ ನಾವು ದೊಡ್ಡವರ ವ್ಯವಹಾರದಲ್ಲಿ ತಲೆಹಾಕಬಾರದಿತ್ತು.

ಮೋಹನ : ನಿಜ ಜಯಂತಿ, ಆದರೆ ನಾವು ಒಳ್ಳೆಯದಾಗಲೀ ಅಂತ ಮಾಡಿದೆವು. ಅದು ಹೀಗೆ ಅನರ್ಥವಾಯ್ತು.

ವಸುಂಧರೆ : ನಮ್ಮನ್ನೆಲ್ಲಾ ತುಂಬಾ ಪ್ರೀತಿಸುತ್ತಿದ್ದ ಸೀತಾಮಾತೆಗೆ, ನಮ್ಮ ತಪ್ಪಿನಿಂದಲೇ ವನವಾಸವಾಯ್ತಲ್ಲಾ ಅನ್ನೋದೆ ನನ್ನ ಸಂಕಟ.

ವಿಶ್ವ : ಇದಕ್ಕೆ ನಾವು ಮಾತ್ರ ಹೊಣೆಯಲ್ಲ ವಸುಂಧರ, ಆ ರಾಕ್ಷಸರ ದ್ವೇಷ ಕೂಡ ಇದಕ್ಕೆ ಕಾರಣ.

ಅಂಬಿಕ : ಹೌದು, ದ್ವೇಷ ಯಾವತ್ತೂ ವಿನಾಶಕ್ಕೆ ಕಾರಣವಾಗುತ್ತೆ.

ಗಣೇಶ : ಅಂದರೆ ಇದಕ್ಕೆಲ್ಲಾ ಕಾರಣ ರಾಕ್ಷಸ ದ್ವೇಷ

ಚಿನ್ಮಯ : ಅಲ್ಲ ದ್ವೇಷವೆಂಬ ರಾಕ್ಷಸ

ಮೋಹನ : ಅದರ ಜೊತೆಗೆ ನಮ್ಮ ತಪ್ಪೂ ಸೇರ್ತು. ಜೊತೆಗೆ ಒಂದು ನೀತೀನೂ ತಿಳೀತು. ಅದೇನೆಂದರೆ, ಮಕ್ಕಳು ಮಕ್ಕಳ ಹಾಗೇ ಇರಬೇಕೂ ಅನ್ನೋದು.

ಎಲ್ಲರೂ : ಹೌದು ಹೌದು

(ಹೀಗೆ ಹೇಳುತ್ತಾ ಒಬ್ಬೊಬ್ಬರಾಗಿ ಕುಣಿಯುತ್ತಾ ಹಾಡುತ್ತಾರೆ)

ಮಕ್ಕಳು ಮಕ್ಕಳ ಹಾಗಿರಬೇಕು
ದೊಡ್ಡವರಂತಲ್ಲ
ದೊಡ್ಡವರಂತೆ ಆಡಲು, ಮಾಡಲು
ಕೇಡು ತಪ್ಪೋಲ್ಲ
ಮಕ್ಕಳು ಮಕ್ಕಳ ಹಾಗೇ ಇದ್ದರೆ
ದಡ್ಡರೇನಲ್ಲ
ದೊಡ್ಡವರಂತೆ ಆಡಿದ ಮಾತ್ರಕೆ
ಜಾಣರೇನಲ್ಲ

ವಿಶ್ವ : ನಮ್ಮಿಂದ ತಪ್ಪೇನೋ ಆಗಿ ಹೋಯ್ತು. ನಮ್ಮ ತಪ್ಪನ್ನು ತಿದ್ದಿಕೊಂಡು ಇನ್ನು ಮುಂದೆ ಸರಿಯಾಗಿದ್ದರೆ ಸರಿ. ತಪ್ಪು ಎಲ್ಲರೂ ಮಾಡ್ತಾರೆ. ಆದರೆ ಜಾಣರು ಮಾತ್ರ ಅದನ್ನು ತಿದ್ದಿಕೊಳ್ತಾರೆ.

ನಮ್ಮ ಗುರುಗಳು ಹೇಳ್ತಿರಲಿಲ್ಲವೇ?
ತಪ್ಪುಗಳನ್ನೆಲ್ಲ ನೀ ಒಪ್ಪಿಕೊಳ್ಳೋ
ನಮ್ಮಪ್ಪ ಕಾಯಬೇಕು ತಿಮ್ಮಪ್ಪ ಕಾಯೋ ಅಂತ

(ಎಲ್ಲರೂ ಮತ್ತೆ ಕುಣಿಯುತ್ತಾರೆ)

ತಪ್ಪೇ ಮಾಡದ ಮಾನವ ಇದ್ದರೆ
ಅವನೇ ದೇವರು
ಮಾಡಿದ ತಪ್ಪನು ಒಪ್ಪುತ ತಿಳಿಯಲು
ಅವರೇ ಜಾಣರು
ಮಕ್ಕಳು ಮಕ್ಕಳ ಹಾಗಿರಬೇಕು
ದೊಡ್ಡವರಂತಲ್ಲ
ದೊಡ್ಡವರಂತೆ ಆಡಲು, ಮಾಡಲು
ಕೇಡು ತಪ್ಪೋಲ್ಲ
ತಪ್ಪುಗಳನ್ನೆಲ್ಲ ನೀ ಒಪ್ಪಿಕೊಳ್ಳೋ
ನಮ್ಮಪ್ಪ ಕಾಯಬೇಕು ತಿಮ್ಮಪ್ಪ ಕಾಯೋ

(ನಿಧಾನವಾಗಿ ರಂಗದಲ್ಲಿ ಕತ್ತಲೆಯಾಗುತ್ತದೆ)